## ಶ್ರೀಸರ್ವಮೂಲ ಸಂದೇಶ

**ಹರಿರೇವ ಪರೋ ಹರಿರೇವ ಗುರುಃ ।**
**ಹರಿರೇವ ಜಗತ್‌ಪಿತೃಮಾತೃಗತಿಃ ॥**

ಶ್ರೀಹರಿಯೇ ಸರ್ವೋತ್ತಮ ಪರದೈವ. ಅವನೇ ಬ್ರಹ್ಮಾದಿ ಸಮಸ್ತ ಜೀವರಿಗೂ ಜ್ಞಾನವನ್ನು ನೀಡುವ ಮೊದಲನೆಯ ಗುರು. ಹರಿಯೇ ಸಮಸ್ತ ಜಗತ್ತನ್ನು ಸೃಷ್ಟಿಸಿ ರಕ್ಷಿಸುವ ತಂದೆ ತಾಯಿ ಹಾಗೂ ಕೊನೆಗೆ ಹೊಂದಬೇಕಾದ ಆಶ್ರಯ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–6 ವಿರೋಧಿ ಸಂ.॥ ವೈಶಾಖ–ಜ್ಯೇಷ್ಠಾ ಜೂನ್ 2009**

ಸಂಸ್ಥಾಪಕರು:
**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**
**ಶ್ರೀವಿದ್ಯಾಮಾನ್ಯ ಪ್ರಕಾಶನ**
ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)
ಶ್ರೀ ಪಲಿಮಾರು ಹೃಷೀಕೇಶಮಠ, ಉಡುಪಿ.

**www.palimarumatha.org**
**www.livepravachana.com**

**E-MAIL**
**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀವಿದ್ಯಾಧೀಶತೀರ್ಥರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 4 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 5 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 7 |
| **ಅವಲೋಕನ** | ಸಗ್ರಿ ರಾಘವೇಂದ್ರ ಉಪಾಧ್ಯಾಯ | 10 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 13 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 16 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 18 |
| **ಜೀವನಯಜ್ಞ** | ಶ್ರೀ ಸುನಂದಕೀ | 20 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ | 24 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 26 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 28 |
| **ಮಧ್ವ ಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 30 |
| **ಜ್ಯೌತಿಷ ಚಿಂತನೆ** | ಶ್ರೀ ಶ್ರೀಪತಿ ಉಪಾಧ್ಯಾಯ, ಕುಂಭಾಸಿ | 32 |
| **ವಿಷ್ಣುಪುರಾಣ** | ಸ್ಫೂರ್ತಿ | 35 |
| **ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ**–ಶ್ರೀ ಡಿ. ಗುರುಪ್ರಸಾದ್ ಭಟ್ | | 37 |
| **ವಿಜಯೀಂದ್ರರಿಗೆ ಮೂಲಪಾಠದ ಕಾಳಜಿ**–ಉಂಡಾರು ಶ್ರೀನಿವಾಸ ಆಚಾರ್ಯ | | 39 |
| **ವಸಂತೋತ್ಸವ ಸೌರಭ** | ಶ್ರೀ ರಾಘವೇಂದ್ರ ಮುಟ್ಲುಪಾಡಿ | 41 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 49 |



**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದಕ ಮಂಡಳಿ:**
ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು

ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು
ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಗುಣೈಃ ಗುಣಾನ್ ಉಪಾದತ್ತೇ ಯಥಾಕಾಲಂ ವಿಮುಂಚತಿ।**
**ನ ತೇಷು ಸಜ್ಜತೇ ಯೋಗೀ ಗೋಭಿಃ ಗಾಃ ಇವ ಗೋಪತಿಃ॥**

ಸೂರ್ಯನು ತನ್ನ ಕಿರಣಗಳಿಂದ ನೀರನ್ನು ಹೀರಿ ಯೋಗ್ಯವಾದ ಕಾಲದಲ್ಲಿ ಮಳೆಗೆರೆಯುವಂತೆ ಯೋಗಿಯೂ ಕೂಡ ತನ್ನ ಇಂದ್ರಿಯಗಳಿಂದ ವಿಷಯಗಳನ್ನು ಸ್ವೀಕರಿಸುತ್ತಾನೆ. ಹಾಗೇನೇ ಸಂದರ್ಭಕ್ಕನುಗುಣವಾಗಿ ಪರಿತ್ಯಜಿಸುತ್ತಾನೆ. ವಿಷಯಗಳಿಗೆ ಅಂಟಿಕೊಂಡಿರಲಾರ.

ಗುಣ ಎಂಬ ಶಬ್ದಕ್ಕೆ ಇಂದ್ರಿಯಗಳು ಎಂದು ಒಂದು ಅರ್ಥ(ಗುಣೈಃ=ಇಂದ್ರಿಯಗಳಿಂದ). ಗುಣ ಎಂಬ ಶಬ್ದಕ್ಕೆ ವಿಷಯಗಳು ಎಂದು ಮತ್ತೊಂದು ಅರ್ಥ. (ಗುಣಾನ್=ವಿಷಯಗಳನ್ನು) ಗೋ ಎಂಬ ಶಬ್ದಕ್ಕೆ ಕಿರಣಗಳು ಎಂದು ಒಂದು ಅರ್ಥ (ಗೋಭಿಃ ಕಿರಣಗಳಿಂದ) ಗೋ ಎಂಬುದಕ್ಕೆ ನೀರು ಎಂದು ಇನ್ನೊಂದು ಅರ್ಥ. (ಗಾಃ=ನೀರನ್ನು) ಗೋಪತಿಃ =ಕಿರಣಗಳಿಗೆ ಒಡೆಯನಾದ ಸೂರ್ಯ ಎಂದು ಅರ್ಥ.

ಅವಧೂತರಿಗೆ ಪ್ರಕೃತಿಯೇ ಪಾಠಶಾಲೆ. ಪ್ರಾಕೃತವಾದ ಪ್ರತಿಯೊಂದು ವಸ್ತುವೂ ಕೂಡ ಅವಧೂತರ ಪಾಲಿಗೆ ಶಿಕ್ಷಕರೇ ಸರಿ. ಪ್ರಕೃತಿಯಲ್ಲಿ ಘಟಕನಾದ ಸೂರ್ಯನೂ ಅವಧೂತರಿಗೆ ಶಿಕ್ಷಣೆಯನ್ನು ನೀಡಿದ ಗುರು. ಸೂರ್ಯನಿಂದ ಯೋಗ್ಯ ಜೀವನವನ್ನು ಅವಧೂತರು ಅಧ್ಯಯನ ಮಾಡಿದರು.

ಸೂರ್ಯನು ತನ್ನ ಕಿರಣಗಳ ಮೂಲಕ ಬೆಳಕು ಚೆಲ್ಲುವುದು ಅಷ್ಟೇ ಅಲ್ಲ. ಸೂರ್ಯನ ಪಾಲಿಗೆ ಕಿರಣಗಳು ಕರಗಳೂ ಹೌದು. ನಾವು ಹೇಗೆ ಕೈಯಿಂದ ಹಾನ–ಉಪಾದಾನಗಳನ್ನು ವ್ಯವಸ್ಥಿತವಾಗಿ ದೇಶಕಾಲಗಳಿಗೆ ಅನುಗುಣವಾಗಿ ನಡೆಸುತ್ತೇವೋ ಅದೇ ರೀತಿ ಸೂರ್ಯನಿಗೆ ಕಿರಣಗಳೇ ಕೈಗಳ ಸ್ಥಾನದಲ್ಲಿದ್ದು ಹಾನ–ಉಪದಾನಾದಿಗಳನ್ನು ಮಾಡಿಕೊಡುತ್ತವೆ. ಆದ್ದರಿಂದ ಸೂರ್ಯನು ಕಿರಣಗಳೆಂಬ ಕೈಗಳ ಮೂಲಕ ನೀರನ್ನು ಹೀರುತ್ತಾನೆ. ನೀರನ್ನು ಹೀರಿದ ಸೂರ್ಯ ತಾನೇ ಇಟ್ಟುಕೊಳ್ಳದೆ ತಾನು ಸಂಪಾದಿಸಿದ ನೀರನ್ನು ಚೆನ್ನಾಗಿ ಹಂಚುತ್ತಾನೆ.

ಯೋಗಿಗೆ ಸೂರ್ಯನು ಆದರ್ಶ. ಸೂರ್ಯನಂತೆ ಯೋಗಿಯೂ ಕೂಡ ಇಂದ್ರಿಯಗಳಿಂದ ಈ ಪ್ರಪಂಚವನ್ನು ಗ್ರಹಿಸುತ್ತಾನೆ. ತಾನು ತಿಳಿದ ವಿಷಯಗಳನ್ನು

ಹಾಗೇನೇ ಇನ್ನೊಬ್ಬರಿಗೆ ತಿಳಿಸುತ್ತಾನೆ.

ಸೂರ್ಯನು ಭೂಮಿಯಿಂದ ನೀರನ್ನು ಹೀರಿ ತನ್ನಲ್ಲಿ ಸಂಗ್ರಹಿಸಿಕೊಳ್ಳುತ್ತಾನೆ. ಅದರ ಮರುಕ್ಷಣದಲ್ಲೇ ಮಳೆಗರೆಯುವುದಿಲ್ಲ. ಮಳೆಗಾಲ ಬರಬೇಕು. ಮೇಘದಲ್ಲಿ ತಾನು ತುಂಬಿಸಿದ ನೀರನ್ನು ಧಾರಾಕಾರವಾಗಿ ಭೂಮಿಗೆ ಇಳಿಸುತ್ತಾನೆ. ಅದಕ್ಕೇ ಹೇಳಿದ್ದು "ಯಥಾಕಾಲಂ".

ಯೋಗಿಯೂ ಅಷ್ಟೇ. ಎಲ್ಲಿಂದಲೋ ವಿಷಯಗಳನ್ನು ಸಂಗ್ರಹಿಸಿರುತ್ತಾನೆ. ಇವತ್ತು ಗ್ರಹಿಸಿದ್ದನ್ನು ನಾಳೆಯೇ ಹೇಳಿ ಮುಗಿಸಬೇಕೆಂಬ ಚಾಪಲದವನಲ್ಲ. ಪ್ರಸಂಗಕ್ಕನುಗುಣವಾಗಿ ಮುತ್ತಿನಂತಹ ಮಾತು ಯೋಗಿ ಆಡುತ್ತಾನೆ. ಅವನ ಮಾತು "ಅವಸರ ಪಠಿತಾ ವಾಣೀ". ಹಾಗಾಗಿ ಅವನ ಮಾತು ತುಂಬ ಮೌಲಿಕ. ಎಲ್ಲರಿಗೂ ಅದು ಪಥ್ಯವಾಗಿ ಬಿಡುತ್ತದೆ. ಸಂದರ್ಭಕ್ಕೊಪ್ಪುವ ಮಾತು. ಆದ್ದರಿಂದಲೇ ಯೋಗಿಯ ನುಡಿ ಸರ್ವಮಾನ್ಯವಾಗಿ ಬಿಡುತ್ತದೆ. ತನ್ನ ಮಾತಿಗೆ ಬಣ್ಣಕೊಡಬೇಕಾದ ಅವಶ್ಯಕತೆ ಇಲ್ಲ. ಯೋಗಿಯ ಮಾತು ಬಣ್ಣದ ಮಾತಲ್ಲ. ನಮಗಾದರೆ ಗ್ರಹಿಸಿದ ವಿಷಯ ಇನ್ನೊಬ್ಬರಿಗೆ ಹೇಳದೇ ಹೋದರೆ ಹೊಟ್ಟೆ ಹುಣ್ಣಾದಂತೇ. ಕಾಲಕ್ಕನುಗುಣವಾದ ಮಾತಲ್ಲ ನಮ್ಮದು. ಯೋಗಿಯ ಮಾತು "ಯಥಾಕಾಲಂ".

ಸೂರ್ಯನು ಗಂಗೆಯ ಪರಿಶುದ್ಧವಾದ ನೀರನ್ನೂ ಹೀರುತ್ತಾನೆ. ನಮ್ಮ ಮನೆಯ ಬಚ್ಚಲಿನ ಹೊಲಸು ನೀರನ್ನೂ ಸ್ವೀಕರಿಸುತ್ತಾನೆ. ತುಂಗೆಯ ಮಧುರವಾದ ನೀರನ್ನು ಸ್ವೀಕರಿಸುತ್ತಾನೆ. ಸಮುದ್ರದ ಉಪ್ಪುನೀರನ್ನು ಸ್ವೀಕರಿಸುತ್ತಾನೆ. ಹಾಗಾಗಿ ಸೂರ್ಯನು ಸ್ವೀಕರಿಸುವ ನೀರು ಶುದ್ಧವಾದದ್ದೇ ಎಂಬ ನಿಯಮವೇನಿಲ್ಲ. ಆದರೆ ಸೂರ್ಯನು ವಾಪಸ್ಸು ನಮ್ಮ ಮೇಲೆ ಸುರಿಸುವ ನೀರಂತು ಪರಿಶುದ್ಧವೇ ಸರಿ. ಮಧುರವಾದ ನೀರನ್ನೇ ಮಳೆಗರೆಯುತ್ತಾನೆ. ಸೂರ್ಯನ ಔದಾರ್ಯ. ಕಶ್ಮಲ ನೀರನ್ನೂ ಮಧುರವಾಗಿ ಪರಿವರ್ತಿಸಿ ಸುರಿಸುವ ಸುಮಧುರ ಜೀವನ ಸೂರ್ಯನದ್ದು.

ಯೋಗಿಯೂ ಕೂಡ ಸತ್ವವೇ ಮೊದಲಾದ ತ್ರಿಗುಣಗಳ ಇಂದ್ರಿಯಗಳಿಂದ ಒಳ್ಳೆಯ ಹಾಗೂ ಕೆಟ್ಟ ಪದಾರ್ಥಗಳನ್ನು ಗ್ರಹಿಸಿದರೂ ಕೂಡ ಸತ್ಪಾತ್ರದಲ್ಲಿ ವಿತರಿಸುವಾಗ ಒಳ್ಳೆಯರೀತಿಯಲ್ಲಿ ಪರಿವರ್ತಿಸಿ ನೀಡುವ ಸ್ವಭಾವಯೋಗಿಯದ್ದು. ಪ್ರಪಂಚದ ಜೊತೆಗೆ ಅದರ ಸ್ರಷ್ಟಾರನಾದ ಭಗವಂತನನ್ನು ತಿಳಿಸಿಕೊಡುವ ಮೇರು ವ್ಯಕ್ತಿತ್ವ ಯೋಗಿಯದ್ದು. ಎಲ್ಲವನ್ನು ಗ್ರಹಿಸುತ್ತಾನೆ. ಯಾವುದಕ್ಕೂ ಅಂಟುವುದಿಲ್ಲ. ಸೂರ್ಯನು ಯೋಗಿಗೆ ಆದರ್ಶವಾದರೆ ಯೋಗಿ ನಮಗೆಲ್ಲಾ ಆದರ್ಶ. ★



# ಗೀತಾಮೃತ

-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಯುದ್ಧ ಮಾಡಿ ದುಃಖ ಅನುಭವಿಸುವುದಕ್ಕಿಂತ ಯುದ್ಧವನ್ನು ಮಾಡದೇನೇ ನಿರ್ದುಃಖರಾಗಿರುವುದೇ ಒಳ್ಳೆಯದು ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಈ ರೀತಿಯಾಗಿ ಸಮಾಧಾನವನ್ನು ಹೇಳುತ್ತಾನೆ. ಅಮೃತತ್ವಕ್ಕೆ ಕಾರಣವಾದುದು ಬ್ರಹ್ಮಜ್ಞಾನ. ಸ್ತ್ರೀಯರಾಗಲಿ ಪುರುಷರಾಗಲಿ ಮೋಕ್ಷವನ್ನು ಪಡೆಯಬೇಕಾದರೆ ಬ್ರಹ್ಮಜ್ಞಾನ ಅತ್ಯಗತ್ಯ. **ನಾನ್ಯಃ ಪಂಥಾ ಅಯನಾಯ ವಿದ್ಯತೇ** ಎಂಬುದಾಗಿ ತಿಳಿಸಿರುವಂತೆ ಬ್ರಹ್ಮಜ್ಞಾನ ಹೊರತಾದ ಇನ್ನೊಂದು ಮಾರ್ಗವಿಲ್ಲ. ಈ ಬ್ರಹ್ಮಜ್ಞಾನಕ್ಕೆ ಸಾಧನವಾದುದು ಅಂತಃಕರಣಶುದ್ಧಿ. ಅಂತಃಕರಣಶುದ್ಧಿಗೆ ಕಾರಣವಾದುದು ಸ್ವಧರ್ಮಾನುಷ್ಠಾನ. ಮೋಕ್ಷಸಾಧನವಾದ ಬ್ರಹ್ಮಜ್ಞಾನಕ್ಕೆ ಕಾರಣವಾದ ಅಂತಃಕರಣಶುದ್ಧಿಗೆ ಬೇಕಾದ ಸ್ವಧರ್ಮಾನುಷ್ಠಾನ ಮಾಡುವಾಗ ವಿಷಯ ಸಂಬಂಧರೂಪವಾದ ಚಿತ್ತವ್ಯತ್ಯಯ(ವ್ಯಥೆ) ಹೊಂದಬಾರದು. ದುಃಖ ನನಗೆ ಬೇಡ ಎಂದು ತಿಳಿದು ದುಃಖವನ್ನು ಹೇಗೆ ಬಿಡುತ್ತೇವೋ, ಅದೇ ರೀತಿ ವಿಷಯ ಸುಖವನ್ನು ಮೋಕ್ಷವಿರೋಧಿ ಎಂದು ತಿಳಿದುಕೊಂಡು, ವಿಷಯದ ಪ್ರಾಪ್ತಿ ಹಾಗೂ ವಿಷಯ ವಿಯೋಗಗಳಿಂದಾಗಿ ವ್ಯಥೆಯನ್ನು ಹೊಂದದೆ, ಸ್ವಧರ್ಮನಿಷ್ಠನಾಗಬೇಕು. ಅಂತಹ ಧೀರನಿಗೆ ಅಮೃತತ್ವ ಪ್ರಾಪ್ತಿ. ಕ್ಷತ್ರಿಯನಾದ ನಿನಗೆ ಸ್ವಹಿತಧರ್ಮವಾದುದು "ಯುದ್ಧ". ನೀನು ಸ್ವಧರ್ಮರತನಾಗಬೇಕಾದರೆ ಯುದ್ಧವನ್ನು ಮಾಡಲೇಬೇಕು. ಆ ಮೂಲಕವೇ ಅಮೃತತ್ವ ಪ್ರಾಪ್ತಿ. ಆದ್ದರಿಂದ ಯುದ್ಧಮಾಡಿ ಬಂದ ದುಃಖವನ್ನು ಅಭಿಮಾನತ್ಯಾಗದಿಂದ ಪರಿಹಾರಮಾಡಿಕೊಳ್ಳುವುದಕ್ಕಿಂತ ಯುದ್ಧವನ್ನು ಮಾಡದೇನೇ ಇರುವುದು ಯುಕ್ತವಲ್ಲವೇ? ಎಂಬ ನಿನ್ನ ಪ್ರಶ್ನೆ ಸಮಂಜಸವಲ್ಲ. ಅಭಿಮಾನ ತ್ಯಾಗದ ವಿಷಯದಲ್ಲಿ ಜನಕ ಮಹಾರಾಜನನ್ನು ನೆನಸಿಕೊಳ್ಳಬೇಕು. ಒಂದು ಸಲ ಶುಕ ಮಹರ್ಷಿಗಳಿಂದ ಜನಕ ಮಹಾರಾಜನು ತತ್ವೋಪದೇಶವನ್ನು ಸ್ವೀಕರಿಸುತ್ತಾ ಬ್ರಹ್ಮನಿಷ್ಠನಾಗಿರುವ ಕಾಲದಲ್ಲಿ ಮಿಥಿಲಾಪಟ್ಟಣವು ಬೆಂಕಿಯಿಂದ ಸುಟ್ಟು ಹೋಯಿತು. ಈ ವಿಷಯವನ್ನು ಅಮಾತ್ಯರು ಭೃತ್ಯರುಗಳು ಬಂದು ಮಹಾರಾಜನಲ್ಲಿ ತಿಳಿಸಿದಾಗ, ಜನಕನು ಯಾವುದೇ ವಿಕಾರಕ್ಕೆ ಒಳಗಾಗದೆ **"ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ"**. ಮಿಥಿಲಾಪಟ್ಟಣವು ಸುಟ್ಟು ಹೋದರೆ ನನ್ನದ್ದೇನು ಸುಡಲಿಲ್ಲ. ಮಿಥಿಲಾಪಟ್ಟಣವು ನನ್ನದ್ದಲ್ಲ. ಸಮಸ್ತವು ಸ್ವಾಮಿಯಾದ ಪರಮಾತ್ಮನದ್ದು.

(ಪುಟ 23ಕ್ಕೆ)

ಪ್ರವಚನ ಮಾಲಿಕೆ

ಭಾಗ–15

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹ: ಕೃಷ್ಣಾ

ಒಬ್ಬ ವ್ಯಕ್ತಿಗೆ ತಾಳ್ಮೆ ಎಂಬುದು ಬಹಳ ಅಗತ್ಯ. ತನ್ನ ಜೀವನದಲ್ಲಿ ಏನು ಬಂದರೂ ಸಹಿಸಿಕೊಂಡನಂತೆಂದರೆ ಅವನಿಗೆ ಕ್ಷೇಮ. ತಾಳ್ಮೆ ಇದ್ದಲ್ಲಿ ಜಗಳವಿರುವುದಿಲ್ಲ. **'ಅತೃಣೇ ಪತಿತಃ ವಹ್ನಿಃ ಸ್ವಯಮೇವ ಶಾಮ್ಯತಿ'** ಬೆಂಕಿ ದೊಡ್ಡದಾಗಿ ಉರಿಯುವುದು ಯಾವಾಗ? ಒಂದು ತರಗೆಲೆಗೆ ಬೆಂಕಿಕೊಟ್ಟು ಬೈಹುಲ್ಲಿನ ರಾಶಿಗೆ ಹಾಕಿದರೆ ಬೆಂಕಿ ದೊಡ್ಡದಾಗಿ ಉರಿಯುತ್ತದೆ. ಯಾಕೆಂದರೆ ಬೆಂಕಿಗೆ ಸಹಾಯಕವಾಗಿ ಬೈಹುಲ್ಲು ಬಂದು ಸೇರಿಕೊಂಡಿತು. ಅದೇ ಬೆಂಕಿಯನ್ನು ಬಂಡೆಕಲ್ಲಿನ ಮೇಲೆ ಹಾಕಿದರೆ, ತರಗೆಲೆ ಇರುವಷ್ಟು ಕಾಲ ಮಾತ್ರ ಬೆಂಕಿ ಇರುತ್ತದೆ. ನಂತರದಲ್ಲಿ ನಷ್ಟವಾಗುತ್ತದೆ. ಬೆಂಕಿಯನ್ನು ಇನ್ನಷ್ಟು ಉರಿಸಲು ಆ ಬಂಡೆಕಲ್ಲಿನಲ್ಲಿ ಸಹಾಯಕವಾಗುವಂತದ್ದು ಯಾವುದು ಇಲ್ಲ. ಧೃತರಾಷ್ಟ್ರ! ನೀನು ಮೊದಲಿಗೆ ತಾಳ್ಮೆ ತಂದುಕೋ. ನಮ್ಮ ಕೈಯಲ್ಲಿ ಶಾಂತಿ ಎಂಬ ಕತ್ತಿ ಇದ್ದರೆ ನಾವು ಯಾರನ್ನೂ ಸುಲಭವಾಗಿ ಸೋಲಿಸಬಹುದು. ಧೃತರಾಷ್ಟ್ರ! ಜನರು ನಿನ್ನನ್ನು ದುರ್ಬಲನೆಂದು ಎನ್ನಬಹುದು. ಆದರೂ ಜಗಳವಿರುವುದಿಲ್ಲ. ಮನುಷ್ಯನಿಗೆ ಅಗತ್ಯವಾಗಿ ಬೇಕಾದದ್ದು ಮಾನಸಿಕ ನೆಮ್ಮದಿ. ಇದು ಸಿಗಬೇಕಾದರೆ ಪ್ರತಿದಿವಸವೂ ಸರ್ವಮೂಲಗ್ರಂಥಕ್ಕೆ ನಾವು ಶಾಂತಿ ಪಾಠ ಹಾಕಬೇಕಂತೆ. ಜೀವನದಲ್ಲಿ ಮೂರು ರೀತಿಯಾದ ಸಮಸ್ಯೆಗಳು. ಅಂದರೆ ಆಧ್ಯಾತ್ಮಿಕ, ಆದಿಭೌತಿಕ, ಆದಿದೈವಿಕ–ಸಮಸ್ಯೆಗಳಿಂದ ಶಾಂತಿ ಸಿಗಬೇಕಾದರೆ, ಸರ್ವಮೂಲ (ಆನಂದತೀರ್ಥರ) ಗ್ರಂಥವನ್ನು ದೇವರ ಪ್ರತಿಮೆಯ ಮುಂದೆ ಬಿಡಿಸಿ, ಒಂದು ಶ್ಲೋಕ ಓದಿಕೊಂಡು **ಶಾಂತಿಃ ಶಾಂತಿಃ ಶಾಂತಿಃ** ಎಂದರೆ ಗಂಡಸರಿಗೆ ಶಾಂತಿ. ಹೆಣ್ಣು ಮಕ್ಕಳಿಗೆ ತಾಳಿ ಕಟ್ಟುವ ಮೂಲಕ ಶಾಂತಿ. ಹೀಗಿರುವಾಗ ಒಂದು ಮನೆಯಲ್ಲಿ ಶಾಂತ ವಾತಾವರಣ ತುಂಬುವುದು ಎಂದು ಧೃತರಾಷ್ಟ್ರನಿಗೆ ತಾಳ್ಮೆ ತಂದುಕೊಳ್ಳಲು ಹೇಳಿದನು.

ಒಂದು ಮನೆಯಲ್ಲಿ ನಾಲ್ಕು ರೀತಿ ಜನರಿರಬೇಕಂತೆ. ಇದನ್ನು ಧೃತರಾಷ್ಟ್ರನಿಗೆ ವಿದುರನು ಸ್ಪಷ್ಟವಾಗಿ ತಿಳಿಸುತ್ತಾನೆ. ಪಾಂಡವರನ್ನು ಕಾಡಿಗೆ ಅಟ್ಟಿದ ಮೇಲೆ, ಇನ್ನು ಏನು ಮಾಡುವುದು? ಎಂದು ವಿದುರನಲ್ಲಿ ವಿಚಾರಿಸಿದಾಗ ವಿದುರನು ಪಾಂಡವರನ್ನು ಕರೆದು ರಾಜ್ಯಕೊಡು ಎಂದು ಹೇಳಿದ್ದಕ್ಕೆ ವಿದುರನನ್ನು ಮನೆಯಿಂದ ಹೊರಗೆ ಅಟ್ಟಿಸಿದನು. ವಿದುರನಿಲ್ಲದೆ ಧೃತರಾಷ್ಟ್ರನು ಚಿಂತೆಗೊಳಗಾಗಿ ಮೂರ್ಛೆಗೊಳಗಾದನು. ಕೂಡಲೆ ಜನರನ್ನು ಕಳುಹಿಸಿ ವಿದುರನನ್ನು ಮನೆಗೆ ಕರೆತರಲಾಯಿತು. ತಮ್ಮ ಜೀವನದಲ್ಲಿ ತಿಳುವಳಿಕೆ ಇರುವವರನ್ನು ಹೊರಗೆ ಅಟ್ಟುವುದೇ ಧೃತರಾಷ್ಟ್ರರ ಕೆಲಸ. ಕೇವಲ ದೇಹವೆಂಬ ರಾಷ್ಟ್ರವನ್ನು

(40ನೇ ಪುಟಕ್ಕೆ)

ಉಪನಿಷತ್ ಚಿಂತನ

ಭಾಗ-32

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ

ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ

ಆರು ರೂಪಗಳಿಂದ ಶೀಕ್ಷಾಶಾಸ್ತ್ರದ ಪ್ರತಿಯೊಂದು ಆರು ನುಡಿಗಳು ತುಂಬಿಕೊಂಡಿವೆ. ಹೀಗೆ ಇದಕ್ಕೆ ಆದಿಭೌತಿಕ ಅರ್ಥ ಇದೆ. ಆಧ್ಯಾತ್ಮಿಕ ಅರ್ಥ ಇದೆ. ಆಧಿದೈವಿಕ ಅರ್ಥ ಇದೆ. ಅಲ್ಲದೆ ಅಧಿಯಜ್ಞ ಅರ್ಥವು ಇದೆ. ಕೃಷ್ಣನು ಅಧಿಯಜ್ಞದ ಅರ್ಥವನ್ನು ಗೀತೆಯಲ್ಲಿ ಹೇಳಿದ್ದಾನೆ. ನಮ್ಮೊಳಗೆ ಇರುವ ಭಗವಂತನ ಶಕ್ತಿಯೇ ಹೊರಗೆ ಎಲ್ಲಾ ಕಡೆ ತುಂಬಿಕೊಂಡಿದೆ. ಭಗವಂತ ನಮ್ಮ ಪಂಚೇಂದ್ರಿಯಗಳ ಮೂಲಕ ಪ್ರತಿನಿತ್ಯ ಯಜ್ಞವನ್ನು ನಡೆಸುತ್ತಾ ಇರುತ್ತಾನೆ. ಕಣ್ಣಿಗೆ ರೂಪದ ಸ್ಪರ್ಷವೇ ಯಜ್ಞ, ಕಿವಿಗೆ ಶಬ್ದದ ಸ್ಪರ್ಶವೇ ಯಜ್ಞ, ಇಂತಹ ಯಜ್ಞವನ್ನು ಮಾಡಿಸುವ ಪರಮಾತ್ಮ ಎಲ್ಲೆಡೆಯಲ್ಲಿಯೂ ತುಂಬಿಕೊಂಡಿದ್ದಾನೆ. ಇದನ್ನು ತಿಳಿದುಕೊಳ್ಳುವುದೇ ಅಧಿಯಜ್ಞದ ಅಭಿಪ್ರಾಯ. ಬಹಿರಂಗದ ಶೀಕ್ಷಾಶಾಸ್ತ್ರ ಮಾತ್ರ ಅಲ್ಲ. ಅಂತರಂಗದ ಶೀಕ್ಷಾಶಾಸ್ತ್ರವನ್ನು ಯಾವನು ತಿಳಿಯುತ್ತಾನೋ ಅವನು ಎಲ್ಲವನ್ನು ತಿಳಿದ ಎಂದು ಹೇಳಬಹುದು. ಇತಿ ಶೀಕ್ಷಾಧ್ಯಾಯ ಎಂದು ಮುಗಿಸುತ್ತಾರೆ. ಇತಿ ಎಂಬ ಶಬ್ದಕ್ಕೆ ಎರಡು ಅರ್ಥ ಇದೆ. ಇತಿ ಎಂದರೆ ಈ ರೀತಿಯಾಗಿ ಎಂಬ ಅರ್ಥ ಇದೆ. ಅಲ್ಲದೆ ಇತಿ ಎಂಬುದು ಸಮಾಪ್ತಿ ಸೂಚಕ ಶಬ್ದವೂ ಹೌದು. ಇದಕ್ಕೆ ಇನ್ನು ಒಂದು ಅಧ್ಯಾತ್ಮ ಅರ್ಥ ಇದೆ. 'ಇ'ಕಾರಕ್ಕೆ ಜ್ಞಾನ ಹಾಗೂ ಇಚ್ಚಾ ಎಂಬ ಅರ್ಥ ಇದೆ. 'ತ'ಕಾರ ಎಂಬುದು ಸಂತತಿ ವಾಚಕ ಶಬ್ದ. ಜ್ಞಾನ ಹಾಗೂ ಇಚ್ಚಾಪೂರ್ಣನಾದ ಭಗವಂತನನ್ನು ಹೇಳುವ ಶೀಕ್ಷಾಶಾಸ್ತ್ರ ಇಲ್ಲಿಗೆ ಮುಗಿಯಿತು ಎಂದು ಅರ್ಥ. ಅಷ್ಟೆ ಅಲ್ಲ. ಯಾವುದಕ್ಕೋಸ್ಕರ ಇದನ್ನು ಹೇಳಿದ್ದೇವೋ ಅದು ಮುಗಿಯಿತು. ಅರ್ಥಬ್ರಹ್ಮನನ್ನು ತಿಳಿಯಲಿಕ್ಕೋಸ್ಕರ ಶಬ್ದ ಬ್ರಹ್ಮನನ್ನು ಹೇಳಿದ್ದು ಮುಗಿಯಿತು. ಬರೇ ಶಬ್ದ ಬ್ರಹ್ಮದ ವಿವರಣೆ ಮುಗಿಯಿತು. ಅರ್ಥದ ಜ್ಞಾನಕ್ಕೆ ಬೇಕಾಗುವ ಸಾಮಗ್ರಿಯ ವಿವರಣೆ ಮುಗಿಯಿತು. ಅರ್ಥಬ್ರಹ್ಮಕ್ಕೆ ಪೋಷಕವಾಗಿ ಶಬ್ದ ಬ್ರಹ್ಮನನ್ನು ಹೇಳಿ ಮುಗಿಸಿದರು. ಈ ಬ್ರಹ್ಮನಿಂದ ಆ ಬ್ರಹ್ಮನ ಕಡೆ ತೆರಳಬೇಕು. ಶಬ್ದದ ಪ್ರಕರಣ ಇಲ್ಲಿಗೆ ಮುಗಿಯಿತು.

ಇನ್ನು ಅರ್ಥದ ಪ್ರಕರಣ ಪ್ರಾರಂಭ ಆಗುತ್ತದೆ. ಇಲ್ಲಿ ಪುನಃ ಮಂಗಲಾಚರಣೆ ಶ್ಲೋಕ ಇದೆ. ಶಬ್ದ ಶಾಸ್ತ್ರ ಕಲಿಯುವಾಗ ಹೇಗೆ ಮಂಗಲಾಚರಣೆ ಮಾಡಿದೆವೋ ಹಾಗೆಯೇ ಅರ್ಥ ಶಾಸ್ತ್ರ ಕಲಿಯುವಾಗ ಸಹ ಮಂಗಲಾಚರಣೆ ಶ್ಲೋಕ ಬೇಕು.

**ಸ ಹ ನೌ ಯಶಃ । ಸ ಹ ನೌ ಬ್ರಹ್ಮವರ್ಚಸಂ**

ಈ ಶ್ಲೋಕಕ್ಕೆ ಇದ್ದಕ್ಕಿದ್ದ ಹಾಗೆ ಕನ್ನಡಕ್ಕೆ ಭಾಷಾಂತರ ಮಾಡುವುದಾದರೆ ಹೀಗೆ ಅರ್ಥ ಬರುತ್ತದೆ. **ಸಹ** ಎಂದರೆ ಜೊತೆಯಾಗಿ, **ನೌ** ಎಂದರೆ ನಮಗೆ ನಮ್ಮಿಬ್ಬರಿಗೆ, **ಯಶಃ** ಕೀರ್ತಿಯನ್ನು ಕೊಡಲಿ **ನಮ್ಮಿಬ್ಬರಿಗೆ ಜೊತೆಯಾಗಿ ಯಶಸ್ಸನ್ನು ಕೊಡಲಿ. ನಮ್ಮಿಬ್ಬರಿಗೆ ಜೊತೆಯಾಗಿ ಬ್ರಹ್ಮವರ್ಚಸ್ಸನ್ನು ಕೊಡಲಿ.** ಇಬ್ಬರು ಎಂದರೆ ಯಾರು? ಇಬ್ಬರು ಎಂದರೆ ಗುರುಶಿಷ್ಯರು. ಗುರುಶಿಷ್ಯರಿಗೆ ಯಶಸ್ಸನ್ನು ಹಾಗೂ ಬ್ರಹ್ಮವರ್ಚಸ್ಸನ್ನೂ ಕೊಡಲಿ. ಒಬ್ಬ ಗುರುವಿಗೆ ಒಬ್ಬನೇ ಶಿಷ್ಯ ಇರಬೇಕೆಂದಿಲ್ಲ. ಹಲವಾರು ಶಿಷ್ಯರಿರಬಹುದು. ಹಾಗೆಯೇ ಒಬ್ಬ ಶಿಷ್ಯನಿಗೆ ಒಬ್ಬನೇ ಗುರು ಇರಬೇಕೆಂದಿಲ್ಲ. ಹಲವಾರು ಗುರುಗಳಲ್ಲಿ ಪಾಠ ಕಲಿತಿರಬಹುದು. ಗುರುಶಿಷ್ಯರಿಗೆ ಜೊತೆಯಾಗಿ ಕೀರ್ತಿ ಲಭಿಸಲಿ. ಕೇವಲ ಗುರುಶಿಷ್ಯರಿಗೆ ಮಾತ್ರ ಅಲ್ಲ. ನನಗೆ ಹೇಳಿಕೊಟ್ಟ ಗುರುಗಳ ಗುರುಗಳು, ಅವರ ಗುರುಗಳ ಗುರುಗಳು ಹೀಗೆ ಹಿಂದಕ್ಕೆ ಹೋದರೆ ಒಂದು ಗುರುವಿಗೆ ದೇವತೆಗಳೇ ಗುರುಗಳಾಗಿದ್ದರು. ಹೀಗೆ ಪಾಠ ಹೇಳಿಕೊಟ್ಟ ಎಲ್ಲಾ ದೇವತೆಗಳಿಗೂ ಸಹ ಜತೆಯಾಗಿ ಕೀರ್ತಿ ಲಭಿಸಲಿ. ಗುರುಶಿಷ್ಯರಿಗೆ ಬ್ರಹ್ಮವರ್ಚಸ್ಸು ಲಭಿಸಲಿ. ದೇವತೆಗಳು ಜೊತೆಯಾಗಿ ಬ್ರಹ್ಮವರ್ಚಸ್ಸನ್ನು ಕೊಡಲಿ. ಕೆಲವರು ಸಹ ಎಂಬುದು ಸ ಹಾಗೂ ವಿಸರ್ಗ (ಸಃ) ಎಂದು ಒಂದೇ ಶಬ್ದ ಎಂದು ಹೇಳುತ್ತಾರೆ. ಕೆಲವರು ಸ ಮತ್ತು ಹ ಎಂದು ಎರಡು ಅಕ್ಷರಗಳಿವೆ ಎಂದು ಹೇಳುತ್ತಾರೆ. ಹ ಎಂಬುದು ಪ್ರಸಿದ್ಧಿ ವಾಚಕ ಶಬ್ದ. ಸಹ ಎಂಬುದಕ್ಕೆ ಅವನು ಎಂದು ಅರ್ಥ ಮಾಡಿದರೆ, ಸಕಾರಕ್ಕೆ ಉದಾತ್ತ ಸ್ವರ ಹಾಕಬೇಕು. ಆದರೆ ಇಲ್ಲಿ ಸ ಕಾರಕ್ಕೆ ಅನುದಾತ್ತ ಸ್ವರ ಇದೆ. ಆದಕಾರಣ ಸಹ ಎಂಬುದೇ ಸರಿಯಾದ ಶಬ್ದ, ಇದರರ್ಥ ಜೊತೆಯಾಗಿ ಎಂದು. ಇದು ಅನುದಾತ್ತವಾಗಿದ್ದರೆ ಮಾತ್ರ ಅರ್ಥ ಸರಿಯಾಗುತ್ತದೆ. ಎಷ್ಟೋ ಸಲ ನಮ್ಮ ನಿಯಮವನ್ನು (ಪಾಣಿನಿವ್ಯಾಕರಣ) ಮೀರಿದ್ದು ವೇದದಲ್ಲಿ ಪ್ರಯೋಗ ಇದೆ. ಬ್ರಹ್ಮನಿಗೆ ಆಗುವಾಗ ಈ ಶ್ಲೋಕಕ್ಕೆ ಅರ್ಥ, ಬ್ರಹ್ಮ ಹಾಗೂ ಅವನ ಶಿಷ್ಯರಿಗೆ ಕೀರ್ತಿ ಸಿಗಲಿ ಎಂದು. ಭೃಗುವಿಗೆ ಆಗುವಾಗ ನನಗೆ ಹಾಗೂ ನನ್ನ ಗುರುಗಳಿಗೆ ಅಥವಾ ನನಗೆ ಹಾಗೂ ನನ್ನ ಶಿಷ್ಯರಿಗೆ ಎಂಬ ಅರ್ಥ. ಆಯಾಯಾ ಕಾಲದಲ್ಲಿ ನೌ ಶಬ್ದಕ್ಕೆ ಅರ್ಥ ಬದಲಾಗುತ್ತಾ ಹೋಗುತ್ತದೆ. ಯಶಃ ಎಂದರೆ ಯಶಸ್ಸು, ಕೀರ್ತಿ. ಬ್ರಹ್ಮವಿದ್ಯೆಯನ್ನು ಕಲಿಯಲಿಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಕೀರ್ತಿ ಸಿಗಲಿ ಎಂದು ಯಾಕೆ ಹೇಳುತ್ತಾರೆ? ಇಂತದೇ ಮಾತು ಮುಂದೆ ಉಪನಿಷತ್ತಿನಲ್ಲಿ ಪುನಃ ಬರುತ್ತದೆ.

(ಸಶೇಷ)

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಸ್ನಾನ ಸಂಧ್ಯಾ ಧ್ಯಾನ ಜಪ ತಪ**
**ದಾನ ಧರ್ಮ ಪರೋಪಕಾರ ವಿ**
**ಹೀನ ಜನ್ಮವದಳಿವುದಲ್ಲದೆ ಬೇರೆ ಗತಿಯುಂಟೆ?**
**ಏನು ಮಾಡಿದರೇನು ಮುಕ್ತಿ**
**ಜ್ಞಾನವಿಲ್ಲದೊಡಿಲ್ಲ ಭಕ್ತಿಗೆ**
**ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತ ॥೬೭॥**

ಸ್ನಾನ-ಸಂಧ್ಯಾವಂದನ-ಧ್ಯಾನ-ಜಪ-ತಪ-ದಾನ-ಧರ್ಮ-ಪರೋಪಕಾರಗಳಿಲ್ಲದ ಜನ್ಮ ಅದು ಸುಮ್ಮನೆ ಅಳಿಯುತ್ತದೆ ಅಲ್ಲದೆ ಅದರಿಂದ ಬೇರೆ ಪುರುಷಾರ್ಥ ಲಾಭ ಉಂಟೆ? ಜ್ಞಾನವಿಲ್ಲದೆ ಸ್ನಾನ ಸಂಧ್ಯಾದಿ ಪುಣ್ಯಕರ್ಮವನ್ನಾದರೂ ಏನು ಮಾಡಿದರೇನು ಫಲ? ಜ್ಞಾನವಿಲ್ಲದಿದ್ದರೆ ಮುಕ್ತಿ ಇಲ್ಲ. ಅದರಿಂದ ಮುಕ್ತಿಗೆ ಬೇಕಾಗುವ ಜ್ಞಾನಕ್ಕೆ ಭಕ್ತಿಗೆ ನೀನೇ ಕಾರಣನಾಗಿ ನಮ್ಮನ್ನು ಸದಾ ಕಾಪಾಡು.

## ಸ್ನಾನ ಸಂಧ್ಯಾ ಧ್ಯಾನ ಜಪ ತಪ ದಾನಧರ್ಮ ಪರೋಪಕಾರ ವಿಹೀನ

ಸ್ನಾನ-ಮೈತೊಳೆದುಕೊಂಡು ಶುಚಿಯಾಗಿರುವುದು. ಸಂಧ್ಯಾ-ಡಂಭಾಚಾರಕ್ಕಾದರೂ ಸಂಧ್ಯಾವಂದನೆ ಮಾಡುವುದು. ಧ್ಯಾನ-ಬೇರೆ ದೇವತೆಗಳನ್ನು ಧ್ಯಾನಿಸುವುದು. ಜಪ-ಅನ್ಯ ದೇವತಾಮಂತ್ರಗಳನ್ನು ಸದಾ ಜಪಿಸುವುದು. ತಪ-ಕೃಚ್ಛ್ರಚಾಂದ್ರಾಯಣ ಮುಂತಾದ ಕಠಿನ ವ್ರತಗಳನ್ನು ಕೈಗೊಳ್ಳುವುದು. ದಾನ ಧರ್ಮ ಪರೋಪಕಾರ-ಕೀರ್ತಿ ಪ್ರಶಂಸೆಗಳಿಗಾಗಿ ಸಮಾಜ ಸೇವೆ ಮಾಡಿ ಧರ್ಮಧುರೀಣ ಉದಾರಿ ಎನಿಸುವುದು. ಇವು ಯಾವುದನ್ನೂ ಮಾಡದೆ ಮಾನವ ಪಶುಗಳಂತೆ ಬದುಕಿದರೆ ಫಲವೇನು? ಅಂತ್ಯಕಾಲ ಬಂದಾಗ ಆ ಮಾನವ ಜನ್ಮ ಸುಮ್ಮನೆ ಅಳಿಯುವುದು. ಅದರಿಂದೇನೂ ಧ್ಯೇಯಸಾಧನೆ ಇಲ್ಲ. ಸುಮ್ಮನೆ ಬದುಕಿ ಏನು ಫಲ? ಬದುಕು ಶಾಶ್ವತವಲ್ಲ, ಬದುಕಿನಲ್ಲಿ ಸುಖವಿಲ್ಲ!

## ಜನ್ಮವದಳಿವುದಲ್ಲದೆ ಬೇರೆ ಗತಿಯುಂಟೆ?

ಮಾನವ ಜನ್ಮ ಸುಮ್ಮನೆ ಅಳಿಯುವುದೆಂದರೆ ಅದು ಉಚಿತವಲ್ಲ. ಅದಕ್ಕೆ ಅದರದೇ ಆದ ಒಂದು ಉದ್ದೇಶವಿದೆ. ಧ್ಯೇಯವಿದೆ. ಮೋಕ್ಷಸಾಧನೆ ಅದರ ಉದ್ದೇಶ. ಪ್ರಾಣಿ ಜನ್ಮಗಳಲ್ಲಿ ಅದು ಅಶಕ್ಯ. ಅದರಿಂದ ಮಾನವಜನ್ಮ ದೊಡ್ಡದು. ಅದು ಸುಮ್ಮನೆ ಅಳಿದರೆ, ಅದನ್ನು ಅಳಿಯಲು ಬಿಟ್ಟರೆ, ಅದರಿಂದ ನಮಗೆ ನಷ್ಟವೇ ಹೊರತು ಬೇರೆ ಗತಿಯುಂಟೆ?

## ಏನು ಮಾಡಿದರೇನು ಮುಕ್ತಿ ಜ್ಞಾನವಿಲ್ಲದೊಡಿಲ್ಲ

ಬದುಕು ಶಾಶ್ವತವಲ್ಲವೆಂದು ತಿಳಿದಾಗ ಮಾನವ ಪರಲೋಕ ಸಾಧನೆಯಲ್ಲಿ ತೊಡಗುತ್ತಾನೆ. ಸ್ನಾನ ಸಂಧ್ಯಾದಿ ಪುಣ್ಯಕರ್ಮ ಮಾಡುತ್ತಾನೆ. ಇಹದಲ್ಲಿ ಕೀರ್ತಿ ಪ್ರಶಂಸೆ ಅಧಿಕಾರ ಪದವಿಗಳಿಗಾಗಿಯಾದರೂ ದಾನಧರ್ಮ ಪರೋಪಕಾರಗಳನ್ನೂ ಮಾಡುತ್ತಾನೆ. ಪಶುಗಳಿಗಿಂತ ಮೇಲೆನಿಸುತ್ತಾನೆ. ಪಶುಗಳಿಗೆ ತಮ್ಮ ಬದುಕು ಶಾಶ್ವತವಲ್ಲ ಎಂಬ ಅರಿವಿರುವುದಿಲ್ಲ. ಮಾರಿ ಹಬ್ಬದ ಕುರಿ ತೋರಣದೆಲೆಗಳನ್ನು ಮೆಲ್ಲುತ್ತದೆ!

ಆದರೂ ಈ ಲೌಕಿಕ ಪದವಿ ಅಧಿಕಾರ ಪ್ರಶಂಸೆ ಕೀರ್ತಿಗಳಾಗಲಿ ಸ್ವರ್ಗಾದಿ ಪರಲೋಕಸುಖಗಳಾಗಲಿ ಯಾವುದೂ ಶಾಶ್ವತವಲ್ಲ. ಶಾಶ್ವತ ಸುಖವೆಂದರೆ ಮೋಕ್ಷಸುಖ ಒಂದೇ. ಅದಕ್ಕೆ ಮುಕ್ತಿಯನ್ನೇ ಪಡೆಯಬೇಕು. ಮುಕ್ತಿ ನೀಡುವವನು ಮುಕುಂದ. ಅವನೊಲಿಮೆಯನ್ನು ಸಂಪಾದಿಸುವುದೊಂದೇ ಮಾನವ ಜನ್ಮದ ಮುಖ್ಯ ಉದ್ದೇಶ.

ಮುಕುಂದನೊಲಿಯುವುದು ಜ್ಞಾನಕ್ಕೆ, ಭಕ್ತಿಗೆ ಹೊರತು ಲೌಕಿಕ–ಪಾರತ್ರಿಕ ಸುಖದಾಸೆಗಳಿಂದ ತುಂಬಿದ ಸ್ನಾನಧ್ಯಾನಾದಿಕರ್ಮಗಳಿಗಲ್ಲ.

ಜ್ಞಾನವಿಲ್ಲದೆ ಕುರುಡು ಭಕ್ತಿಯಿಂದ, ಲೌಕಿಕ–ಪಾರತ್ರಿಕ ಸುಖದಾಸೆಯಿಂದಲೇ ಮುಕುಂದನ ಆರಾಧನ ಮಾಡಿದರೂ ಅವನು ಒಲಿಯುತ್ತಾನೆ, ಒಲಿದು ಆ ಸುಖಗಳನ್ನು ನೀಡುತ್ತಾನೆ, ನಿಜ. ಆದರೆ ಆ ಸುಖಗಳನ್ನು ಮಾತ್ರ ನೀಡುತ್ತಾನೆ ಹೊರತು ಮೋಕ್ಷವನ್ನು ನೀಡುವುದಿಲ್ಲ. ಮೋಕ್ಷಸಾಧನೆಗಾಗಿ ಅವನನ್ನು ಅರಿತು ಆರಾಧಿಸಿದಾಗ ಅವನೊಲಿದು ಮೋಕ್ಷವನ್ನೂ ನೀಡುತ್ತಾನೆ. ಜೊತೆಗೇ ಲೌಕಿಕ ಪಾರತ್ರಿಕ ಸುಖಸಂಪತ್ತುಗಳನ್ನೂ ನೀಡುತ್ತಾನೆ. ಅದರಿಂದ ಜ್ಞಾನವಿಲ್ಲದೆ ಮುಕ್ತಿ ಇಲ್ಲ.

ಜ್ಞಾನಪೂರ್ವಕ ಕರ್ಮವೆಂದರೆ ಹೀಗೆ–ಸ್ನಾನಕ್ಕೆ ನೀರಿನಲ್ಲಿ ಭಾಗೀರಥೀ ಮುಂತಾದ ಮೂರುವರೆಕೋಟಿ ತೀರ್ಥಾಭಿಮಾನಿ ದೇವತಾ ಸಾನ್ನಿಧ್ಯವನ್ನು ಚಿಂತಿಸಬೇಕು.

ಅಶ್ವತ್ಥನಾರಾಯಣ ತುಲಸಿ ವಿಷ್ಣು ವೈಷ್ಣವರ ಸನ್ನಿಧಿಯಲ್ಲಿ ಶರೀರ ಶುದ್ಧಿ ಅಂತಃಕರಣ ಶುದ್ಧಿಗಳನ್ನು ಉದ್ದೇಶಿಸಿ ದೇಶಕಾಲ ಸಂಕೀರ್ತನಪೂರ್ವಕ ಸಂಕಲ್ಪಮಾಡಿ ತಣ್ಣೀರುಸ್ನಾನ ಮಾಡಬೇಕು. ಜೊತೆಗೆ, ಶರೀರದಲ್ಲಿ ಎಡಭಾಗದ ಇಡಾನಾಡಿಯಲ್ಲಿ ಗಂಗೆ, ಬಲಭಾಗದ ಪಿಂಗಲಾನಾಡಿಯಲ್ಲಿ ಯಮುನೆ, ನಡುವಿನ ಸುಷುಮ್ನಾನಾಡಿಯಲ್ಲಿ ಸರಸ್ವತಿಯರನ್ನು ಚಿಂತಿಸಬೇಕು. ಶಿರದಲ್ಲಿ ತಾವರೆಗಣ್ಣಿನ ಶ್ರೀವಾಸುದೇವನ ಪಾದಕಮಲದಿಂದ ಗಂಗೆ ಹರಿದು ಶರೀರವನ್ನು ತೊಯ್ದು ಒಳಗಿನ ಮಲವನ್ನು ಶುದ್ಧೀಕರಿಸುವಳೆಂದೂ ಚಿಂತಿಸಬೇಕು. ಮೂರು ಸಂಧ್ಯೆಗಳಲ್ಲಿ ಸೂರ್ಯಮಂಡಲಾಂತರ್ಗತ ಮುಖ್ಯಪ್ರಾಣಾಂತರ್ಗತ ಸವಿತೃನಾಮಕ ಶ್ರೀನಾರಾಯಣನನ್ನು ಗಾಯತ್ರೀ ಮಂತ್ರದಿಂದ ಧ್ಯಾನಿಸುತ್ತ ಅರ್ಘ್ಯ ನೀಡಬೇಕು, ಜಪಿಸಬೇಕು. ಮಿತ್ರ ಸವಿತೃ ವರುಣರನ್ನು ಮೂರು ಸಂಧ್ಯೆಗಳಲ್ಲಿ ಕ್ರಮವಾಗಿ ಸ್ತುತಿಸಿ ಎಲ್ಲ ದಿಕ್ಪಾಲಕರನ್ನು ನಮಿಸಿ ಎಲ್ಲರೊಳಗಿರುವ ಕೇಶವನಿಗೆ ಈ ಸಂಧ್ಯಾವಂದನೆಯನ್ನು ಅರ್ಪಿಸಬೇಕು. ನಾರಾಯಣಾಷ್ಟಾಕ್ಷರ ಕೃಷ್ಣಷಡಕ್ಷರ ಮುಂತಾದ ಮಂತ್ರಗಳಿಂದ ಹೃದಯದಲ್ಲಿ ಬಿಂಬಮೂರ್ತಿಯನ್ನು ಧ್ಯಾನಿಸಬೇಕು. ವಿಷ್ಣು ಸಹಸ್ರನಾಮ ಸ್ತೋತ್ರ ಮಂತ್ರವನ್ನು ಮೂರೂ ಹೊತ್ತು ಜಪಿಸಬೇಕು. ಏಕಾದಶ್ಯಾದಿ ವ್ರತಾನುಷ್ಠಾನ ಮಧ್ವಶಾಸ್ತ್ರ ಶ್ರವಣಾದಿ ತಪಸ್ಸನ್ನು ಆಚರಿಸಬೇಕು. ಪಂಚಯಜ್ಞರೂಪವಾಗಿ ಯಥಾಶಕ್ತಿ ಅನ್ನಾದಿ ದಾನ ಮಾಡಬೇಕು. ಸತ್ಯ ಅಹಿಂಸೆ ಮುಂತಾದ ಧರ್ಮಗಳನ್ನು ಆಚರಿಸಬೇಕು. ಎಲ್ಲ ಪ್ರಾಣಿ ಪಶುಗಳಲ್ಲಿಯೂ ಮಾನವರಲ್ಲಿಯೂ ಭಗವಂತನನ್ನು ಕಂಡು ಅವರಿಗೆ ಸದಾ ಉಪಕಾರ ಮಾಡಬೇಕು.

## ಭಕ್ತಿಗೆ ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತ

'ಮುಕ್ತಿ ಜ್ಞಾನವಿಲ್ಲದೊಡಿಲ್ಲ' ಎಂದ ಮಾತ್ರಕ್ಕೆ ಶುಷ್ಕವಾದ ಜ್ಞಾನದಿಂದಲೇ ಮುಕ್ತಿ ಎಂದು ತಿಳಿಯಬಾರದು. ಜ್ಞಾನವು ಭಕ್ತಿರಸದೊಂದಿಗೆ ಮಿಳಿತವಾಗಿರಬೇಕು. ಭಕ್ತಿ ಎಂದರೆ ಹಿರಿಯರಲ್ಲಿ ಮಾಡುವ ಪ್ರೀತಿ. ಹಿರಿಯರಲ್ಲಿರುವ ಹಿರಿತನವನ್ನು ಅರಿಯುವುದೇ ಜ್ಞಾನ. ಅಂತು ಪ್ರೀತಿ ಮಾಡಿದರೆ ಅದು ಭಕ್ತಿ ಎನಿಸುವುದು. ಅದಕ್ಕೆ ಭಗವಂತನ ದಯೆ ಬೇಕು. ಅವನು ದಯದಿಂದ ಅಂತರಂಗದಲ್ಲಿ ದರ್ಶನವಿತ್ತರೆ ಅರಿವು, ಅರಿವಿನಿಂದ ಪ್ರೀತಿ, ಭಕ್ತಿ, ಮುಕ್ತಿ. ಅದರಿಂದ ದಾಸರು ಹೇಳುತ್ತಾರೆ. 'ಭಕ್ತಿಗೆ ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತ'.

(ಮುಂದುವರೆಯುತ್ತದೆ........)

ಅವಲೋಕನ

# ಶ್ರೀಮಧ್ವರ ನಿರ್ಣಯದ ಬೆಳಕಿನಡಿ

## ಶ್ರೀರಾಮನ ಸತ್ಯಧರ್ಮ ಪರಾಯಣತೆ

–ಸಗ್ರಿ ರಾಘವೇಂದ್ರ ಉಪಾಧ್ಯಾಯ

ಶ್ರೀ ರಾಮಚಂದ್ರ ತನ್ನ ತಂದೆ ದಶರಥ ಕೈಕೇಯಿಗೆ ವರಗಳ ರೂಪದಲ್ಲಿ ಕೊಟ್ಟ ಮಾತನ್ನು ಸತ್ಯವನ್ನಾಗಿಸುವುದಕ್ಕಾಗಿ ರಾಜ್ಯಾಧಿಕಾರವನ್ನು ಬಿಟ್ಟು ಅರಣ್ಯಕ್ಕೆ ತೆರಳಿದ ಮಹಾತ್ಮಾ ಎಂದು ಕೊಂಡಾಡಲಾಗುವುದು.

### ತತ್ಸತ್ಯಮಿತಿ ನಿಶ್ಚಯಃ

ಆದರೆ ರಾಮಚಂದ್ರನ ಈ ಪ್ರವೃತ್ತಿ ಶಾಸ್ತ್ರೀಯದೃಷ್ಟಿಯಿಂದ ಎಷ್ಟು ಸಮಂಜಸ ಎಂಬುದು ವಿಚಾರಣೀಯ. ರಾಮನದ್ದೇ ಮತ್ತೊಂದು ರೂಪನಾದ ಶ್ರೀಕೃಷ್ಣ ಬಹಳ ಸಂಕೀರ್ಣಾರ್ಥದ ಸತ್ಯದ ಸ್ವರೂಪವನ್ನು ಹೀಗೆ ಸ್ಪಷ್ಟಪಡಿಸಿರುವನು.

**ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।**
**ಯತ್ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ನಿಶ್ಚಯಃ**

**–ಮ.ಭಾರ.ತಾ.ನಿ.27–119**

ಈ ಶ್ಲೋಕದ ಪೂರ್ವಾರ್ಧದಲ್ಲಿ ಸಜ್ಜನರನ್ನೂ, ಸಜ್ಜನರಲ್ಲಿಯ ಸಜ್ಜನಿಕೆಯ ತಾರತಮ್ಯವನ್ನೂ ಗುರುತಿಸುವುದು ಕಷ್ಟಸಾಧ್ಯವಾದುದರಿಂದ ಸತ್ಯಾಸತ್ಯದ ವಿವೇಚನೆ ತುಂಬ ದುಷ್ಕರವಾದುದೆಂದು ಒಪ್ಪಿಕೊಂಡ ಶ್ರೀಕೃಷ್ಣ ಸಜ್ಜನರಿಗೆ ಅತ್ಯಂತ ಹಿತವಾದುದೇ ಸತ್ಯ ಎಂದು ಸತ್ಯದ ಸಾಮಾನ್ಯ ಲಕ್ಷಣವನ್ನು ಉದ್ಘೋಷಿಸಿರುವನು.

ಹೀಗೆ ಶ್ರೀಕೃಷ್ಣ ಪ್ರಸ್ತುತಪಡಿಸದ ಸತ್ಯದ ಲಕ್ಷಣಕ್ಕನುಗುಣವಾಗಿ ರಾಮಚಂದ್ರ ಎಷ್ಟರಮಟ್ಟಿಗೆ ಸತ್ಯವನ್ನು ಪಾಲಿಸಿದಂತಾಗುವುದು? ಶ್ರೀರಾಮಚಂದ್ರ ಆ ವರರೂಪದ ಪಿತೃವಾಕ್ಯ ಸುಳ್ಳಾಗದೆ ಸತ್ಯವೆನಿಸುವಂತೆ ಮಾಡಿದ್ದರಿಂದ ದಶರಥ, ಕೌಸಲ್ಯೆಯರಿಂದ ಆರಂಭಿಸಿ ಅಯೋಧ್ಯೆಯ ಎಲ್ಲ ಸಜ್ಜನರೂ ದುಃಖಕ್ಕೆ ಒಳಗಾಗಿದ್ದರು. ಅರ್ಥಾತ್ ರಾಮನ ಆ ಪ್ರವೃತ್ತಿ ಅಯೋಧ್ಯೆಯ ಆ ಸಜ್ಜನರಿಗೆಲ್ಲ ಅಪ್ರಿಯವೆನಿಸಿರುವುದರಿಂದ ಅದು ಸತ್ಯವೆನಿಸುವುದಾದರೂ ಹೇಗೆ? ಹಾಗಾದರೆ ರಾಮಚಂದ್ರ ನಡೆಸಿದ್ದು ಮೇಲ್ನೋಟಕ್ಕೆ ಸತ್ಯದ ಬಣ್ಣ ಬಳಿದ ಅಸತ್ಯವನ್ನೇ ತಾನೇ?

## ತ್ರಿದಶಮುನಿಕೃತೇ ಏವ

ಒಂದು ವೇಳೆ ರಾಮಚಂದ್ರ ಸಾಮಾನ್ಯವಾಗಿ ಭಾವಿಸುವಂತೆ ದಶರಥ ಕೊಟ್ಟ ವರಗಳನ್ನು ಸತ್ಯಗಳನ್ನಾಗಿಸುವುದಕ್ಕಾಗಿಯಷ್ಟೇ ಅರಣ್ಯಕ್ಕೆ ತೆರಳಿದ್ದರೆ ಅದು ಖಂಡಿತಾ ಸತ್ಯವೆನಿಸುತ್ತಿರಲಿಲ್ಲ.

ಆದರೆ ರಾಮಚಂದ್ರ ಅರಣ್ಯವನ್ನು ಪ್ರವೇಶಿಸಿದುದರ ನಿಜವಾದ ಉದ್ದೇಶವನ್ನು ಶ್ರೀಮಧ್ವರು ಹೀಗೆ ಸ್ಪಷ್ಟಪಡಿಸಿರುವರು.

**'....ರಾಮಸ್ತದ್ಗೌರವೇಣ ತ್ರಿದಶಮುನಿಕೃತೇಽರಣ್ಯಮಮೇವಾವಿವೇಶ'** (ಮ.ಭಾ.ತಾ.ನಿ.5–3) ಶ್ರೀರಾಮಚಂದ್ರನು ತಂದೆ ದಶರಥನ ಮಾತಿನ ಕುರಿತಾದ ಗೌರವವನ್ನು ಉಪಲಕ್ಷಣವಾಗಿಟ್ಟುಕೊಂಡು ಮುಖ್ಯವಾಗಿ ದೇವತೆಗಳಿಗೂ, ಮುನಿಗಳಿಗೂ ಶ್ರೇಯಸ್ಸಾಗಬೇಕೆಂದೇ ಅರಣ್ಯವನ್ನು ಪ್ರವೇಶಿಸಿದನು. **'ಅರಣ್ಯಮೇವ'** ಎಂಬಲ್ಲಿಯ ಏವಕಾರದ ಅನ್ವಯವನ್ನು **'ತ್ರಿದಶಮುನಿಕೃತೇ'**– ಎಂಬ ಶಬ್ದದ ಬಳಿಕ ಇಟ್ಟುಕೊಂಡಲ್ಲಿ ದೇವತೆಗಳಿಗಾಗಿ ಮುನಿಗಳಿಗಾಗಿ ರಾಮಚಂದ್ರ ಅರಣ್ಯವನ್ನು ಹೊಕ್ಕನೇ ಹೊರತು ಸಾಮಾನ್ಯವಾಗಿ ಭಾವಿಸುವಂತೆ ದಶರಥನ ಮಾತನ್ನು ಸತ್ಯಗೊಳಿಸುವುದಕ್ಕಾಗಿ ಅಲ್ಲ ಎಂಬ ಅಭಿಪ್ರಾಯ ಹೊರಡುವುದು.

## ವರದ ಏಕದೇಶದ ಉಲ್ಲಂಘನೆ

ಕೈಕೇಯಿಯ ವರದಲ್ಲಿ **'ವನೇ ವಸ ತ್ವಂ ತಪಸಾ....'** (ಸಂ ರಾ. ಅಯೋಧ್ಯಾ 4–37) ರಾಮಚಂದ್ರ ಹದಿನಾಲ್ಕು ವರ್ಷಕಾಲ ಕಾಡಿನಲ್ಲಿ ತಪಸ್ವಿವೃತ್ತಿಯಲ್ಲಿ ಇರಬೇಕೆಂಬುದರ ಉಲ್ಲೇಖವೂ ಇತ್ತು. ಆದರೆ ರಾಮಚಂದ್ರ ಬಿಲ್ಲುಬಾಣಾದಿಗಳನ್ನು ಧರಿಸುವ ಮೂಲಕ ಆ ಅಂಶವನ್ನು ಉಲ್ಲಂಘಿಸಿರುವನು. ವಾಲ್ಮೀಕಿರಾಮಾಯಣದಲ್ಲಿ ಉಲ್ಲೇಖಗೊಂಡಂತೆ (ಅರಣ್ಯಕಾಂಡ 9–27) ರಾಮನ ಶಸ್ತ್ರಧಾರಣೆಯ ವಿಷಯದಲ್ಲಿ ಸೀತಾದೇವಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದು ರಾಮಚಂದ್ರ ಅದಕ್ಕೆ ಋಷಿಗಳ ರಕ್ಷಣೆಗಾಗಿ ತಾನು ಆಯುಧಗಳನ್ನು ಧರಿಸಿರುವುದೆಂದು (ಅರಣ್ಯಕಾಂಡ 10–19) ಸಮರ್ಥಿಸುವನು ಕೂಡಾ. ಇದರಿಂದ ಸ್ಪಷ್ಟವಾಗುವ ಅಂಶ ರಾಮಚಂದ್ರ ದಶರಥನ ವರಗಳನ್ನು ಪಾಲಿಸುವುದಕ್ಕಿಂತಲೂ ಕಾಡಿನಲ್ಲಿ ಋಷಿಗಳ ರಕ್ಷಣೆಗೇ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದನೆಂಬುದು. ಇದನ್ನೇ ಮಧ್ವಗುರುಗಳು **'ತ್ರಿದಶಮುನಿಮೃತೇ ಏವ ಅರಣ್ಯಂ ಆವಿವೇಶ'** ಎಂದು ನಿರ್ಣಯಿಸಿದ್ದು. ಅಯೋಧ್ಯೆಯ ಪ್ರಜೆಗಳು, ದಶರಥ ಮುಂತಾದವರು ಸಜ್ಜನರು ಹೌದು. ಆದರೆ ದೇವತೆಗಳು, ಋಷಿಗಳು ಅವರಿಗಿಂತಲೂ ಅಧಿಕವಾಗಿ ಸಜ್ಜನರು. ಆದುದರಿಂದ ದಶರಥಾದಿ ಸಜ್ಜನರಿಗೆ ಅಹಿತ ಆಗುವುದಾದರೂ ಅವರಿಗಿಂತಲೂ ಅಧಿಕವಾಗಿ ಸಜ್ಜನರಾದ ದೇವತೆಗಳು, ಋಷಿಗಳು ಇವರಿಗೆ ಹಿತವಾಗುವುದೆಂಬ ಆಶಯದಲ್ಲಿ ಶ್ರೀರಾಮಚಂದ್ರ ಅರಣ್ಯವನ್ನು ಪ್ರವೇಶಿಸಿದ. ಆ ಮೂಲಕ **'ಯತ್ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ನಿಶ್ಚಯಃ'** ಎಂಬ ಶ್ರೀಕೃಷ್ಣನ ಸತ್ಯದ

ಪರಿಷ್ಕಾರಕ್ಕೆ ಪ್ರಾಶಸ್ತ್ಯ ನೀಡಿದಂತಾಗಿದೆ.

ಅಂತೆಯೇ **'ಗುರೂನಹತ್ವಾ ಹಿ ಮಹಾನುಭಾವಾನ್ ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ'**–ಗುರುಗಳನ್ನು ಯುದ್ಧದಲ್ಲಿ ಕೊಲ್ಲುವುದಕ್ಕಿಂತ ಭಿಕ್ಷೆ ಬೇಡಿ ಬದುಕುವುದೇ ಶ್ರೇಯಸ್ಕರ ಎಂದ ಅರ್ಜುನನಿಗೆ **'ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್'** ಸ್ವಧರ್ಮದಲ್ಲಿ ಸ್ವಲ್ಪ ಲೋಪದೋಷ ಸಂಭವಿಸುವುದಾದರೂ ಅವನ್ನು ಆಚರಿಸುವುದೇ ಶ್ರೇಯಸ್ಕರ ಎಂದು ಕೃಷ್ಣ ರೂಪದಲ್ಲಿ ಉಪದೇಶಿಸಿದ ಭಗವಂತ ತನ್ನ ರಾಮರೂಪದಲ್ಲಿ ಕ್ಷತ್ರಿಯನಾದ ತಾನು 'ದಾನಮೀಶ್ವರಭಾವಶ್ಚ....' (ಗೀ.18–43) ಎಂದಿರುವಂತೆ ರಾಜನಾಗಿ ಆಡಳಿತ ನಡೆಸುವ ಸ್ವಧರ್ಮವನ್ನು ತ್ಯಜಿಸಿ ತಂದೆಯ ಮಾತನ್ನು ಸತ್ಯವನ್ನಾಗಿಸುವ ನೆಪಹೂಡಿ ಅರಣ್ಯಕ್ಕೆ ಹೋದುದು ಎಷ್ಟು ಸಮಂಜಸ? –ಎಂಬ ಪ್ರಶ್ನೆಗೂ ಆಚಾರ್ಯರ **'ತ್ರಿದಶಮುನಿಕೃತೇಽರಣ್ಯಮೇವಾವಿವೇಶ'**– ಎಂಬ ನಿರ್ಣಯವೇ ಸಮಾಧಾನವನ್ನು ನೀಡಬಲ್ಲದು. ರಾಮಚಂದ್ರ ರಾಜನಾಗಿ ಸಿಂಹಾಸನದಲ್ಲಿ ರಾರಾಜಿಸುತ್ತಿದ್ದರೆ ಕಾಡಿನಲ್ಲಿದ್ದ ಋಷಿಗಳಿಗೆ ದುಷ್ಟ ಸಂಹಾರದ ಮೂಲಕ ಸಾಧನಾನುಷ್ಠಾನಕ್ಕೆ ಸರಿಯಾದ ರಕ್ಷಣೆಯನ್ನು ನೀಡಲು ಆಗುತ್ತಿದ್ದಿಲ್ಲ. ಅದಕ್ಕಾಗಿಯೇ ಶ್ರೀರಾಮ ಅರಣ್ಯಕ್ಕೆ ತೆರಳಿದ್ದು ಹೊರತು ದಶರಥನ ಮಾತನ್ನು ಉಳಿಸುವುದಕ್ಕಾಗಿ ಅಲ್ಲ. ಅಷ್ಟೇ ಉದ್ದೇಶವಾಗಿದ್ದರೆ ಅದು ಅಧರ್ಮವೇ ಆಗುತ್ತಿತ್ತು. **'ಯಸ್ಸತಾಂ ಧಾರಕೋನಿತ್ಯಂ ಸ ಧರ್ಮ ಇತಿ ನಿಶ್ಚಯಃ'** (ಮ.ಭಾರ. ಶಾ.ನಿ. 27–120) ಎಂದು ಶ್ರೀಕೃಷ್ಣ ಪ್ರಸ್ತುತ ಪಡಿಸಿರುವಂತೆ ಸಜ್ಜನರಿಗೆ ಧಾರಕವಾಗಿರುವಂತಹದ್ದೇ ಧರ್ಮ ಎಂದ ಮೇಲೆ ರಾಮಕಾಡಿಗೆ ಹೋಗದೆ ಅಯೋಧ್ಯೆಯಲ್ಲಿ ಸಿಂಹಾಸನವನ್ನು ಏರಿ ರಾಜನಾಗಿ ಪ್ರಜೆಗಳನ್ನು ರಕ್ಷಿಸುವುದೇ ಅಯೋಧ್ಯೆಯ ಪ್ರಜೆಗಳೇ ಮುಂತಾದ ಸಜ್ಜನರಿಗೆ ಧಾರಕವಾಗಿ ಧರ್ಮ ಎನಿಸುತ್ತಿತ್ತು. ಇದಕ್ಕೆ ವಿರುದ್ಧವಾದುದರಿಂದ ಅರಣ್ಯಕ್ಕೆ ತೆರಳಿರುವುದು ಅಧರ್ಮ ಆಗುತ್ತಿತ್ತು. ಆದರೆ ಅಯೋಧ್ಯೆಯ ಪ್ರಜೆಗಳೇ ಮುಂತಾದವರಿಗಿಂತಲೂ ಅಧಿಕವಾಗಿ ಸಜ್ಜನರೆನಿಸಿರುವ ದೇವತೆಗಳು, ಋಷಿಗಳು ಇವರ ಧಾರಣೆಗೆ ಪೋಷಕವಾಗುವಂತೆ ಶ್ರೀರಾಮಚಂದ್ರ ಅರಣ್ಯಕ್ಕೆ ಹೋದುದು ಧರ್ಮ ಎನಿಸುವುದು.

## ಮಧ್ವಗುರುಗಳ ನಿರ್ಣಯದಡಿ

ಹೀಗೆ ಶ್ರೀಮಧ್ವಗುರುಗಳು ಶ್ರೀರಾಮಚಂದ್ರ ಅರಣ್ಯಕ್ಕೆ ತೆರಳಿರುವುದರ ಉದ್ದೇಶವನ್ನು ಸ್ಪಷ್ಟಪಡಿಸಿರುವುದರಿಂದಲೂ, ಶ್ರೀಕೃಷ್ಣನ ಮಾತುಗಳಲ್ಲಿ ಸತ್ಯ ಮತ್ತು ಧರ್ಮ ಇವುಗಳ ಲಕ್ಷಣವನ್ನು ಎತ್ತಿ ತೋರಿಸಿರುವದರಿಂದಲೂ ಶ್ರೀರಾಮಚಂದ್ರನ 'ಸತ್ಯಧರ್ಮಪರಾಯಣತೆ'ಯನ್ನು ಬೆಳಗಿಸಿದಂತಾಗಿದೆ. ★

# ಧರೆಗಿಳಿದ ಬೆಳಕು

-ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ತೀರ್ಥಯಾತ್ರೆಗೆ ಹೊರಟ ಪರಾಶರರೊಮ್ಮೆ ಯಮುನಾತೀರಕ್ಕೆ ಬಂದರು. ತುಂಬರೂಪಲಾವಣ್ಯಗಳ ಸಿರಿಯ ಸುಂದರಿ ಸತ್ಯವತಿಯನ್ನು ಕಂಡರು. ಆಕೆಯಲ್ಲಿ ತನ್ನಿಂದ ವ್ಯಾಸಾವತಾರವಾಗಬೇಕೆಂಬ ಭಗವತ್ಸಂಕಲ್ಪವನ್ನು ನೆನೆದು ಮಾತಿಗಾರಂಭಿಸಿದರು. ನದಿ ದಾಟಬೇಕಿದೆ. ಅಂಬಿಗ ಎಲ್ಲಿ ? ಎಂದು ಕೇಳಿದರು.

ಅನಪತ್ಯನಾದ ದಾಶನ ಮಗಳಾದ ಸತ್ಯವತೀ ನಾನು. ದಾಶನ ಉಪಕಾರಕ್ಕಾಗಿ ನಾನೇ ಅಂಬಿಗಳಾಗಿದ್ದೇನೆಂದಳು. ಹಾಗಾದರೆ ಕೂಡಲೆ ಹುಟ್ಟು ಹಾಕು. ನಾನು ಬೇಗ ಆಚೆ ತೀರ ಸೇರಬೇಕಿದೆ ಎಂದರು. ಬೆಸ್ತರ ಮನೆಯಲ್ಲಿ ಬೆಳೆದು ಮತ್ಸ್ಯಗಂಧೆಯಾದ ನನ್ನ ಹುಟ್ಟಿನ ಹಿನ್ನೆಲೆ ಏನು? ತಿಳಿಸಿರಿ ಮುನಿಗಳೇ ಎಂದು ಕೇಳಿದಳು ಹುಟ್ಟು ಹಾಕುತ್ತಾ.

ನಿನ್ನ ದೇಹದ ಸೊಬಗು ಕಂಡ ಕೂಡಲೆ ನಿನ್ನ ಪ್ರಣಯದ ಬಯಕೆ ಹುಟ್ಟಿತು ನನ್ನ ಮನದಲ್ಲಿ. ಈ ಋಣಾನುಬಂಧದ ಕಾರಣವೇನು ಎಂದು ದಿವ್ಯ ದೃಷ್ಟಿಯಿಂದ ತಿಳಿದಿದ್ದೇನೆ ಕೇಳು ಹೇಳುತ್ತೇನೆ–

ನೀನು ಬರ್ಹಿಪದ ಎಂಬ ಸೋಮಪ ಪಿತೃಗಳ ಮಾನಸ ಕನ್ಯೆ ಅಚ್ಛೋದೆ. ಅವಳಿಂದ ಪ್ರಕಾಶಕ್ಕೆ ಬಂದ ಸರೋವರವೇ 'ಅಚ್ಛೋದ' ಸರೋವರ. ಪಿತೃಗಳ ಮನಸ್ಸಿನಿಂದ ಜನ್ಮ ಪಡೆದ ನೀನು ತಂದೆ ಯಾರೆಂದು ತಿಳಿದಿರಲಿಲ್ಲ. ಪಿತೃಗಳನ್ನು ಕಾಣಬೇಕೆಂಬ ಹಂಬಲದಿಂದ ಆಗಸದಲ್ಲಿ ಬಂದ ಅಚ್ಛೋದೆ, ಅದ್ರಿಕಾ ಎಂಬ ಅಪ್ಸರೆಯಿಂದೊಡಗೂಡಿ ವಿಮಾನದಲ್ಲಿ ವಿಹರಿಸುತ್ತಿದ್ದ ಮನುಪುತ್ರ ವಸುವನ್ನೇ ತಂದೆಯೆಂದು ಭ್ರಮಿಸಿ ಅಪ್ಪಾ ಎಂದು ಬಳಿ ಸಾರಿದಳು.

ತನ್ನ ಪಿತೃ ಅಲ್ಲದವರನ್ನು ಪಿತೃ ಎಂದು ಭ್ರಮಿಸಿದ ದೋಷದಿಂದ ಆಕಾಶದಿಂದ ಕೆಳಗೆ ಯೋಗಭ್ರಷ್ಟಳಾಗಿ ಬೀಳ ಹತ್ತಿದಳು. ಆಗ ತ್ರ್ಯಣುಕಪರಿಮಾಣದ ಸೂಕ್ಷ್ಮರೂಪದ ತನ್ನ ಪಿತೃಗಳನ್ನು ಕಂಡು ಬೀಳುವ ಆತಂಕದಿಂದ ಅಪ್ಪಾ ಕಾಪಾಡಿರಿ ಎಂದಳು. ಸ್ವಕೃತದೋಷದಿಂದ ಬೀಳುತ್ತಿರುವಿ ನೀನು. ದೇವತೆಗಳು ಯಾವ ಶರೀರದಿಂದ ಕರ್ಮಗಳನ್ನು ಮಾಡುವರೋ ಆ ಶರೀರದಿಂದಲೇ ಅದರ ಫಲವನ್ನು ಅನುಭವಿಸಬೇಕಾಗುವುದು. ಪಿತೃಹೀನ ಕನ್ಯೆಯಾದ ನೀನು ವಸುವಿನ ಮಗಳಾಗಿ ಹುಟ್ಟಿ ಬೆಸ್ತರ ಮಗಳಾಗಿ ಬೆಳೆದು ರಾಜನ ತಾಯಿಯಾಗುವಿ

ಎಂದರು.

ಅದ್ರಿಕಾ ಎಂಬ ಆ ಅಪ್ಸರೆ ಗಂಗಾಯಮುನಾ ಸಂಗಮದಲ್ಲಿ ಮೀನಾದಳು. ನೀನು ಈ ಪರಾಶರನ ಮಗನಿಗೆ ಮಾತೆಯಾಗುವಿ. ನೀನು ಮಹಾಭಿಷಕ್‌ನ ಮಗನಾದ ಶಂತನುವಿಗೆ ಮಮತೆಯ ಮಡದಿಯಾಗಿ ಚಿತ್ರಾಂಗದ ವಿಚಿತ್ರವೀರ್ಯರ ತಾಯಿಯಾಗಿ ಮತ್ತೆ ಸ್ವರ್ಗ ಸೇರುವಿ. ನೀನು ಯಾರನ್ನು ತಂದೆಯೆಂದು ಭ್ರಮಿಸಿದೆಯೋ ಅದೇ ವಸುವಿನ ಮಗಳಾಗಿ ಇಪ್ಪತ್ತೆಂಟನೆಯ ಈ ದ್ವಾಪರದಲ್ಲಿ ಮತ್ಸ್ಯಕನ್ಯೆಯಾಗಿ ಹುಟ್ಟಿರುವಿ. ಆ ಅಚ್ಛೋದೆಯೇ ಸತ್ಯವತಿಯಾಗಿ ಹುಟ್ಟಿರುವ ನೀನು ಅದ್ರಿಕೆ ಹೆಣ್ಣು ಮೀನಾಗಿ ಹುಟ್ಟಿ ನಿನಗೆ ಜನ್ಮ ಕೊಟ್ಟು ದೇಹತ್ಯಾಗಮಾಡಿ ತನ್ನ ಮೂಲ ರೂಪ ಸೇರಿದಳು. ಬೆಸ್ತರ ಮನೆಯಲ್ಲಿ ಹುಟ್ಟಿದರೂ ವಸುವೀರ್ಯಜಾತ ಪುತ್ರೀ ನೀನು. ನಿನ್ನಿಂದ ವಂಶಕರನಾದ ಸುತನನ್ನು ಬಯಸಿದ್ದೇನೆ. ಸಂಗಮ ಸುಖ ನೀಡು.

ತನ್ನ ಪೂರ್ವಜನ್ಮದ ವೃತ್ತಾಂತ ಕೇಳಿ ಬೆರಗಾದ ಸತ್ಯವತೀ ಆಚೆ ತೀರದಲ್ಲಿ ಅನೇಕ ಋಷಿಗಳು ನಿಂತಿದ್ದಾರೆ ನೋಡಿ. ಹೀಗಿರುವಾಗ ನಾವು ಸೇರುವುದು ಹೇಗೆ? ಆಗ ಕೂಡಲೆ ಪರಾಶರರು ತಮ್ಮಿಬ್ಬರ ಸುತ್ತಲು ಮಂಜಿನ ತೆರೆ ಸೃಷ್ಟಿಸಿದರು. ಮಂಜಿನ ಮುಸುಕಿನಲ್ಲಿ ಮಧುಚಂದ್ರವಾಯಿತು. ಆದರೆ ಅದಕ್ಕೆ ಮುಂಚೆ ಸತ್ಯವತೀ ತನ್ನೊಂದು ಕೋರಿಕೆಯನ್ನು ಮುಂದಿಟ್ಟಳು. ಪಿತೃವಶದಲ್ಲಿರುವವಳು ನಾನು. ನಿಮ್ಮ ಸಂಗಮದಿಂದ ನನ್ನ ಕನ್ಯಾತ್ವ ನಶಿಸಿ ಹೋದರೆ ನಾನು ಮನೆಗೆ ಹಿಂತಿರುಗುವುದು ಹೇಗೆ? ದೂಷಿತಳಾಗಿ ಬದುಕಲು ನನಗಿಷ್ಟವಿಲ್ಲ. ಇದನ್ನು ಯೋಚನೆ ಮಾಡಿ ಬಳಿಕ ಬಳಿ ಬನ್ನಿ ಎಂದಳು.

ನಮ್ಮ ಸಂಗಮದ ಬಳಿಕ ಮತ್ತೆ ನೀನು ಕನ್ಯೆಯಾಗಿಯೇ ಇರುವಂತೆ ಅನುಗ್ರಹಿಸುತ್ತೇನೆ. ಹೆದರಬೇಡ. ಏನು ಬೇಕಾದರೂ ವರವನ್ನು ಕೇಳು ಎಂದರು. ನನ್ನ ದೇಹದ ದುರ್ಗಂಧ ಹೋಗಿ ಸುಗಂಧಭರಿತವಾಗ ಬೇಕೆಂದಳು. ಪರಾಶರರು ಒಪ್ಪಿ ಹರಸಿದರು. ಯೋಜನೆಯವರೆಗೂ ತನ್ನ ಸುಗಂಧ ಹಬ್ಬುವಂತಾದಳು. ಯೋಜನಗಂಧೆ ಎಂದು, ಗಂಧವತೀ ಎಂದೂ ಪ್ರಸಿದ್ಧಳಾದಳು ಸತ್ಯವತೀ. ಪರಾಶರರಿಂದ ಅದೇ ದ್ವೀಪದಲ್ಲಿ ಆಗಲೇ ವೇದವ್ಯಾಸರಾಗಿ ನಿರ್ದೋಷಗುಣಪೂರ್ಣನಾದ ಭಗವಂತ ಪ್ರಾದುರ್ಭವಿಸಿದನು. ಸದ್ಯೋಗರ್ಭರಾದ ವ್ಯಾಸರು ದ್ವೀಪದಲ್ಲಿ ಪ್ರಾದುರ್ಭಾವವಾದದ್ದರಿಂದ ದ್ವೈಪಾಯನ ಎಂದು ಪ್ರಸಿದ್ಧರಾದರು. ಅಗಣ್ಯದಿವ್ಯೋರುಗುಣಾರ್ಣವನೂ, ಸಮಸ್ತವಿದ್ಯಾಧಿಪತಿಯೂ ಜಗದ್ಗುರುವೂ ಜಗದೀಶ್ವರೇಶ್ವರನೂ ಅನಂತಶಕ್ತಿಯೂ ಸಮಸ್ತದೋಷಾತಿವಿದೂರವಿಗ್ರಹನೂ ಇಂದ್ರ ನೀಲ ಮಣಿಕಾಂತಿಯ ಸರ್ವಾಂಗಸುಂದರನಾದ ವ್ಯಾಸರೂಪಿ ಹರಿಯು ಜ್ಞಾನ ಅಭಯಮುದ್ರೆಯ

ಎರಡು ಕರಗಳಿಂದ ಸುಶೋಭಿತನಾಗಿ ಪ್ರಕಟಗೊಂಡರು. ಅವತರಿಸಿದ ಕೂಡಲೆ ಏಳುವರ್ಷದವರಾಗಿ ಉಪನೀತರಾಗಿ ನೆನೆದುಕೊಂಡಾಗಲೆಲ್ಲ ದರ್ಶನ ಕೊಡುವೆನೆಂದು ಅಭಯವಚನವನ್ನು ಕೊಟ್ಟು ವೇದ ವಿಭಾಗ ಮಾಡಿ, ಸೂತ್ರ, ಭಾರತಾದಿಗಳನ್ನು ರಚನೆಮಾಡಿ ತನ್ನ ಶಿಷ್ಯಂದಿರಾದ ಸುಮಂತು, ಜೈಮಿನಿ, ಪೈಲ, ಶುಕರಿಗೆ ವೈಶಾಂಪಾಯನರಿಗೆ ಉಪದೇಶ ಮಾಡಿ ತತ್ವಜ್ಞಾನದ ಮುಂದುವರಿಕೆಗೆ ಅನುವು ಮಾಡಿಕೊಟ್ಟರು. ವೇದವ್ಯಾಸರು ಶಾಸ್ತ್ರ ಶಸ್ತ್ರದಿಂದ ಎಲ್ಲರ ಹೃದಯದಲ್ಲಿ ಅಜ್ಞಾನ ಮಿಥ್ಯಾಜ್ಞಾನರೂಪನಾಗಿ ನೆಲೆಸಿದ ಕಲಿಯನ್ನು ನಿಗ್ರಹಿಸಿದರು.

ಸತ್ಯವತಿಯ ದೇಹದಿಂದ ಹೊಮ್ಮಿದ ಸುಗಂಧವನ್ನು ಆಘ್ರಾಣಿಸಿ ಜನರು ಅವಳ ಸೌಭಾಗ್ಯವನ್ನು ಅಭಿನಂದಿಸಿದರು. ದಾಶರಾಜನಿಗೂ ಅಚ್ಚರಿಯಾಯಿತು. ಮೀನಿನ ಗಂಧ ಸೂಸುತ್ತಿದ್ದ ನಿನ್ನ ದೇಹದಿಂದ ಈ ಸೌರಭ ಹೇಗೆ? ಎಂದು ಕುತೂಹಲದಿಂದ ಕೇಳಿದರು.

ಶಕ್ತಿ ಮಹರ್ಷಿಗಳ ಸುಪುತ್ರರಾದ ಮಹಾಪ್ರಾಜ್ಞಪರಾಶರರನ್ನು ಇಂದು ನಾವೆಯಲ್ಲಿ ಕೊಂಡೊಯ್ದೆ. ನಾವೆ ನಡೆಸುವ ಕೌಶಲವನ್ನು ನೋಡಿ ಖುಷಿಗೊಂಡ ಪರಾಶರರು ನನ್ನ ಕಾಯದ ಮೀನ ವಾಸನೆಯನ್ನು ಪರಿಹರಿಸಿ ಯೋಜನದವರೆಗೆ ಸೂಸುವಂತಹ ಸುಗಂಧಭಾಗ್ಯವನ್ನಿತ್ತರು. ಋಷಿಯ ಅನುಗ್ರಹವನ್ನು ಕಂಡು ಜನರೆಲ್ಲ ನನ್ನ ಬಗ್ಗೆ ಸಂತೋಷಪಟ್ಟರು. ಇಷ್ಟೇ ನಡೆದದ್ದು. ರೋಷಾವೇಶಕ್ಕೆ ಒಳಗಾಗದಿರಿ ತಂದೆ ಎಂದು ಭಿನ್ನವಿಸಿದಳು.

ಪಿತೃ ಅತಿಕ್ರಮಣದ ಪರಿಣಾಮವನ್ನು ಈ ಕಥೆಯಲ್ಲಿ ಕಾಣುತ್ತೇವೆ. ಕಂಡ ಕಂಡವರನ್ನೆಲ್ಲ ತಂದೆ ಎಂದು ನಂಬಬಾರದು. ತಂದೆಯಂತೆ ಗೌರವಾರ್ಹರು ಎಂದು ಭಾವಿಸುವುದರಲ್ಲಿ ತಪ್ಪಿಲ್ಲ.

ಭಗವಂತನ ಅಭಿವ್ಯಕ್ತಿಗೆ ಕಾರಣಳಾದ ಸತ್ಯವತಿಯ ಕನ್ಯಾತ್ವ ದೂಷಿತವಾಗಲಿಲ್ಲ. ಸಂತಾನ ಪಡೆದ ನಂತರವೂ ಕನ್ಯೆಯಾಗಿ ಮುಂದುವರೆದು ಶಂತನುವಿನ ಪತ್ನಿಯಾಗಿ ರಾಜಮಾತೆಯಾಗುವಳು! ದೇಹದ ದುರ್ಗಂಧ ನಿವಾರಣೆಯಾಗಿ ಸೌರಭವನ್ನು ಪಡೆದಳು!

ಭಗವಂತನ ವಿಚಾರದ ಅಭಿವ್ಯಕಿಗೆ ನಾವೂ ನಿಮಿತ್ತವಾದರೆ ನಮ್ಮ ದೋಷದುರ್ಗಂಧ ತೊಲಗಿ ಸದ್ಗುಣಸೌರಭ ತುಂಬಿ ಜನಪ್ರಿಯರಾಗುತ್ತೇವೆ. ಹರಿಪ್ರಿಯರಾಗುತ್ತೇವೆ.

ನಿರ್ದೋಷ ಗುಣಪೂರ್ಣನಾದ ಭಗವಂತನಿಗೆ ಪ್ರಾಕೃತ ದೇಹದ ಸಂಬಂಧವಿಲ್ಲ ಗರ್ಭವಾಸಾದಿ ಕ್ಲೇಶವಿಲ್ಲ. ಉದಯಚಲದಿಂದ ಸೂರ್ಯಪ್ರಕಟನಾಗುವಂತೆ ಸತ್ಯವತಿಯನ್ನು ನಿಮಿತ್ತ ಮಾಡಿಕೊಂಡು ವೇದವ್ಯಾಸರೂಪದಿಂದ ಪ್ರಕಟಗೊಂಡನಷ್ಟೇ.

★

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಒಳ್ಳೆಯದು–ಕೆಟ್ಟದ್ದು ಎಂಬುದನ್ನು ಪರೀಕ್ಷಿಸಬೇಕು. ಪರೀಕ್ಷಿಸುವುದು ಬುದ್ಧಿಯ ಕೆಲಸ. ಆದರೆ ಅನಂತರ ಕೆಟ್ಟದ್ದನ್ನು ತಿರಸ್ಕರಿಸಿ ಒಳ್ಳೆಯದನ್ನು ಸ್ವೀಕರಿಸುವುದಕ್ಕೆ ಬುದ್ಧಿವಂತಿಕೆ ಅಲ್ಲ. ಎದೆಗಾರಿಕೆಯೇ ಬೇಕು.

ಜಗತ್ತಿನಲ್ಲಿ ತಿಳಿದವರೂ ಇದ್ದಾರೆ. ತಿಳಿಗೇಡಿಗಳೂ ಇದ್ದಾರೆ. ತಿಳಿದು ತಿಳಿಯಾಗಿರುವವರು ಕಡಿಮೆ. ಎಷ್ಟೋ ಭಾರಿ–ಕಾಮ–ಲೋಭ–ಮಾತ್ಸರ್ಯ–ಆಲಸ್ಯ– ಅಂಜಿಕೆಗಳು ತಪ್ಪನ್ನೇ ಸರಿ ಎಂದು ತೀರ್ಪು ಕೊಡುತ್ತವೆ. ಹಾಗಾಗದೆ ಪ್ರೇಯಸ್ಸನ್ನು ತಿರಸ್ಕರಿಸಿ ಶ್ರೇಯಸ್ಸನ್ನು ಸ್ವೀಕರಿಸಲು ಎದೆಗಾರಿಕೆಯೇ ಬೇಕು.

ದಶರಥನ ಮುದ್ದು ಮಗ ರಾಮಚಂದ್ರ ಪಂಚಪ್ರಾಣ. ಅಂತೆಯೇ ಕೈಹಿಡಿದ ಮೋಹದ ಮಡದಿ ಕೈಕೇಯಿ ಆಕೆಯ ಕಂಡರೂ ಪ್ರಾಣಪ್ರಿಯ ಎನಿಸುವಷ್ಟು ಪ್ರೀತಿಕರ. ರಾಮನ ಪಟ್ಟಾಭಿಷೇಕ– ಕೈಕೇಯಿಯ ಸಂವಾದ ಸುಖ ಎರಡೂ ಎದುರಾಯಿತು. ರಾಮನ ಪಟ್ಟಾಭಿಷೇಕ ನಿರ್ಧರಿಸಿ ಎಲ್ಲಾ ತೀರ್ಮಾನಿಸಿ ಅನಂತರ ಕೈಕೇಯಿಯ ಬಳಿ ಬಂದ. ಕೈಕೇಯಿಯು ರಾಮನನ್ನು ಕಾಡಿಗೆ ಕಳುಹಿಸು ಎಂದು ಹೇಳಿದಳು. ಕಡೆಗೆ ಕೈಕೇಯಿಯ ಮಾತಿಗೆ ಕಟ್ಟು ಬಿದ್ದ. ರಾಮನನ್ನು ಕಾಡಿಗೆ ಅಟ್ಟುವ ಪರಿಸ್ಥಿತಿಯೇ ಬಂದಿತು.

ಎರಡನ್ನೂ ನಿಭಾಯಿಸುವುದು ಆಗದ ಮಾತು. ಕಡೆಗೆ ಕೈಕೇಯಿಗೆ ಸೋತು ಕೈ ಕೈ ಹಿಸುಕಿಕೊಂಡ. ಶ್ರೇಯಸ್ಸು–ಪ್ರೇಯಸ್ಸು ಎರಡನ್ನೂ ನಿಭಾಯಿಸಲಾಗದು. ದಶರಥನ ಮನೋರಥ ನುಚ್ಚುನೂರಾಯಿತು.

ಯಮನು ಹೇಳಿದನು– 1) ಪ್ರೇಯಸ್ಸು–ಶ್ರೇಯಸ್ಸುಗಳನ್ನು ಬೇರ್ಪಡಿಸುವುದು 2) ಶ್ರೇಯಸ್ಸನ್ನು ಆಯ್ದುಕೊಳ್ಳುವುದು ಇವೆರಡು ಕಷ್ಟದ ಕೆಲಸ. ಇದಕ್ಕೂ ಮಿಗಿಲಾಗಿ 3) ಪ್ರೇಯಸ್ಸನ್ನು ತಿರಸ್ಕರಿಸಿ ಶ್ರೇಯಸ್ಸನ್ನು ಆಯ್ದುಕೊಳ್ಳುವುದು ಇದು ಎದೆಗಾರಿಕೆಯ ಕೆಲಸ. ಎದೆ ಇದೆ ಎಂದು ಸಾರುವ ಕೆಲಸ. ದಶರಥನೇ ಸೋತು ಹೋದ. ಇನ್ನು ನಾವು ಸೋಲದಿರಲು ಬ್ರಹ್ಮಜ್ಞಾನದ ಮಹಿಮೆ ಅರಿಯಬೇಕು.

ಆದರೆ ಮಂದಬುದ್ಧಿಯ ಮಾನವನ ಪಾಡೇನು? **'ಪ್ರೇಯೋ ಮಂದಃ ಯೋಗಕ್ಷೇಮಾನ್ ವೃಣೀತೇ'**

ಮಂದಬುದ್ಧಿಯ ಮಾನವ ಯೋಗಕ್ಷೇಮ ರೂಪದ ಪ್ರೇಯಸ್ಸನ್ನೇ ಬಯಸುತ್ತಾನೆ. ಅದಕ್ಕೆ ತಿಳಿವು ಬೇಕು.

## ಮೋಸದ ಸಂತೆ-ಸಿಗದು ನಿಶ್ಚಿಂತೆ

ಜ್ಞಾನ ಎಂದ ಕೂಡಲೇ ಸುಲಭವಾಗಿ ಸಿಗುತ್ತದೆ ಎಂಬ ಅಸಡ್ಡೆ ಬೇಡ. ಇಂದಿನ Information ಯುಗದಲ್ಲಿ ಮಾಹಿತಿ ಸುಲಭ. Consultants ದಾರಿದಾರಿಯಲ್ಲಿ ಸಿಗುತ್ತಾರೆ. ಆದರೆ ಅವೆಲ್ಲಾ ಐಹಿಕ ಜಗತ್ತಿನ expressಗಳು. ಅವರ ಮಾಹಿತಿ ಮನಸ್ಸಿಗೆ ಹಿತ. ಮುಂದಿನ ಮಾರ್ಗಕ್ಕೆ ಅಹಿತ.

ಅಧ್ಯಾತ್ಮ ಬಲ್ಲವರೇ ಕಡಿಮೆ. ಬಲ್ಲವರೆಂದು ಬೀಗುವವರೇ ಹೆಚ್ಚು. ಹೀಗಾಗಿ ಅಲ್ಲಿ ಮೋಸಹೋದ ಮಾನವ ಇಲ್ಲಿಯೂ ಮೋಸಹೋಗುತ್ತಾನೆ.

ಏಕೆಂದರೆ ಕೆಲವು ಸಂದರ್ಭಗಳಲ್ಲಿ ಶ್ರೇಯಸ್ಸು-ಪ್ರೇಯಸ್ಸು ಮಾರುವೇಷಗಳಲ್ಲಿ ಬಂದಾವು! ಆಗ ಮಾರುವೇಷಕ್ಕೆ ಮಾರು ಹೋಗಿ ಮರುಗುತ್ತಿರಬಾರದು. ಇಂದು spiritual club ಗಳಿಗೆ member ಆಗುವವರು ಇದ್ದಾರೆ. ಆದರೆ ಅಲ್ಲಿಂದ ಬರುವಾಗ ಸಿಕ್ಕ ಗೌರವ materila benefitಗಳ ಬಗೆಗೆ ಲೆಕ್ಕ ಹಾಕುತ್ತಾರೆ. ಜ್ಞಾನ ಪಡೆದಿದ್ದೇವೆಯೇ? ಎಂದು ಅಲೋಚಿಸುವುದಿಲ್ಲ. ಹೀಗಾಗಿ ಇಲ್ಲೂ ಯೋಗ-ಕ್ಷೇಮ ಪ್ರಾಪ್ತಿ ರಕ್ಷಣೆ ಇದನ್ನೇ ಬಯಸುತ್ತಾನೆ.

**'ಪ್ರೇಯೋ ಮಂದೋ ಯೋಗಕ್ಷೇಮಾನ್ ವೃಣೀತೇ'**

ಇದನ್ನು ಅರಿತಾಗ

**'ಪ್ರಾಯಃ ಪ್ರಾಜ್ಞೋ ಯೋಗಕ್ಷೇಮಾನ್ ವೃಣೀತೇ'**

ಎನ್ನಬಹುದು. ಏಕೆಂದರೆ **'ಪ್ರೇಯೋ ಮಂದಃ'** ಎಂದಂತೆ **'ಪ್ರೇಯೋಽಮಂದಃ'** ಎಂದೂ ಎನ್ನಬಹುದು.

ಹೀಗಾಗದಿರಲು ತಿಳಿವು-ಅದರೊಂದಿಗೆ ಭಗವಂತನ ಅನುಗ್ರಹವೂ ಇರಬೇಕು. 'ಪ್ರೇಯೋ ಮಂದಃ' ಎಂಬ ಯಮನ ಮಾತು ಕನ್ನಡದಲ್ಲಿ 'ಸಂತೆಗೆ ತಕ್ಕ ಬೊಂತೆ' 'ಈಡಿಗೆ ತಕ್ಕ ಜೋಡು' ಎಂಬಂತೆ ಪ್ರೇಯಸ್ಸು-ಮಂದ ಇಬ್ಬರನ್ನು ಒಟ್ಟಿಗೆ ಸೇರಿಸಿ ಹೇಳಿದ್ದಾನೆ ಯಮ. ಆ ಮಂದನ ಜೀವನಶೈಲಿಗೆ ಪ್ರೇಯಸ್ಸಲ್ಲದೇ ಇನ್ನೇನು ಸಿಕ್ಕೀತು? ಯೋಗ-ಕ್ಷೇಮ ಅಲ್ಲದೇ ನಿತ್ಯ ಸುಖ-ನಿತ್ಯ ಸಂರಕ್ಷಣೇ ಸಿಕ್ಕಿತೇ ಎಂಬ ಧ್ವನಿ ಇದೆ.

(ಸಶೇಷ)

ಸ್ತೋತ್ರ ಚಿಂತನೆ

ಭಾಗ–14

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

## ನರಸಿಂಹ ಮಂತ್ರ ಒಂದಿರಲು ಸಾಕು

ಚೇತನ ಪ್ರಪಂಚದಲ್ಲಿ ಬದುಕಬೇಕಾದ ನಾವೆಲ್ಲರೂ ಜಡ ಪ್ರಪಂಚಕ್ಕೆ ಬಂಧಿಗಳಾಗಿ ಬಂದಿದ್ದೇವೆ. ಈ ಜಡಗಳ ಸಮಾಗಮದಿಂದ ಜೀವನು ಜಡನಾಗಿದ್ದಾನೆ. ದೇಹಾತ್ಮವಿವೇಕವನ್ನೇ ಕಳೆದುಕೊಂಡಿದ್ದಾನೆ. ಈ ಜಡಪ್ರಪಂಚದ ಜಾಡ್ಯತೊಲಗಿ ಸ್ವರೂಪ ಚೈತನ್ಯದ ಅಭಿವ್ಯಕ್ತಿ ಯಾಗಬೇಕಾದರೆ ನರಸಿಂಹನ ದಯೆ ತಪ್ಪದಿರಬೇಕು. ಇದಕ್ಕೆ ನರಸಿಂಹನ ಅರಿವು ತಪ್ಪಾಗಿರದಿರಬೇಕು. ಏಕೆಂದರೆ ಇಂದು ಎಂಥಹ ದುರ್ಗಮವಾದ ದುರ್ಗಗಳನ್ನೂ ಜನರು ಏರಿಯಾರು. ಆದರೆ ದುರ್ಗಮವಾದ ಜ್ಞಾನದ ದಾರಿಯನ್ನು ಸರಿಯಾಗಿ ಅರಿಯರು. ಬದುಕಿನಲ್ಲಿ ಗಳಿಸಿದ ಸಕಲ ಸಾಧನ ಸಂಪತ್ತುಗಳಿಗೂ ಮೋಕ್ಷವಿದೆ. ಪಡೆಯುವುದೆಲ್ಲ ಬಿಡುವುದಕ್ಕಾಗಿಯೇ. ಆದರೆ ಬೇಡದೆ ಬಂದ ಪ್ರಕೃತಿಯ ಬಂಧ ಒಂದು ಮಾತ್ರ ಬಿಡುವುವೆವೆಂದರೂ ಬಿಡಲಾಗದು. ಬಂಧದ ಬಿಡುಗಡೆಗೆ ಸಿರಿಯ ಹರಿಯ ಪಾದದರಿವಿ ನ ಹೊರತು ಬೇರೆ ದಾರಿ ದೊರೆಯದು. ಅದಕ್ಕಾಗಿ ಮುಂದೆ ನರಹರಿಯನ್ನು ಮಹದೇವನ ಅವತಾರದ ಶುಕದೇವರು ಬಣ್ಣಿಸುತ್ತಿದ್ದಾರೆ–

**ದುರ್ಗೇಷ್ವಟವ್ಯಾಜಿಮುಖಾದಿಷು ಪ್ರಭುಃ**
**ಪಾಯಾನ್ನೃಸಿಂಹೋಽಸುರಯೂಥಪಾರಿಃ ।**
**ವಿಮುಂಚತೋ ಯಸ್ಯ ಮಹಾಟ್ಟಹಾಸಂ**
**ದಿಶೋ ವಿನೇದುರ್ನ್ಯಪತಂಶ್ಚ ಗರ್ಭಾಃ ॥**

ಯಾವ ನರಸಿಂಹನ ಸಿಡಿ ಸಿಟ್ಟಿನ ಅಟ್ಟಹಾಸದಿಂದ ದಿಕ್ಕುಗಳೆಲ್ಲವೂ ಜಾರಿಬೀಳುತ್ತವೆಯೋ, ಶತ್ರುಗಳ ಸ್ತ್ರೀಯರ ಗರ್ಭಗಳೆಲ್ಲವೂ ಜಾರಿ ಬೀಳುತ್ತವೆಯೋ ಅಂಥಹ ಅಸುರಮಲ್ಲನಾದ ಹಿರಣ್ಯಕನ ಶತ್ರು ಎನಿಸಿದ ಪ್ರಭು ನರಹರಿಯು ಗೊಂಡಾರಣ್ಯ, ಯುದ್ಧ ಮುಂತಾದ ಆಪತ್ತುಗಳಿಂದ ರಕ್ಷಿಸಲಿ. ದುರ್ಗದಲ್ಲಿ ನರಸಿಂಹನು ರಕ್ಷಿಸಲಿ.

ಕಂಟಕಗಳಿಂದ ಕೂಡಿದ ಅರಣ್ಯಮಾರ್ಗವನ್ನು ಪಾದ ತ್ರಾಣಗಳಿಂದ ದಾಟಬಹುದು. ರೋಗಗಳನ್ನು ವೈದ್ಯರ ಚಿಕಿತ್ಸೆಗಳಿಂದ ದಾಟಬಹುದು. ಹರ ಸಾಗರವನ್ನು ದೋಣಿಯಿಂದ

ದಾಟಬಹುದು. ಹಗ್ಗ ಹಿಡಿದು ಬೆಟ್ಟವನ್ನು ಹತ್ತಬಹುದು. ಆದರೆ ಜೀವರಿಗೆ ಅನಾದಿಕಾಲದಿಂದ ಅಂಟಿದ ಅಜ್ಞಾನ ಮಾರ್ಗದಿಂದ ದಾಟಲು ಜಗತ್ತಿನಲ್ಲಿ ಸುಲಭವಿಧಾನಗಳೇ ಇಲ್ಲ. ಒಂಟೆಗಳು ಮುಳ್ಳನ್ನೂ ಸುಲಭವಾಗಿ ತಿಂದು ಜೀರ್ಣಿಸಿಕೊಳ್ಳುತ್ತವೆ. ಪಾರಿವಾಳಗಳು ಅಗ್ನಿಕಣಗಳನ್ನು ಭಕ್ಷಿಸಿ ತಮ್ಮನ್ನು ರಕ್ಷಿಸಿಕೊಳ್ಳುತ್ತವೆ. ಆದರೆ ಈ ಅಜ್ಞಾನದಿಂದ ಆಗುವ ಅನರ್ಥವನ್ನು ತಪ್ಪಿಸಿಕೊಳ್ಳಲು ಹರಿ ಒಲುಮೆಗೆ ಪಾತ್ರನಾಗದೆ ಬೇರೆ ದಾರಿಯೇ ಇಲ್ಲ. ಇಂಥಹ ಅಜ್ಞಾನ ಪ್ರಸಂಗದಲ್ಲಿ ನಮ್ಮನ್ನು ರಕ್ಷಿಸಬಲ್ಲವ ನರಸಿಂಹನೊಬ್ಬನೇ.

**'ಅಜ್ಞಾನಾಂ ಜ್ಞಾನದೋ ವಿಷ್ಣುಃ ಜ್ಞಾನಿನಾಂ ಮೋಕ್ಷದಶ್ಚ ಸಃ'**

ಅಜ್ಞಾನಿಗಳಿಗೆ ಜ್ಞಾನಕೊಟ್ಟು, ಜ್ಞಾನಿಗಳಿಗೆ ಮೋಕ್ಷವನ್ನು ಕೊಡುವ ಕರುಣಾಳು ಶ್ರೀಹರಿ ಒಬ್ಬನೇ. ಕಗ್ಗತ್ತಲೆಯ ಮಾರ್ಗದಲ್ಲಿ ಸಾಗುವವನಿಗೆ ಮಿಣುಕು ಹುಳದ ತುಣುಕು ಬೆಳಕೂ ಭಯ ಹುಟ್ಟಿಸುವಂತೆ. ಜ್ಞಾನಮಾರ್ಗದಲ್ಲಿ ಸಾಗುವವನಿಗೆ ಸ್ವಲ್ಪ ಕತ್ತಲೆಯೂ ಪ್ರತಿಬಂಧಕವೇ. ಸ್ವಲ್ಪ ಅಜ್ಞಾನ ಹೊಂದಿದರೂ ಮಾರ್ಗವು ದುಸ್ತರವಾದೀತು. ಹೀಗಿರಲು ಕಾಲ-ಮಲದಿಂದ ಅಜ್ಞಾನವೆಂಬ ಮಲ ಜಗತ್ತನ್ನೇ ಆಚ್ಛಾದಿಸಿದೆ. ಒಬ್ಬೊಬ್ಬರೂ ಒಂದೊಂದು ಮಾರ್ಗವನ್ನು ಬೋಧಿಸುತ್ತಿದ್ದಾರೆ. ಭಾವಿಯಲ್ಲಿರುವ ಕಪ್ಪೆಯು ತಾನಿರುವ ಭಾವಿಯೇ ಜಗತ್ತೆಂದು ಭಾವಿಸಿದಂತೆ ಅವರವರ ಬುದ್ಧಿಗೆ ತೋರಿದ್ದೇ ಮೋಕ್ಷಸ್ವರೂಪವಾಗಿದೆ. ಸರ್ವೋತ್ತಮನಾದ ಜ್ಞಾನದೇವತೆಗೂ ಅಜ್ಞಾನವಿದೆ ಎನ್ನುವ ತಾರ್ಕಿಕರಿದ್ದಾರೆ. ಜ್ಞಾನ ಇದ್ದವರಿಗೆಲ್ಲ ಅಜ್ಞಾನ ಇರಲೇಬೇಕೆಂಬ ಅವರ ಕುಯುಕ್ತಿಗೆ ಇದೇ ಸಮಾನನ್ಯಾಯದಿಂದ ಸುಖ ಇದ್ದವರಿಗೆಲ್ಲ ದುಃಖವಿರಲೇಬೇಕು. ಆದ್ದರಿಂದ ಈಶ್ವರನಿಗೆ ದುಃಖವನ್ನೂ ಹೇಳಲೇಬೇಕಾಗುತ್ತದೆ ಎಂಬ ಪ್ರತ್ಯುಕ್ತಿಗೆ ಇನ್ನೂ ಉತ್ತರ ದೊರೆಯದೆ ಆಗಮೈಕ ಜ್ಞೇಯನಾದ ದೇವರ ಬಗ್ಗೆ ಕುಯುಕ್ತಿಗಳ ಜಂಜಾಟದಲ್ಲಿಯೇ ಮುಳುಗಿದ್ದಾರೆ.

ಪಾಯಸವು ಪಯಸ್ಸಿನಿಂದ ಆಗುತ್ತದೆ. ಪಯಸ್ಸು ಹಸುವಿನಿಂದ ದೊರೆಯುತ್ತದೆ. ಅರ್ಥಾತ್ ಹಸುವಿನಿಂದ ದೊರೆಯುವುದು ಪಾಯಸವೆಂದು ನಿಶ್ಚಯಿಸಿಕೊಂಡು, ಗೋಮಯವೂ ಹಸುವಿನಿಂದಲೇ ದೊರೆಯುವುದರಿಂದ ಗೋಮಯವೂ ಪಾಯಸವೇ ಎಂದು ವಾದಿಸಿದ ಹಾಗಿದೆ ಕೆಲವರ ಮೋಕ್ಷಸ್ವರೂಪ. ಇಂತಹ ಅಪ್ರಾಮಾಣಿಕ ವಿಚಾರಗಳಿಂದ ಪ್ರಾಮಾಣಿಕ ಜಿಜ್ಞಾಸುಗಳಿಗೆ ಭಾರೀ ಹೊಡಪೆಟ್ಟು ಬಿದ್ದಾಗ ಜ್ಞಾನದೇವತೆಯಾದ ನರಸಿಂಹನ ದಯೆ ಒಂದಿಲ್ಲದೆ ಬೇರೆ ಮಾರ್ಗವೇ ಇಲ್ಲ. ಅದಕ್ಕಾಗಿ ನರಸಿಂಹನನ್ನು ಸ್ತುತಿಸುತ್ತಾರೆ ಮಧ್ವರು.

(ಸಶೇಷ)

ಭಾಗ–14

# ಜೀವನಯಜ್ಞ

## ದಿನನಿತ್ಯದ ಭೋಜನ–ವೈಶ್ವಾನರಯಜ್ಞ

**ಸಂಕಲನ: ಸುನಂದಕೀ**

ಹಿರಿಯರ ಮಾತೊಂದಿದೆ. 'ತಿನ್ನವುದಕ್ಕಾಗಿ ಬದುಕಬೇಡ. ಬದುಕುವುದಕ್ಕಾಗಿ ತಿನ್ನು ಎಂದು. ಈ ದಿಸೆಯಲ್ಲಿಯೇ ಮಾನವರೆಂದೆನಿಸಿದ ನಾವೆಲ್ಲರೂ ನಮ್ಮ ದೇಹದ ರಕ್ಷಣೆ ಹಾಗೂ ವೃದ್ಧಿಗಾಗಿ ಆಹಾರವನ್ನು ಸ್ವೀಕರಿಸುತ್ತೇವೆ. ಈ ಕ್ರಿಯೆಯು ಪ್ರಾಣ್ಯಾದಿಗಳಲ್ಲೂ ಇದೆ. ಇದಕ್ಕಿಂತ ಹೊರತಾದ ಭೋಜನ ನಮ್ಮದಾಗಬೇಕಾದರೆ ಮೇಲಿನ ಮಾತಿಗೆ ತಕ್ಕಂತೆ ನಾವಿರಬೇಕು. ಕೇವಲ ತಿನ್ನುವುದಲ್ಲ. ತಿನ್ನುವ ಉಣ್ಣುವ ಮುಂದೆ ಆ ಪದಾರ್ಥವನ್ನು ಭಗವಂತನಿಗೆ ಅರ್ಪಿಸಿ ತಿನ್ನಬೇಕು. ತಿನ್ನುವಾಗಲೂ ಒಂದು ವಿಶಿಷ್ಟ ಕ್ರಮವಿರಬೇಕು. ದೈವೀ ಸಂಸ್ಕೃತಿಯ ನೆಲೆವೀಡಾದ ಈ ಭಾರತಾವನಿಯಲ್ಲಿರುವ ಓರ್ವ ರೈತನೂ ಕೂಡ ತನ್ನ ಆಹಾರವನ್ನು ಸ್ವೀಕರಿಸುವಾಗ ಅದನ್ನು ಕಣ್ಣಿಗೊತ್ತಿಕೊಂಡು, ಅನ್ನ ಬ್ರಹ್ಮನನ್ನು ನೆನಪಿಸಿಕೊಂಡು ತಿನ್ನುತ್ತಾನೆ. ಇಂತಹ ಸಂಸ್ಕಾರವನ್ನು ಇನ್ನೂ ವಿಶೇಷವಾಗಿ ಬೆಳೆಸಿ ಆ ತಿನ್ನುವ ಪ್ರಕ್ರಿಯೆಯನ್ನು ವೈಶ್ವಾನರ ಯಜ್ಞವನ್ನಾಗಿ ತೋರಿದವರು ತ್ರೈಲೋಕ್ಯಗುರು ಶ್ರೀಮದಾಚಾರ್ಯರು. ಅದಕ್ಕೆ ಸ್ಫೂರ್ತಿ ನೀಡಿದವರು ಗೀತಾಚಾರ್ಯರಾದ ಶ್ರೀಕೃಷ್ಣದೇವರು.

**ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।**
**ಪ್ರಾಣಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥**

'ಎಲ್ಲ ಪ್ರಾಣಿಗಳ ಒಳಗೆ ನೆಲೆಸಿ ಆ ಜೀವಿಗಳು ತಿನ್ನುವ ಖಾದ್ಯ, ಲೇಹ್ಯ, ಚೋಷ್ಯ, ಪೇಯ ಎಂದು ನಾಲ್ಕು ವಿಧದ ಪದಾರ್ಥಗಳನ್ನು ಜೀರ್ಣಿಸುವವನು ವೈಶ್ವಾನರ ನಾಮಕನಾದ ನಾನು' ಎಂದು ಭಗವದ್ಗೀತೆಯಲ್ಲಿ ಆದೇಶಿಸಿರುವರು. ಈ ಅನುಸಂಧಾನದಿಂದ ನಾವು ತಿನ್ನುವ ಆಹಾರ ಆಹುತಿಯಾಗಿ ಮಾರ್ಪಾಟಾಗುತ್ತದೆ. ಈ ಕ್ರಿಯೆ ದೊಡ್ಡ ಯಜ್ಞವೆನಿಸುವುದು. ಇವರೀರ್ವರ ಆದೇಶ ಸ್ಫೂರ್ತಿಗಳನ್ನೇ ಆಧಾರವಾಗಿಟ್ಟು ನಮ್ಮ ಪ್ರಾಚೀನರೆಲ್ಲರೂ ಹಾಗೆಯೇ ಭೋಜನ ಮಾಡಿದರು. ಆ ಭೋಜನವೂ ಅತ್ಯುತ್ತಮ ಸಾಧನೆಯಾಯಿತು. ಅಂತೆಯೇ ನಾವು ಆ ಮಾರ್ಗದಲ್ಲಿಯೇ ಸಾಗಲು ಈ ಒಂದು ಸಣ್ಣ ಪ್ರಯತ್ನ.

ಪವಿತ್ರವಾದ ಅನ್ನವು (ಆಹಾರವು) ಮನಸ್ಸನ್ನು ಬುದ್ಧಿಯನ್ನು ನಿರ್ಮಲಗೊಳಿಸುವುದು. ಶಾಸ್ತ್ರವಿಧಿಯನ್ನನುಸರಿಸಿ ಮಾಡಿದ ಭಗವಂತನ ಸ್ಮರಣೆಯಿಂದ ಅನ್ನವು ಪವಿತ್ರವಾಗುವುದು. ಭಗವಂತನನ್ನು ಸ್ಮರಿಸುತ್ತಾ ಮಾಡುವ ಭೋಜನವು ಯಜ್ಞವೆನಿಸುವುದು.

**ಭುಂಜೀತ ಹೃದ್ಗತಂ ವಿಷ್ಣುಂ**

**ಸ್ಮರನ್ ತದ್ಗತಮಾನಸಃ**

ಇದು ಶ್ರೀಮದಾಚಾರ್ಯರ ಅಮೃತವಾಣಿ. ದೇಹದಲ್ಲೂ, ಆಹಾರ ಪದಾರ್ಥಗಳಲ್ಲೂ ಅನೇಕ ರೂಪಗಳಿಂದ ವ್ಯಾಪ್ತನಾದ ವಿಷ್ಣುವನ್ನು ಸ್ಮರಿಸುತ್ತಾ ಊಟವನ್ನು ಮಾಡಬೇಕು.

## ವೈಶ್ವಾನರ ಯಜ್ಞ ಫಲ

**ನೈವೇದ್ಯಮನ್ನಂ ತುಲಸೀ ವಿಮಿಶ್ರಿತಂ**

**ವಿಶೇಷತಃ ಪಾದಜಲೇನ ಸಿಕ್ತಂ।**

**ಯೋಶ್ನಾತಿ ನಿತ್ಯಂ ಪ್ರಯತೋ ಮುರಾರೇಃ**

**ಪ್ರಾಪ್ನೋತಿ ಯಜ್ಞಾಯುತ ಕೋಟಿ ಪುಣ್ಯಂ ॥**

ತುಲಸೀದಳಗಳಿಂದ ಸಹಿತವಾದ, ಶ್ರೀಹರಿಯ ಪಾದೋದಕದಿಂದ ಪ್ರೋಕ್ಷಿತವಾದ ಭಗವನ್ನೈವೇದ್ಯವನ್ನು ಉಣ್ಣುವ ಮಾನವನು ಕೋಟಿಯಜ್ಞಗಳ ಫಲವನ್ನು ಹೊಂದುವನು. ಇದನ್ನೇ ಸಮರ್ಥಿಸುತ್ತಾ

**ಈ ಪರಿಯಲಿ ಅರಿತುಂಬ ನರ**

**ನಿತ್ಯೋಪವಾಸಿ ನಿರಾಮಯ**

**ನಿಷ್ಪಾಪಿ ನಿತ್ಯ ಸುಮಹಾಯಜ್ಞಗಳಾಚರಿಸಿದವನು ॥**

ಎಂದು ಶ್ರೀಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ ನಿರೂಪಿಸಿರುವರು. ಆ ಎಲ್ಲಾ ಹಿರಿಯರ ಮಾರ್ಗದಲ್ಲಿ ನಾವು ವೈಶ್ವಾನರ ಯಜ್ಞವನ್ನು ಮಾಡಲು ಹೊರಡೋಣ. ಅದಕ್ಕಾಗಿ ನಾವು ಮಾಡಬೇಕಾದ ಕ್ರಮಾನುಷ್ಠಾನ ಅನುಸಂಧಾನಗಳ ಬಗ್ಗೆ ತಿಳಿಯಲು ಪ್ರಯತ್ನಿಸೋಣ.

## ಭೋಜನ ಯಜ್ಞ ಕರ್ತೃವಿನಲ್ಲಿ ಭಗವಂತನ ವ್ಯಾಪ್ತಿ

1) ಊಟವನ್ನು ಮಾಡುವ ವ್ಯಕ್ತಿಯ ಕಣ್ಣುಗಳಲ್ಲಿ ಕಪಿಲನಾಮಕ ಭಗವಂತನಿದ್ದು ಆಹಾರ ಪದಾರ್ಥಗಳನ್ನು ನೋಡುವನು.

2) ಮೂಗಿನಲ್ಲಿ ನರಸಿಂಹರೂಪಿ ಭಗವಂತನಿದ್ದು ಆಹಾರ ಪದಾರ್ಥಗಳ ಗಂಧವನ್ನು ಆಘ್ರಾಣಿಸುತ್ತಾನೆ.

3) ಬಾಯಿಯಲ್ಲಿ ಪರಶುರಾಮರೂಪಿಯು ನೆಲೆಸಿದ್ದು ಆಹಾರಪದಾರ್ಥಗಳಿಗೆ ಅವಕಾಶವನ್ನು ಕಲ್ಪಿಸುತ್ತಾನೆ.

4) ನಾಲಿಗೆಯಲ್ಲಿ ಮತ್ಸ್ಯರೂಪಿಯು ಸನ್ನಿಹಿತನಾಗಿದ್ದು ಆಹಾರಪದಾರ್ಥಗಳ ರುಚಿಯನ್ನು

ನೋಡುತ್ತಾನೆ.

5) ಹಲ್ಲುಗಳಲ್ಲಿ ಹಂಸನಾಮಕನು ಸನ್ನಿಹಿತನಾಗಿದ್ದು ಆಹಾರಪದಾರ್ಥಗಳನ್ನು ಅಗಿಯುತ್ತಾನೆ.

6) ವಾಗೀಂದ್ರಿಯದಲ್ಲಿರುವ ಹಯಗ್ರೀವರೂಪಿಯು ಭೋಜನಕಾಲದಲ್ಲಿ ತನ್ನ ಧ್ಯಾನವನ್ನು ಮಾಡಿಸುತ್ತಾನೆ.

7) ಸಂಕರ್ಷಣ-ಪ್ರದ್ಯುಮ್ನರು ಭೋಜನವನ್ನು ಮಾಡುವವನಲ್ಲಿದ್ದು ಅವನಿಗೆ ಉಣ್ಣುವ ಶಕ್ತಿಯನ್ನು ಕರುಣಿಸುವರು.

8) ಅನಿರುದ್ಧ-ನಾರಾಯಣರು ಆಹಾರಪದಾರ್ಥಗಳಲ್ಲಿದ್ದು ರಕ್ಷಿಸುವರು.

9) ವಾಸುದೇವನು ಊಟಮಾಡುವವನ ಕಂಠ ಹಾಗೂ ಹೊಟ್ಟೆಗಳಲ್ಲಿ ಇದ್ದು ಭೋಜನ ಪದಾರ್ಥಗಳಿಗೆ ಅವಕಾಶವನ್ನು ಕಲ್ಪಿಸುವನು.

10) ನಮ್ಮ ದೇಹದಲ್ಲಿರುವ ಅನ್ನಮಯಕೋಶದಲ್ಲಿ ಶಾಂತಿಪತಿಯಾದ ಅನಿರುದ್ಧ ರೂಪಿಯು 8251 ರೂಪಗಳಿಂದ ಇರುವನು.

11) ಪ್ರಾಣಮಯಕೋಶದಲ್ಲಿ ಕೃತಿಪತಿಯಾದ ಪ್ರದ್ಯುಮ್ನನು 5543 ರೂಪಗಳಿಂದ ಇರುವನು.

12) ಮನೋಮಯಕೋಶದಲ್ಲಿ ಜಯಾಪತಿ ಸಂಕರ್ಷಣನು 562107 ರೂಪಗಳಿಂದ ಇರುವನು.

13) ವಿಜ್ಞಾನಮಯಕೋಶದಲ್ಲಿ ಮಾಯಾಪತಿ ವಾಸುದೇನು 4374 ರೂಪಗಳಿಂದ ಇರುವನು.

14) ಆನಂದಮಯ ಕೋಶದಲ್ಲಿ ಲಕ್ಷ್ಮೀಪತಿನಾರಾಯಣನು 5125 ರೂಪಗಳಿಂದ ಇರುವನು.

## ಭೋಜನ ಯಜ್ಞದ ಪೂರ್ವಸಿದ್ಧತೆ

1) ಎಲೆ ಹಾಕುವ ಸ್ಥಳಗಳಲ್ಲಿ ನೀರಿನಿಂದ ಚೌಕಾಕಾರದ ಮಂಡಲವನ್ನು ಮಾಡಬೇಕು. ಮಂಡಲವು ಎಲೆಗಿಂತಲೂ ದೊಡ್ಡದಾಗಿರಬೇಕು. ಭೋಜನಕರ್ತೃವು ಮಂಡಲವನ್ನು ತನ್ನ ಎಡಗೈಯಿಂದ ಮಾಡಿಕೊಳ್ಳಬೇಕು. ದೇಹದ ಎಡಭಾಗದಲ್ಲಿರುವ ಲಕ್ಷ್ಮೀದೇವಿಯು ಭಗವಂತನ ಈ ಯಜ್ಞಕ್ಕಾಗಿ ಸಿದ್ಧತೆಯನ್ನು ಮಾಡುವರು ಎಂದು ಅನುಸಂಧಾನವಿರಬೇಕು. ಬಲಭಾಗದಲ್ಲಿರುವ ಭಗವಂತನು ಈ ಯಜ್ಞವನ್ನು ಸ್ವೀಕರಿಸುವನು ಎಂದೂ ಭಾವಿಸಬೇಕು.

2) ಎಲೆಗೆ ಮೊತ್ತ ಮೊದಲು ತುಪ್ಪ ಹಾಕಿ ನಂತರ ಆಹಾರ ಪದಾರ್ಥಗಳನ್ನು ಬಡಿಸಬೇಕು.

3) ಬಡಿಸಿದ ಪದಾರ್ಥಗಳ ಮೇಲೆ ಶುದ್ಧ್ಯರ್ಥವಾಗಿ ಗಾಯತ್ರೀಮಂತ್ರದಿಂದ (ಅಧಿಕಾರಿಗಳು) ನೀರನ್ನು ಪ್ರೋಕ್ಷಿಸಬೇಕು.

4) ಭೋಜನಯಜ್ಞದ ಪ್ರಾರಂಭದಲ್ಲಿ ದೇಹಶುದ್ಧಿಗಾಗಿ, ಧರ್ಮಸಾಧನೆಗಾಗಿ, ಮೋಕ್ಷಪ್ರಾಪ್ತಿಗಾಗಿ ಶ್ರೀಹರಿಯ ಪಾದೋದಕವನ್ನು (ತೀರ್ಥವನ್ನು) ಸ್ವೀಕರಿಸಬೇಕು. ತೀರ್ಥವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಮುಕುಂದನನ್ನು ಸ್ಮರಿಸುತ್ತಾ ಶಂಖೋದಕವನ್ನು

ಪ್ರೋಕ್ಷಿಸಿಕೊಳ್ಳಬೇಕು.

5) ತೀರ್ಥವನ್ನು ಅನ್ನಕ್ಕೆ ಪ್ರೋಕ್ಷಿಸಿ ಬಲಗೈಯಿಂದ ಅನ್ನವನ್ನು ಮುಚ್ಚಿ ನಾರಾಯಣಅಷ್ಟಾಕ್ಷರ ಮಂತ್ರವನ್ನು ಎಂಟು ಬಾರಿ ಜಪಿಸಬೇಕು

6) ಎಲೆಗೆ ನಾಲ್ಕು ಅಂಗುಲ ಬಿಟ್ಟು ಸುತ್ತಲೂ ಗಾಯತ್ರೀಮಂತ್ರವನ್ನು ಹೇಳುತ್ತಾ (ಅಧಿಕಾರಿಗಳು) ನೀರಿನಿಂದ ಪರಿಷೇಚನೆಯನ್ನು ಮಾಡಬೇಕು

7) ಸಂಪ್ರದಾಯಾನುಸಾರವಾಗಿ ಎಲೆಗೆ ಬಲಭಾಗದಲ್ಲಿ ಬೋರೇಹಣ್ಣಿನ ಗಾತ್ರದಷ್ಟು ಆಹುತಿಗಳನ್ನು ಚಿತ್ರಗುಪ್ತಾದಿ ದೇವತೆಗಳಿಗಾಗಿ ಇಟ್ಟು ಅದರ ಮೇಲೆ ನೀರನ್ನು ಹಾಕಬೇಕು. (ಅಧಿಕಾರಿಗಳು)

8) ಆಪೋಶನವನ್ನು ತೆಗೆದುಕೊಳ್ಳುವಾಗ ವಾಯುದೇವರ ಅಂತರ್ಯಾಮಿ ಇಂದಿರಾರಮಣನನ್ನು ಧ್ಯಾನಿಸಬೇಕು.

**(ಸಶೇಷ)**

---

(3ನೇ ಪುಟದಿಂದ)

ಅವನ ಇಚ್ಛೆಯಿದ್ದಂತೆ ಆಗಿಯೇ ತೀರಬೇಕು. ಸ್ವಾಮಿಯಾದ ಪರಮಾತ್ಮನಿಗೆ ಮಿಥಿಲೆಯು ಸುಟ್ಟು ಹೋಗಬೇಕೆಂಬ ಇಚ್ಛೆಯಿದ್ದಲ್ಲಿ ನಾನು ಏನು ಮಾಡಿದರು ಸುಟ್ಟು ಹೋಗಿಯೇ ಹೋಗುತ್ತದೆ. ಈ ರೀತಿಯಾದ ನಿರ್ವಿಕಾರಭಾವ ಹೊಂದಲು ಜನಕನಿಂದ ಹೇಗೆ ಸಾಧ್ಯವಾಯಿತು. ಅವನು ಯಾವ ವಸ್ತುಗಳಿಲ್ಲಿಯೂ ನನ್ನದೆಂಬ ಅಭಿಮಾನವನ್ನು ಇಟ್ಟುಕೊಳ್ಳದೇ ಇದ್ದುದರಿಂದ ರಾಜ್ಯಕೋಶಗಳು ದಹಿಸಿದರೂ ಯಾವುದೇ ದುಃಖಕ್ಕೊಳಗಾಗದೇ ಸ್ವಕರ್ತ್ಯವ್ಯದಲ್ಲಿಯೇ ಆಸಕ್ತನಾದನು. ಆದ್ದರಿಂದ ಅಭಿಮಾನ ತ್ಯಾಗದಿಂದಾಗಿ ಮನೋವಿಕಾರವಾಗದಂತೆ ನೋಡಿಕೊಂಡು ಸ್ವಧರ್ಮನಿಷ್ಠನಾಗಿ ಜ್ಞಾನಿಯಾಗಿ ಅಮೃತತ್ವವನ್ನು ಪಡೆಯಬಹುದು.

ಕೃಷ್ಣನ ವಚನಾಮೃತವನ್ನು ಕೇಳಿದ ಅರ್ಜುನನು ಕೃಷ್ಣನನ್ನು ಕುರಿತು ಮತ್ತೆ ಈ ರೀತಿಯಾಗಿ ಪ್ರಶ್ನಿಸುತ್ತಾನೆ. ಜೀವನು ಅನಾದಿನಿತ್ಯನೆಂದು ತಿಳಿಸಿರುವಿ, ಈ ವಿಷಯದಲ್ಲಿ ದೃಷ್ಟಾಂತ ಯಾವುದು? ಅರ್ಜುನನ ಈ ಪ್ರಶ್ನೆಗೆ ಕೃಷ್ಣನು ಈ ರೀತಿಯಾಗಿ ಉತ್ತರವನ್ನು ನೀಡುತ್ತಾನೆ. ಜಗತ್ಸೃಷ್ಟಿಕರ್ತನಾದ ಪರಬ್ರಹ್ಮನು ಮತ್ತು ಜಗತ್ತಿಗೆ ಪರಿಣಾಮಿಕಾರಣವಾದ ಜಗತ್ಪ್ರಕೃತಿಯು ಎಂದೂ ಇಲ್ಲ ಎಂದು ಆಗಿಲ್ಲ. ಆಗುವುದೂ ಇಲ್ಲ. ಇವುಗಳು ಅನಾದಿನಿತ್ಯಗಳು. ಈ ಎರಡು ವಸ್ತುಗಳಂತೆ ಜೀವನನ್ನು ಅನಾದಿನಿತ್ಯ ಎಂದು ತಿಳಿದುಕೊ. ಪರಬ್ರಹ್ಮ-ಪ್ರಕೃತಿ ಅನಾದಿನಿತ್ಯಗಳೆಂಬ ವಿಷಯವು ತತ್ವಸಾಕ್ಷಾತ್ಕಾರಗಳಿಂದ ಬಂದಿದೆ. ತತ್ವಸಾಕ್ಷಾತ್ಕಾರಿಗಳು ಈ ವಿಷಯಗಳನ್ನು ನಿರ್ಣಯಿಸಿದ್ದಾರೆ. ಅವರ ಉಪದೇಶ ಪರಂಪರೆಯಿಂದ ನಾವು ತಿಳಿದುಕೊಳ್ಳಬೇಕು. **(ಸಶೇಷ)**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

ತಾಯಿ ಉಂಡ ಆಹಾರವೇ ಆಪ್ಯಾಯಿನೀ ಎಂಬ ನಳಿಕೆಯ ಮೂಲಕ ಮಗುವಿಗೂ ಸಿಗುತ್ತದೆ. ಮೊಣಕಾಲ ಎಡೆಯಲ್ಲಿ ತಲೆಯೂರಿ ಮುದುಡಿ ಭಾಗ ಪಡೆಯುವ ಈ ಸ್ಥಿತಿಯೂ ನರಕದ ಇನ್ನೊಂದು ಮಗ್ಗುಲು, ಕತ್ತಲೆ ಕೊಂಪೆ, ಮಲಮೂತ್ರದ ನಡುವೆ ತಾಯಿಯ ದೇಹದ ಹುಳಗಳಿಂದ ಕೋಮಲ ಶರೀರವನ್ನು ಕಚ್ಚಿಸಿಕೊಂಡು ಒದ್ದಾಡುವ ಸ್ಥಿತಿ ಭಯಾನಕ. ಹೀಗೆ ಅಸಹ್ಯವಾಗಿ ನವಮಾಸವನ್ನು ಕಳೆವ ಈ ಸಮಯದಲ್ಲಿ ಜನ್ಮಶತಗಳ ಸ್ಮರಣೆಯನ್ನು ತಂದುಕೊಂಡು ದುಃಖಿಸುತ್ತಾನೆ. ಆಗಲೇ ಸೂತಿಕಾ ವಾಯುವು ಯೋನಿದ್ವಾದರ ಮೂಲಕ ಶಿಶುವನ್ನು ಹೊರತಳ್ಳಿದಾಗ ಬಾಹ್ಯ ಗಾಳಿಯ ಸೋಂಕಿಗೆ ಎಲ್ಲವನ್ನು ಮರೆತು ಅಳುವುದಕ್ಕೆ ಪ್ರಾರಂಭಿಸುತ್ತಾನೆ. ಗರ್ಭದಲ್ಲಿದ್ದ ನೆನಪುಗಳು ವೈಷ್ಣವೀ ಮಾಯೆಯಿಂದ ಮರೆಯಾಗುತ್ತದೆ. ಏನೂ ಅರಿಯದ ಪೆಂಗನಂತೆ ಬಾಲ್ಯ ಕಳೆದು, ಯೌವ್ವನ ಜಾರಿ, ಮತ್ತೆ ಜರೆಯಿಂದ ಬೆಂದು ಮರಣಶಯ್ಯೆಗೊರಗಿ ಪರಲೋಕದ ಸುಖ ಯಾ ದುಃಖವನ್ನುಂಡು ಮತ್ತೆ ಹುಟ್ಟು. ಹೀಗೆ ಗರ್ಭದಲ್ಲಿ ದುಃಖ, ಬಾಲ್ಯದಲ್ಲಿ ದುಃಖ, ಯೌವ್ವನದಲ್ಲಿ ಕಾಮ, ದ್ವೇಷಾದಿಗಳಿಂದ ಕಷ್ಟ, ಮತ್ತೆ ಅಸಹ್ಯ ವಾರ್ಧಕ್ಯ, ಭೀಕರ ಮರಣ. ಆದ್ದರಿಂದ ಘಟೀಯಂತ್ರದಂತೆ ತಿರುಗುವ ಈ ಸಂಸಾರ ಚಕ್ರದಿಂದ ಪಾರಾಗಿ ಮುಕ್ತನಾಗಬೇಕೆಂದಿರುವ ನಾನು ಈ ಪ್ರಾಪಂಚಿಕ ವಿಷಯದಲ್ಲಿ ನಿರ್ಲಿಪ್ತ. ಅಪ್ಪ! ಇದು ಕೇವಲ ಶಾಸ್ತ್ರದ ಮಾತು ಮಾತ್ರವಲ್ಲ. ನನ್ನ ಅನುಭವ. ವೈಶ್ಯನಾಗಿ ಹುಟ್ಟಿದಾಗ ಗೋವುಗಳಲ್ಲಿ ಮಾಡಿದ ಅಪರಾಧದ ಫಲವಾಗಿ ನರಕಕ್ಕೂ ಹೋಗಿದ್ದೆ. ದುಃಖ ಅನುಭವಿಸಿದ್ದೆ. ಈ ಸಂದರ್ಭದಲ್ಲಿ ಒಮ್ಮೆ ಇದ್ದಕ್ಕಿದ್ದ ಹಾಗೆ ಮೈಮನಗಳಿಗೆ ಸುಖವನ್ನು ಉಂಡ ಅನುಭವ. ಒಬ್ಬ ಮಹಾಪುರುಷನನ್ನು ಯಮಕಿಂಕರರು ಕರೆದುಕೊಂಡು ಬಂದಿದ್ದಾರೆ. ನಮಗಾದ ಸುಖ ಆ ಪುರುಷನ ಸಾನಿಧ್ಯದಿಂದ. ಆ ವ್ಯಕ್ತಿ ಯಮಕಿಂಕರರಲ್ಲಿ ಕೇಳಿದ. ಯಾವ ಅಪರಾಧಕ್ಕೆ ನನಗೀ ಕ್ರೂರ ನರಕ ದರ್ಶನ. ಜನಕ ವಂಶದಲ್ಲಿ ಹುಟ್ಟಿ, ವಿವಶ್ವತ್ ಎಂಬ ನಾಮಧೇಯದಿಂದ ಧರ್ಮಾತ್ಮನಾಗಿಯೇ ಬಾಳನ್ನು ಸವೆಸಿ, ಸುಖ ಮರಣವನ್ನು ಕಂಡ ನನಗೆ ಈ ದುಃಸ್ಥಿತಿ ಯಾತರಿಂದ **'ಸೋಽಹಂ ಕಥಮಿಮಂ ಪ್ರಾಪ್ತೋ ನರಕಂ ಭೃಶಂ ದಾರುಣಂ'**. ಯಮ ದೂತರೆಂದರು ಪೀವರೀ ಎಂಬ ನಿನ್ನ ಪತ್ನಿಯ ಋತುಕಾಲವನ್ನು ನಿರ್ಲಕ್ಷಿಸಿ ಇನ್ನೊಬ್ಬಾಕೆ ಕೈಕೆಯಿಯಲ್ಲಿ ಅನುರಕ್ತನಾದುದರ ಫಲವಿದು.

ಋತುಗಮನವೆನ್ನುವುದು ಪ್ರಜಾಪತಿಗೆ ನೀಡುವ ಆಹುತಿ. ಹೋಮಾಗ್ನಿಯು ಆಜ್ಯವನ್ನು ಬಯಸುವಂತೆ ಋತುಕಾಲದಲ್ಲಿ ಪ್ರಜಾಪತಿಯು ಬೀಜಾವಾಪವನ್ನು ಬಯಸುವನು. ಇದು ಸಣ್ಣ ವಿಚಾರದಂತೆ ಕಂಡರೂ ಇದು ದೇವಹೇಳನ. ಅದಕ್ಕೆ ಈ ಶಿಕ್ಷೆ. ನೀನು ಮಾಡಿದ ಪಾಪಕ್ಕೆ ಶಿಕ್ಷೆಯಾಯಿತು. ಇನ್ನು ಪುಣ್ಯಲೋಕವನ್ನು ಸೇರು ಎಂದರು ಯಮದೂತರು. ರಾಜ ನರಕದತ್ತ ಕಣ್ಣು ಹಾಯಿಸಿದ. ಅಲ್ಲಿಯ ಭೀಕರ ವಾತಾವರಣದಲ್ಲಿ ನರಳುವ ಜೀವಿಗಳನ್ನು ಕಂಡ. ಇದೆಲ್ಲ ಏನು ಯಾಕೆ? ಎಂದು ಕೇಳಿದಾಗ 'ಪುಣ್ಯ ಮತ್ತು ಪಾಪದ ಫಲವನ್ನು ಅನುಭವಿಸಿಯೇ ತೀರಬೇಕು. ಪಾಪಿಗಳು ಅವರ ಕರ್ಮದ ಫಲವನ್ನು ಇಲ್ಲಿ ಹೀಗೆ ಉಣ್ಣುತ್ತಿದ್ದಾರೆ' ಎಂದುತ್ತರವಿತ್ತರು ಯಮದೂತರು. ಯಾವ ಪಾಪಕ್ಕೆ ಎಂತಹ ಶಿಕ್ಷೆ ಎಂಬುದನ್ನೂ ವಿವರಿಸಿದರು. ಮುಂದೆ ಬರತಕ್ಕ ಜನ್ಮಗಳಿಗೂ, ಆ ಜನ್ಮ-ಸ್ಥಿತಿಗಳಿಗೂ ಪ್ರಾಕ್ತನ ಕರ್ಮವೇ ಕಾರಣವೆಂದು ತಿಳಿಸಿದರು. ಎಲ್ಲವನ್ನು ನೋಡಿದೆಯಷ್ಟೆ. ನಿನ್ನ ಸಂಶಯಕ್ಕೆ ಉತ್ತರವನ್ನು ಕೊಟ್ಟಾಯಿತು. ಇನ್ನು ಪುಣ್ಯಲೋಕಕ್ಕೆ ನಡೆ ಎಂದಾಗ, ಹಾಗೆಂದು ಹೊರಟ ರಾಜನನ್ನು ಕುರಿತು ಪಾಪಿಗಳಾದ ನಾವೆಲ್ಲಾ ಕೇಳಿಕೊಂಡೆವು ಒಂದು ಮುಹೂರ್ತ ನಿಲ್ಲು. ನಿನ್ನ ಅಂಗ ಸಂಗದಿಂದ ಬಂದ ಗಾಳಿ ನಮ್ಮ ಮೈಮನಗಳಿಗೆ ಮುದವನ್ನೀಯುತ್ತಿದೆ ಕೃಪೆದೋರು ಎಂದಾಗ ಕನಿಕರಗೊಂಡ ರಾಜಾ ವಿಪಶ್ಚಿತ್ ಯಮನಾಳುಗಳಲ್ಲಿ ಕೇಳಿದ 'ನನ್ನ ಸನ್ನಿಧಾನ ಇವರಿಗೆಲ್ಲ ಆನಂದವನ್ನುಂಟು ಮಾಡುವ ಆ ಮಹಾಪುಣ್ಯ ನನ್ನದಾವುದಿದೆ' ಎಂದಾಗ 'ಇಡೀ ಜೀವನವನ್ನೇ ಯಜ್ಞವನ್ನಾಗಿ ರೂಪಿಸಿ ಬದುಕಿದ್ದ ನಿನ್ನ ಪುಣ್ಯ ಅಂತಾದ್ದು' ಎಂದರು ಯಮದೂತರು. ಹಾಗಾದರೆ ಆರ್ತರ ಕಷ್ಟ ಪರಿಹರಿಸಿ ಅವರ ಕಣ್ಣಂಚಿನಲ್ಲಿ ಆನಂದಬಾಷ್ಪ ಸುರಿಸುವಾಗ ಆದ ಸುಖಕ್ಕೆ ಸದೃಶವಾದ ಸುಖ ಯಾವ ಲೋಕದಲ್ಲೂ ದುರ್ಲಭ. ಇಷ್ಟು ಜನ ನನ್ನಿಂದ ಸುಖ ಕಾಣುತ್ತಾರಾದರೆ ನಾನಿಲ್ಲೆ ಇದ್ದು ಬಿಡುವೆ. ಹೀಗೆಂದು ರಾಜ ಹೇಳಿದಾಗ, ಯಮದೂತರು' ಇವರು ಮಾಡಿದ ಪಾಪದ ಫಲವೇ ಇವರ ದುಃಖಕ್ಕೆ ಕಾರಣ ಹೊರತು ಅದನ್ನು ನಾವೇನು ಮಾಡುವ ಹಾಗಿಲ್ಲ. ಹಠಮಾಡದೇ ಸತ್ಯವರಿತು ಇತ್ತ ಬಾ ಇದೋ ದಿವ್ಯ ವಿಮಾನ ಸಜ್ಜಾಗಿದೆ ಇದೋ ಇಂದ್ರನೇ ದಿವ್ಯ ರಥವನ್ನು ತಂದಿದ್ದಾನೆ, ಧರ್ಮರಾಜನೂ ಸ್ವಾಗತಿಸುತ್ತಿದ್ದಾನೆ' ಎಂದಾಗ 'ಕಷ್ಟದಲ್ಲಿದ್ದವರ ರಕ್ಷಣೆ ರಾಜನಾದ ನನ್ನ ಕರ್ತವ್ಯ. ಯಾವ ಪುಣ್ಯದ ಫಲವನ್ನುಣ್ಣುವುದಕ್ಕೆ ನನ್ನನ್ನು ನೀವು ಸ್ವರ್ಗಕ್ಕೆ ಕರೆದೊಯ್ಯುವಿರೋ ಆ ಪುಣ್ಯದ ಪ್ರಮಾಣವೇನು?' ಎಂದು ರಾಜ ಪಟ್ಟು ಹಿಡಿದಾಗ, ಧರ್ಮನೆಂದ 'ಸಾಗರದ ನೀರು ಅಪಾರ, ಆಗಸದ ತಾರೆಗಳು ಅನಂತ, ಗಂಗೆಯ ಮರಳೂ ಅಗಣ್ಯ, ಮಳೆಯ ನೀರಧಾರೆಗೂ ಲೆಕ್ಕವಿಲ್ಲ, ಹಾಗೆಯೇ ನಿನ್ನ ಪುಣ್ಯವೂ ಕೂಡಾ. ಮತ್ತೆ ದೀನರ ದುಃಖಕ್ಕೆ ಸ್ಪಂದಿಸುವ ಈ ನಿನ್ನ ಗುಣವೂ ಮಾನ್ಯವಾದುದೇ. (ಸಶೇಷ)

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಮನೋಹರ ವಿಠಲದಾಸರು ಸಹ-

ಇರಳು ಹಗಲರವತ್ತು ಘಳಿಗೆಯು
ಪರಿಪರಿಯ ದಿವಸದಲಿ ಸಂತ
ನೀರಸತರ ಸಂಸಾರಾಬ್ಧಿಯೊಳು ಮುಳುಗಿರದೆ ।
ಅರಘಳಿಗೆ ಸದ್ಭಕ್ತಿಯಲಿ ಶ್ರೀ
ಹರಿಕಥಾಮೃತಸಾರ ಸವಿದರೆ
ಶಿರಿ ಮನೋಹರ ವಿಠಲನಡಿದಾವರೆಯ ಸೇರುವರು ॥

ಎಂದು ಹೇಳಿ ಮೇಲ್ಕಂಡ ವಿಷಯವನ್ನೇ ಸಮರ್ಥಿಸಿರುವರು. ಹರಿಕಥಾಮೃತಸಾರ ವ್ಯಾಖ್ಯಾನ ಕರ್ತೃಗಳಲ್ಲೊಬ್ಬರಾದ ಕಮಲಾಪತಿದಾಸರು 'ಹರಿಕಥಾಮೃತಸಾರ' ಎಂದು ಹೆಸರಿನಲ್ಲಿರುವ ಪ್ರತಿ ಅಕ್ಷರದ ಮಹಿಮೆಯನ್ನು ಬಣ್ಣಿಸುತ್ತಾ

**ಹ** ಎನಲು ಹರಿಯೊಲಿಯುವನು ತಾ
ರಿ ಎನಲು ರಿಕ್ತತ್ವ ಹರಿವುದು
**ಕ** ಎನಲುಕತ್ತಲೆಯ ಅಜ್ಞಾನವನು ಪರಿಹರಿಪ
**ಥಾ** ಎನಲು ಸ್ಥಾಪಿಸುವ ಜ್ಞಾನವ
**ಮೃ** ಎನಲು ಮೃತಿ ಜನಿಯ ಖಂಡಿಪ
**ತ** ಎನಲು ಹರಿ ತನ್ನ ಮೂರ್ತಿಯ ತೋರುವನು ನಿತ್ಯ ॥
**ಸಾ** ಎನಲು ಸಾಧಿಸುವ ಮುಕ್ತೀ
**ರ** ಎನಲು ರತಿಯಿತ್ತು ರಮಿಪನು
ಕಾಯವಾಙ್ಮನದೆಂಟು ಅಕ್ಕರ ನುಡಿಯುವವರೊಳಗೇ
ಶ್ರೀಯರಸ ವಿಶ್ವಾದಿ ಅಷ್ಟೈ
ಶ್ವರ್ಯ ರೂಪದಿ ನಿಂತು ತಾ ಪರ
ಕೀಯನೆನಿಸದೆ ಕಾವನ ಮನದೊಳು ರಾಜಿಪನು ಬಿಡದೇ

ಎಂದು ನುಡಿದು ಪರಮಾತ್ಮನ ಪರಮಾನುಗ್ರಹವು ಈ ಗ್ರಂಥದಿಂದಾಗುವುದೆಂದು ಒತ್ತಿ ಹೇಳಿದ್ದಾರೆ. ಇಲ್ಲಿ ಕಮಲಾಪತಿದಾಸರು 'ಶ್ರೀಯರಸ ವಿಶ್ವಾದಿ ಅಷ್ಟೈಶ್ವರ್ಯ ರೂಪದಿ

ನಿಂತು' ಎಂಬ ವಾಕ್ಯವನ್ನು ಪ್ರಯೋಗಿಸಿ 'ಹರಿಕಥಾಮೃತಸಾರ' ಎಂಬ ಗ್ರಂಥದ ಈ ಹೆಸರಿನಲ್ಲೇ ಓಂಕಾರಾರ್ಥವು ಅಡಗಿದೆ ಎಂದು ಸೂಚಿಸಿರುವರು.

ಓಂಕಾರವು ಅಕಾರ, ಉಕಾರ, ಮಕಾರ, ನಾದ, ಬಿಂದು, ಘೋಷ, ಶಾಂತ, ಅತಿಶಾಂತ ಎಂಬ ಎಂಟು ವರ್ಣಗಳಿಂದ ಕೂಡಿದ್ದಾಗಿದೆ. ಈ ಎಂಟುವರ್ಣಗಳಲ್ಲಿ ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಎಂಬ ಪರಮಾತ್ಮನ ಎಂಟು ಮೂರ್ತಿಗಳು ನಿಂತು ನಲಿಯುತ್ತಿರುವವು. ಇಂತಹ ಓಂಕಾರ ಪ್ರತಿಪಾದ್ಯನಾದ ವಿಶ್ವಾದ್ಯಷ್ಟರೂಪಗಳುಳ್ಳ ಶ್ರೀಹರಿಯು 'ಹರಿಕಥಾಮೃತಸಾರ' ವೆಂಬಲ್ಲಿರುವ ಎಂಟು ಅಕ್ಷರಗಳಲ್ಲಿ ಕ್ರಮವಾಗಿ ವಿಶ್ವಾದಿ ಎಂಟು ರೂಪಗಳಿಂದ ನಿಂತಿರುವನೆಂಬುದೇ ದಾಸಾರ್ಯರ ಅನುಸಂಧಾನ ಓಂಕಾರದಿಂದಲೇ **'ಓಂ ನಮೋ ನಾರಾಯಣಾಯ'** ಎಂಬ ಮಹಾಮಂತ್ರದ ಪ್ರಾದುರ್ಭಾವ. ಈ ಅಷ್ಟಾಕ್ಷರ ಮಹಾಮಂತ್ರದಲ್ಲೇ ಸಕಲ ವೈದಿಕ-ಲೌಕಿಕ ವಾಙ್ಮಯ ಪ್ರಪಂಚವೆಲ್ಲವೂ ಅಡಗಿನಿಂತಿದೆ. **'ಓಂ ನಮೋ ನಾರಾಯಣಾಯೇತಿ ಸಿದ್ಧಂ ತನ್ನಾಮ ವೇದಾವಳಿಗರ್ಥಕೋಲೆ'** ಈ ಅನುಸಂಧಾನದಿಂದ ಅನುಭಾವಿಗಳೆನಿಸಿ ಆನಂದಪಡೆದ ದಾಸರುಗಳ ಪುಣ್ಯಕ್ಕೆ ಈಡುಂಟೇ. ಹರಿಕಥಾಮೃತಸಾರದ ಹಿರಿಮೆಯನ್ನು ಎಷ್ಟೆಂದು ವರ್ಣಿಸಲು ಸಾಧ್ಯ. ಜಗನ್ನಾಥದಾಸರಲ್ಲಿರುವ ಪರಮಾತ್ಮನ ಅನುಗ್ರಹ ವಿಶೇಷವನ್ನು ಬಲ್ಲವನೇ ಬಲ್ಲ. ಜಗನ್ನಾಥದಾಸರ ಸಮಕಾಲೀನರೂ. ನಂತರ ಕಾಲದ ಅನೇಕ ಜ್ಞಾನಿಗಳು ಹರಿಕಥಾಮೃತಸಾರ ಮಹಾಗ್ರಂಥದ ಅಧ್ಯಯನ-ಮನನಾದಿಗಳಿಂದ ಆನಂದಿಸುತ್ತಾ ಜೀವನವನ್ನು ಸಾರ್ಥಕಗೊಳಿಸಿಕೊಂಡರು. ಎಲ್ಲ ಜ್ಞಾನಿಗಳು ತಮ್ಮ ತಮ್ಮ ಯೋಗ್ಯತೆಗನುಗುಣವಾಗಿ ಹರಿಕಥಾಮೃತಸಾರ ಸುಧಾ ಸಮುದ್ರದಲ್ಲಿ ಮುಳುಗಿ ಅಪೂರ್ವ ವಿಷಯ ರತ್ನ ರಾಶಿಗಳನ್ನೇ ಹೊರ ತೆಗೆದು ಸಾಧಕ ಲೋಕಕ್ಕೆ ಹಂಚಿಕೊಟ್ಟರು. ಕನ್ನಡ ಭಾಷೆಯಲ್ಲಿ ರಚಿಸಲ್ಪಟ್ಟ ಈ ಗ್ರಂಥಕ್ಕೆ ಸಂಸ್ಕೃತ ಭಾಷೆಯಲ್ಲಿ ರೂಪುಗೊಂಡ ಹಿರಿದಾದ ವೇದಾಂತ ಗ್ರಂಥಗಳಿಗಿರುವಂತೆ ಅನೇಕ ವ್ಯಾಖ್ಯಾನಗಳು ಇರುವುದು ಆಶ್ಚರ್ಯದ ಸಂಗತಿ. ಅದರಲ್ಲೂ ಮೂರು ಸಂಸ್ಕೃತ ವ್ಯಾಖ್ಯಾನಗಳು. ಇಲ್ಲಿಯವರೆಗೂ ಬೆಳಕು ಕಂಡ ಪ್ರಾಚೀನ ವ್ಯಾಖ್ಯಾನಗಳು ಅನೇಕ. ಉಪಲಬ್ಧವಿರುವ ಸಮಗ್ರವ್ಯಾಖ್ಯಾನಗಳು ಆರಾದರೆ, ಅಸಂಪೂರ್ಣ ವ್ಯಾಖ್ಯಾನಗಳು ಹತ್ತಾರು. ಹರಿಕಥಾಮೃತಸಾರದ ಈ ವೈಭವಕ್ಕೆ ಪ್ರಧಾನಕಾರಣ ಜಗನ್ನಾಥದಾಸರಲ್ಲಿ ಅಡಕವಾದ ಮಧ್ವಪತಿ ರಮಾರಮಣನ ಅನುಗ್ರಹವೇ. ಇದನ್ನೂ ಮನಗಂಡ ಪ್ರಾಣೇಶದಾಸರು.

ತಿಳಿಯಾನು ಎಂದೆಂದಿಗನ್ಯ ರಂಗ
ಒಲಿದ ದಾಸರು ಜಗನ್ನಾನ್ಯ ಎಂದು ಕೊಂಡಾಡಿರುವರು

★

ಮುಖಪುಟಲೇಖನ

# ಜವನ ಭಾದೆಯನ್ನು ಬಿಡಿಸೋ ತ್ರಿವಿಕ್ರಮ

**–ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ**

ತ್ರಿವಿಕ್ರಮರೂಪಿ ಪರಮಾತ್ಮನು ಜ್ಯೇಷ್ಠಮಾಸದ ನಿಯಾಮಕ. ಭಗವಂತನ ದ್ವಾದಶಮೂರ್ತಿಗಳಲ್ಲಿ ಏಳನೆಯದ್ದಾದ ಈ ತ್ರಿವಿಕ್ರಮರೂಪವು ಮೇಲಿನ ಬಲಗೈಲಿ ಗದೆಯನ್ನು ಎಡಗೈಲ್ಲಿ ಚಕ್ರವನ್ನು, ಕೆಳಗಿನ ಎಡಗೈಲಿ ಶಂಖವನ್ನು, ಬಲಗೈಲ್ಲಿ ಪದ್ಮವನ್ನು ಧರಿಸಿರತಕ್ಕಂತಹದ್ದು ಎಂದು ಶ್ರೀಮಧ್ವಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ. ವಾಮನನಾಗಿದ್ದ ಭಗವಂತನು ಬಲಿಯ ಅಹಂಕಾರನಿಗ್ರಹಕ್ಕಾಗಿ ತ್ರಿವಿಕ್ರಮ ರೂಪವನ್ನು ಸ್ವೀಕರಿಸಿದ್ದು ಎಲ್ಲರಿಗೂ ವಿದಿತವಾದ ವಿಚಾರ. ಆದರೆ ಆ ತ್ರಿವಿಕ್ರಮ ರೂಪವೇ ಬೇರೆ, ದ್ವಾದಶಮೂರ್ತಿಗಳಲ್ಲಿ ಬರುವ ಈ ತ್ರಿವಿಕ್ರಮ ರೂಪವೇ ಬೇರೆ. ಭಗವಂತನಿಗೆ ತ್ರಿವಿಕ್ರಮ ಎಂಬ ಹೆಸರಿನ ಎರಡು ರೂಪವಿದೆ ಎಂದು ತಿಳಿದುಕೊಳ್ಳಬೇಕು.

ಶ್ರೀವಾದಿರಾಜರು ತೀರ್ಥಪ್ರಬಂಧದಲ್ಲಿ ತ್ರಿವಿಕ್ರಮನನ್ನು ವರ್ಣಿಸುತ್ತಾ, **"ತ್ರಿವಿಕ್ರಮೋ ವಿಜಯತೇ ತ್ರಯೀವಿಖ್ಯಾತವಿಕ್ರಮಃ"** ಎಂದು ಸ್ತುತಿಸಿದ್ದಾರೆ. ತ್ರಯೀ ಎಂದರೆ ಸಮಸ್ತ ವೇದಗಳು ಎಂದು ಅರ್ಥ. ಆ ವೇದಗಳಲ್ಲಿ ಪ್ರಸಿದ್ಧವಾದ ಪರಾಕ್ರಮವುಳ್ಳವನು ಎಂದು ಅರ್ಥ. ಅಂದರೆ ವೇದಗಳೆಲ್ಲವೂ ಕೂಡ ಭಗವಂತನ ಮಹಿಮೆಗಳನ್ನೇ ತಿಳಿಸುತ್ತವೆ ಎಂದು ಅರ್ಥ. ಆ ಕಾರಣದಿಂದ ಭಗವಂತನಿಗೆ ಈ ಅಭಿಧೇಯ ಎಂದು ಶ್ರೀವಾದಿರಾಜರು ತಿಳಿಸುತ್ತಾರೆ. ಬಲಿ ನಿಗ್ರಹಿಯಾದ ಗಂಗಾ ಜನಕನಾದ ತ್ರಿವಿಕ್ರಮನ ಪರವಾಗಿ ಈ ವಾಕ್ಯವನ್ನು ಅರ್ಥೈಸಿಕೊಂಡಾಗ ಬೇರೆಯೇ ಅರ್ಥವು ಲಭಿಸುತ್ತದೆ. ಕ್ರಮ=ಹೆಜ್ಜೆ ಎಂದು ಅರ್ಥ. ವಿಕ್ರಮ=ವಿಶಿಷ್ಟವಾದ ಹೆಜ್ಜೆ ಎಂದು ಅರ್ಥ. ಭಗವಂತನೂ ವಿಶಿಷ್ಟ. ಭಗವಂತನ ಕ್ರಿಯೆಯೂ ಕೂಡ ವಿಶಿಷ್ಟ. ಆದ್ದರಿಂದ ಭಗವಂತನು ತ್ರಿವಿಕ್ರಮ ರೂಪದಲ್ಲಿ ಇಟ್ಟ ಮೂರು ಹೆಜ್ಜೆಯು ಅತ್ಯಂತ ವಿಶಿಷ್ಟವಾದ್ದದ್ದು. ಆ ಹೆಜ್ಜೆಗಳಿಂದಾಗಿ ಮೂರು ಲೋಕಕ್ಕೆ ನೀರುಣಿಸುವ ಗಂಗೆಯ ಪ್ರಾದುರ್ಭಾವವಾಯಿತು. ಬಲಿರಾಜನ ಅಹಂಕಾರ ನಿಗ್ರಹವಾಯಿತು. ಈ ಮೂರು ಹೆಜ್ಜೆಗಳಿಂದಾಗಿ ಇಡೀ ಜಗತ್ತೇ ಪಾವನವಾಯಿತು. ಈ ರೀತಿಯಾಗಿ ವಿಶಿಷ್ಟವಾದ ಭಗವಂತನ ಹೆಜ್ಜೆಗಳು **"ಇದಂ ವಿಷ್ಣುರ್ವಿಚಕ್ರಮೇ", "ತ್ರೀಣಿ ಪದಾ ವಿಚಕ್ರಮೇ"** ಎಂಬುದಾಗಿ ವಿಷ್ಣುಸೂಕ್ತದಲ್ಲಿ ಹೊಗಳಲ್ಪಟ್ಟಿವೆ. ಆದ್ದರಿಂದ ಶ್ರೀವಾದಿರಾಜರು ವೇದದಲ್ಲಿ ಪ್ರಸಿದ್ಧವಾದ ಹೆಜ್ಜೆಗಳುಳ್ಳವ ಎಂದು ತ್ರಿವಿಕ್ರಮನನ್ನು ಸ್ತುತಿಸಿದ್ದಾರೆ.

**ತ್ರಿಸ್ಮಷು ಅವಸ್ಥಾಸು ವಿಕ್ರಮಃ ಯಸ್ಯ ಸಃ ತ್ರಿವಿಕ್ರಮಃ** ಅಂದರೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬುದು ಮನುಷ್ಯರಿಗೆ ಬರುವ ಮೂರು ಅವಸ್ಥೆಗಳು. ಆ ಮೂರೂ ಅವಸ್ಥೆಗಳಲ್ಲಿ

ಪರಾಕ್ರಮವುಳ್ಳವನು ಎಂದು ಅರ್ಥ. ಅಂದರೆ ನಮಗೆ ಆಯಾಯ ಅವಸ್ಥೆಗಳಲ್ಲಿ ಆಗಬೇಕಾದ ಕ್ರಿಯೆಗಳನ್ನು ನಮ್ಮೊಳಗಿದ್ದುಕೊಂಡು ಸಮರ್ಥವಾಗಿ ನಿಭಾಯಿಸುವವ ಎಂದು ಅರ್ಥ.

**ತ್ರಿಷು ಲೋಕೇಷು ವಿಕ್ರಮಃ ಯಸ್ಯ ಸಃ ತ್ರಿವಿಕ್ರಮಃ** ಪಾತಾಳಲೋಕ ಭೂಲೋಕ ಸ್ವರ್ಲೋಕ ಈ ಮೂರು ಲೋಕಗಳಲ್ಲಿ ಪರಾಕ್ರಮವುಳ್ಳವನು ಎಂದು ಅರ್ಥ. ಅಂದರೆ ಬ್ರಹ್ಮಾಂಡದೊಳಗೆ ಎಲ್ಲಾ ಕಡೆ ಇದ್ದು ಅಲ್ಲಿಯ ಎಲ್ಲಾ ಕ್ರಿಯೆಗಳೂ ಕೂಡ ಕ್ರಮವಾಗಿ ನಡೆಯುವಂತೆ ಮಾಡುವವ ಎಂದು ಅರ್ಥ. ತ್ರಿಷುಗುಣೇಷು ವಿಕ್ರಮಃ ಯಸ್ಯ ಸಃ ತ್ರಿವಿಕ್ರಮಃ ಮೂರು ಗುಣಗಳು ಅಂದರೆ ಸತ್ವ ರಜಸ್ಸು ತಮಸ್ಸು ಎಂದು. ಆ ಮೂರು ಗುಣಗಳಲ್ಲಿ ಪರಾಕ್ರಮವುಳ್ಳವನು ಎಂದು ಅರ್ಥ. ಆ ಸತ್ವಾದಿ ಗುಣಗಳನ್ನು ನಿಯಮಿಸುವವನು ಎಂದು ಅರ್ಥ.

**ತ್ರಿಷುಕಾಲೇಷು ವಿಕ್ರಮಃ ಯಸ್ಯ ಸಃ ತ್ರಿವಿಕ್ರಮಃ** ಭಗವಂತನು ಸರ್ವಶಕ್ತ ಈ ಎಲ್ಲಾ ಶಕ್ತಿಗಳು ಇರುವುದು ಕೇವಲ ಒಂದು ಕಾಲದಲ್ಲಿ ಮಾತ್ರವಲ್ಲ. ಭೂತ, ವರ್ತಮಾನ, ಭವಿಷ್ಯತ್ಕಾಲ ಈ ಮೂರು ಕಾಲದಲ್ಲಿಯೂ ಕೂಡ ಪರಾಕ್ರಮವುಳ್ಳವನು. ಆದ್ದರಿಂದ ಭಗವಂತನಿಗೆ ಈ ಹೆಸರು. ಇದೇ ಅರ್ಥವನ್ನು ವಿಷ್ಣುಸಹಸ್ರನಾಮದಲ್ಲಿ ಭೂತಭವ್ಯಭವತ್ಪ್ರಭುಃ ಎಂಬುದಾಗಿ ತಿಳಿಸಿದ್ದಾರೆ.

ಶ್ರೀಕನಕದಾಸರು **ಕವಿದುಕೊಂಡು ಇರುವ ಪಾಪ ಸವೆದು ಪೋಗುವಂತೆ ಮಾಡಿ ಜವನ ಬಾಧೆಯನ್ನು ಬಿಡಿಸೋ ಶ್ರೀತ್ರಿವಿಕ್ರಮ** ಎಂದು ಸ್ತುತಿಸಿದ್ದಾರೆ. ನಮ್ಮಲ್ಲಿ ತಮೋ ಗುಣವು ಅಧಿಕವಾಗಿದ್ದಾಗ ನಾವು ಕೆಟ್ಟಕೆಲಸಗಳನ್ನು ಮಾಡುತ್ತೇವೆ. ಕೆಟ್ಟ ಕೆಲಸವನ್ನು ಮಾಡಿದರೆ ಅದರಿಂದ ಬರುವ ಪಾಪದ ಫಲವನ್ನು ಅನುಭವಿಸುವುದಕೋಸ್ಕರ ಯಮನ ಲೋಕಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ನಾನಾ ವಿಧವಾದ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆದರೆ ತ್ರಿವಿಕ್ರಮ ರೂಪೀ ಪರಮಾತ್ಮನನ್ನು ನೆನೆದರೆ ನಮಗೆ ಈ ಸಮಸ್ಯೆಯು ಇರಲಾರದು. ಯಾಕೆಂದರೆ ತ್ರಿವಿಕ್ರಮ ಅಂದರೆ ಮೂರುಗುಣಗಳಲ್ಲಿಯೂ ಪರಾಕ್ರಮವುಳ್ಳವ ಎಂದು ಹಿಂದೆಯೇ ನೋಡಿದ್ದೇವೆ. ಆದ್ದರಿಂದ ಅವನಿಗೆ ತಮೋಗುಣದಲ್ಲಿಯೂ ಪರಾಕ್ರಮವಿದೆ. ಅದನ್ನು ನಿಗ್ರಹಿಸುವ ಸಾಮರ್ಥ್ಯವೂ ಇದೆ. ನಾವು ತ್ರಿವಿಕ್ರಮನನ್ನು ಸ್ತುತಿಸಿದರೆ ತಮೋಗುಣವು ನಮ್ಮಲ್ಲಿ ಬರದಂತೆ ಮಾಡಿ ನಮ್ಮಿಂದ ಪಾಪಕೆಲಸವು ನಡೆಯದಂತೆ ಮಾಡಿ ಆ ಪಾಪದ ಫಲವಾದ ಯಮಲೋಕ ಪ್ರಾಪ್ತಿಯನ್ನೂ ಕೂಡ ತಡೆಯುತ್ತಾನೆ. ಆದ್ದರಿಂದಲೇ ಕನಕದಾಸರು ತ್ರಿವಿಕ್ರಮ ರೂಪಿ ಪರಮಾತ್ಮನನ್ನು "ನನ್ನ ಪಾಪಗಳನ್ನೆಲ್ಲಾ ನಾಶಮಾಡಿ ಯಮನು ಕೊಡುವ ಪಾಪದ ಫಲರೂಪವಾದ ಬಾಧೆ ಏನಿದೆ ಅದು ನನಗೆ ಉಂಟಾಗದಂತೆ ಮಾಡು ಎಂದು ಸ್ತುತಿಸಿದ್ದಾರೆ. ಅವರು ತಿಳಿಸಿದಂತೆ ನಾವು ಕೂಡ ತ್ರಿವಿಕ್ರಮನನ್ನು ಸ್ತುತಿಸಿ ಪಾಪಕ್ಕೆ ಕಾರಣವಾದ ಕೆಟ್ಟ ಕೆಲಸಗಳನ್ನು ಮಾಡದೆ ಸತ್ಕರ್ಮಗಳನ್ನೇ ಮಾಡಿ ಭಗವತ್ಕೃಪೆಗೆ ಪಾತ್ರರಾಗೋಣ. ★

# ತ್ರಿವಿಕ್ರಮರೂ ತಲೆಬಾಗಿದರು

–ಅನಂತಕೃಷ್ಣಾಚಾರ್ಯ

ಆಚಾರ್ಯರು ತಮ್ಮ ಅಭಿಪ್ರಾಯವನ್ನು ಸಮರ್ಥಿಸುವ, ಪರಮತದ ಅಭಿಪ್ರಾಯವನ್ನು ಅಲ್ಲಗಳೆಯುವ ಯುಕ್ತಿಯುಕ್ತವಾದ ವ್ಯಾಖ್ಯಾನವನ್ನು ತ್ರಿವಿಕ್ರಮಪಂಡಿತರು ಕೇಳುತ್ತಿರುವಂತೆಯೆ ನಡೆಸಿ ಮುಗಿಸಿದರು. ಆಚಾರ್ಯರ ಉಪನ್ಯಾಸಭಾರತಿಯು ಸಮಾಪ್ತಿಗೊಳ್ಳುತ್ತಿರಲು ತ್ರಿವಿಕ್ರಮಪಂಡಿತರು ತಮ್ಮ ನಿಶಿತವಾದ ಬುದ್ಧಿಯಿಂದ ಪ್ರೇರೇಪಿಸಲ್ಪಟ್ಟು, ಆಚಾರ್ಯರ ಅಭಿಪ್ರಾಯವನ್ನು ಖಂಡಿಸುವ, ಪರಮತಗಳನ್ನು ಸಮರ್ಥಿಸುವ ತರ್ಕದ ಮಾತುಗಳನ್ನು ಧೈರ್ಯದಿಂದಲೆ ಆಚಾರ್ಯರ ಎದುರು ಮಂಡಿಸಿದರು. ಇದು ಯೋಧನೊಬ್ಬ ಎದುರಾಳಿಯನ್ನು ಮಣಿಸಲು ಬಿಲ್ಲಿಗೆ ತೀಕ್ಷ್ಣವಾದ ಬಾಣವೇರಿಸಿ ಬಲದಿಂದ ಎಳೆದು ಬಿಡುವಂತಿತ್ತು.

ಆಚಾರ್ಯರಾದರೋ ಆ ಎಲ್ಲ ತರ್ಕದ ಮಾತುಗಳನ್ನು ನಗುನಗುತ್ತಲೆ ಇನ್ನಷ್ಟು ತೀಕ್ಷ್ಣವಾದ ತರ್ಕದ ಮಾತುಗಳಿಂದ ಖಂಡಿಸಿದರು.

ತ್ರಿವಿಕ್ರಮಪಂಡಿತರು ತಮ್ಮ ತರ್ಕದ ಮಾತುಗಳು ವ್ಯರ್ಥವಾಗಲು ಗೆಲ್ಲುವ ಛಲದಿಂದ ಇನ್ನಷ್ಟು ಬಲಿಷ್ಠವಾದ, ಮರುಉತ್ತರಕೊಡಲಾಗದ, ವೇದದ ಮಾತುಗಳಿಂದ ತಮ್ಮ ವಾದವನ್ನು ಮಂಡಿಸಿ ಆಚಾರ್ಯರ ಮತವನ್ನು ಖಂಡಿಸಿದರು. ಇದು ಯೋಧನೊಬ್ಬ ಎದುರಾಳಿಯನ್ನು ಶಸ್ತ್ರದಿಂದ ಸೋಲಿಸಲು ಅಸಾಧ್ಯವಾಗಲು ಅಸ್ತ್ರಗಳನ್ನು ಪ್ರಯೋಗಿಸುವಂತಿತ್ತು.

ಇಡಿಯ ಸಭೆ ದಂಗಾದರೂ ಆಚಾರ್ಯರು ನಗುತ್ತಲೇ ಇದ್ದರು. ತಮ್ಮ ವಾದವನ್ನು ಖಂಡಿಸಲು, ಪರವಾದವನ್ನು ಮಂಡಿಸಲು ತ್ರಿವಿಕ್ರಮಪಂಡಿತರು ಪ್ರಯೋಗಿಸಿದ ವೇದದಮಾತುಗಳಿಗೆ ಆಚಾರ್ಯರು ಇನ್ನಷ್ಟು ಸಮರ್ಥವಾದ ವೇದವಾಕ್ಯಗಳಿಂದ ಬೇರೆ ರೀತಿಯಿಂದ ಅರ್ಥೈಸಿ ಆ ವೇದದ ಮಾತುಗಳಿಂದಲೇ ತ್ರಿವಿಕ್ರಮಪಂಡಿತರ ವಾದವನ್ನು ಖಂಡಿಸಿದರು.

ಇದು ಒಬ್ಬ ಯೋಧ ತನ್ನ ವಿರುದ್ಧವಾಗಿ ಪ್ರಯೋಗಿಸಿದ ಆಗ್ನೇಯಾಸ್ತ್ರವನ್ನು ವಾರುಣಾಸ್ತ್ರದಿಂದ ಉಪಶಮನಗೊಳಿಸುವಂತಿತ್ತು. ಹೀಗೆ ಆಚಾರ್ಯರಿಗೂ, ತ್ರಿವಿಕ್ರಮಪಂಡಿತರಿಗೂ ವಾದ ನಡೆಯಿತು. ಒಂದು ದಿನವೋ, ಎರಡು ದಿನವೋ, ಏಳೆಂಟು ದಿನ ನಡೆಯಿತು. ಇಷ್ಟು ದಿನಗಳಲ್ಲಿ ಆಚಾರ್ಯರು ತ್ರಿವಿಕ್ರಮ ಪಂಡಿತರ ವಾದವನ್ನು

ಖಂಡಿಸಿದರು. ಅವರ ಮನಸ್ಸಿನಲ್ಲಿದ್ದ ಸಂಶಯವನ್ನು ಪರಿಹರಿಸಿದರು. ಅವರಿಂದ ಸಮರ್ಥಿಸುವ ಮಾತೇ ಹೊರಡದಂತೆ ನಿರುತ್ತರರನ್ನಾಗಿಸಿದರು.

ತ್ರಿವಿಕ್ರಮಪಂಡಿತರಾದರೋ ಸ್ವಾಭಾವಿಕವಾಗಿಯೇ ಶಿಷ್ಟರು. ಒಳ್ಳೆಯ ನಡತೆಯನ್ನು ಬಲ್ಲವರು. ಆದ್ದರಿಂದಲೆ ಆಚಾರ್ಯರಿಂದ ಸೋತು ಸಿಟ್ಟಾಗಲಿಲ್ಲ. ಆಚಾರ್ಯರನ್ನು ನಿಂದಿಸಲಿಲ್ಲ. ಆಚಾರ್ಯರ ಎದುರು ಕುಳಿತವರು ಎದ್ದು ನೇರವಾಗಿ ಬಳಿಗೆ ಬಂದರು. ಎರಡೂ ಕೈಗಳನ್ನು ಜೋಡಿಸಿದರು. ಆಚಾರ್ಯರ ಪಾದಪದ್ಮಗಳಿಗೆ ಉದ್ದಂಡ ಪ್ರಣಾಮವನ್ನು ಸಲ್ಲಿಸಿದರು. 'ಹೇ ಸ್ವಾಮಿ; ಈ ಅಲ್ಪನ ಚಾಪಲವನ್ನು ಕ್ಷಮಿಸಿರಿ. ತಮ್ಮ ಅಡಿದಾವರೆಯ ಧೂಳಿನ ಕಣದ ಸೇವಾಭಾಗ್ಯವನ್ನು ಅವಶ್ಯವಾಗಿ ಕರುಣಿಸಿರಿ' ಎಂದು ಪ್ರಾರ್ಥಿಸಿದರು. ಅಂದಿನಿಂದ ಆಚಾರ್ಯರ ಶಿಷ್ಯರಾದರು. ಆಚಾರ್ಯರ ಮುಖಕಮಲದಿಂದ ಬ್ರಹ್ಮಸೂತ್ರ ಭಾಷ್ಯವನ್ನು ಶ್ರವಣ ಮಾಡಿದರು. ಇದರಿಂದ ಸಜ್ಜನವೃಂದ ಖುಷಿಪಟ್ಟಿತು. ದುರ್ಜನರಿಗೆ ದುಃಖವಾಯಿತು.

ಅತ್ಯಂತ ಪ್ರೀತಿಪಾತ್ರರಾದ ತ್ರಿವಿಕ್ರಮಪಂಡಿತರಿಗೆ ಆಚಾರ್ಯರು ತಾವು ರಚಿಸಿದ ಬ್ರಹ್ಮಸೂತ್ರಭಾಷ್ಯಕ್ಕೆ ಟೀಕೆಯನ್ನು ರಚಿಸುವಂತೆ ಆಜ್ಞಾಪಿಸಿದರು. ಗುರುಗಳ ಮೇಲಿನ ಅತಿಯಾದ ಗೌರವದಿಂದ ಯಾರಿಗೂ ದಕ್ಕದ ಭಾಷ್ಯದ ಟೀಕೆಯನ್ನು ರಚಿಸುವ ಹೊಣೆ ಹೊತ್ತ ತ್ರಿವಿಕ್ರಮಪಂಡಿತರು ಶ್ರೀಮದಾಚಾರ್ಯರ ಮುಂದೆ ಹೀಗೆ ವಿನಂತಿಸಿಕೊಂಡರು.

## ಸೂತ್ರಭಾಷ್ಯದ ವೈಶಿಷ್ಟ್ಯ

'ಗುರುಗಳೇ; ಶ್ರೇಷ್ಠಜ್ಞಾನಿಗಳು ತಮ್ಮ ಬ್ರಹ್ಮಸೂತ್ರ ಭಾಷ್ಯವೆಂಬ ಕಡಲಿನಿಂದ ಯುಕ್ತಿಯ ಮುತ್ತುಗಳನ್ನು ನಿರಂತರವಾಗಿ ಹೆಕ್ಕಿದರೂ ಮುಗಿಯುವುದಿಲ್ಲ. ಇದರ ಆಳ ಅದ್ಭುತವಾದುದು'. ಈ ಮಾತಿನ ತಾತ್ಪರ್ಯ ಹೀಗಿದೆ– ಬ್ರಹ್ಮಸೂತ್ರಗಳು ವೇದಮಾತುಗಳ ಅರ್ಥಗಳನ್ನು ಯುಕ್ತಿಯುಕ್ತವಾಗಿ ನಿರ್ಣಯಿಸುತ್ತವೆ. ಆ ಯುಕ್ತಿಗಳು ಯಾವುವೆಂದು ಆಚಾರ್ಯರು ತಮ್ಮ ಭಾಷ್ಯದಲ್ಲಿ ಬಹಳ ವಿಸ್ತಾರವಾಗಿ ತಿಳಿಸಿದ್ದಾರೆ. ಸಾಮಾನ್ಯವಾಗಿ ವೇದಮಾತುಗಳಿಗೆ ಅರ್ಥೈಸಲು ಬೇಕಾದ ಯುಕ್ತಿಗಳು ಉಪಕ್ರಮ; ಉಪಸಂಹಾರ, ಅಭ್ಯಾಸ ಅಪೂರ್ವತಾ............ಹಾಗೆಯೇ ಪ್ರಮಾಣಗಳ ಪ್ರಾಬಲ್ಯ, ದೌರ್ಬಲ್ಯ..........ಹಾಗೆಯೇ ಸಾವಕಾಶ, ನಿರವಕಾಶ ಮುಂತಾದುವುಗಳು. ಇಂತಹ ನ್ಯಾಯಗಳನ್ನು ಆಚಾರ್ಯರು ತಮ್ಮ ಭಾಷ್ಯದಲ್ಲಿ ಬಹಳ ವಿಸ್ತಾರವಾಗಿ ತಿಳಿಸಿ ಬ್ರಹ್ಮಸೂತ್ರಗಳ ಉದ್ದೇಶವನ್ನು ಇಡೇರಿಸಿದ್ದಾರೆ ಎಂಬುದು ತ್ರಿವಿಕ್ರಮಪಂಡಿತರ ಅಭಿಪ್ರಾಯ. (ಸಶೇಷ)

# ಬುಧಶ್ಚ ಬುಧತಾಂ ದಿಶೇತ್

-ಶ್ರೀಪತಿ ಉಪಾಧ್ಯಾಯ, ಕುಂಭಾಸಿ

ಬುಧನು ದೂರ್ವೆಯಂತೆ ಶ್ಯಾಮಲ ಕಾಂತಿಯುಳ್ಳವನಾಗಿದ್ದಾನೆ. ಈತನು ಪಂಚತಾರಾ ಗ್ರಹಗಳಲ್ಲಿ ಒಬ್ಬನಾಗಿದ್ದಾನೆ. ಈತನು ತಟಸ್ಥಗ್ರಹ. ಗುರುಶುಕ್ರರೊಂದಿಗಿದ್ದರೆ ಶುಭನೂ, ಪಾಪಗ್ರಹರಾದ ಶನಿ, ಕುಜ, ರವಿ, ಕ್ಷೀಣಚಂದ್ರರೊಂದಿಗಿದ್ದರೆ ಪಾಪನಾಗುತ್ತಾನೆ. ಈತನು ಪೃಷ್ಠೋದಯನು ಅಂದರೆ ಪಶ್ಚಿಮಾಭಿಮುಖನಾಗಿರುವಾಗ ಉದಯಿಸುವನು. (ಶಿರೋದಯ ಮೊದಲು ಎಂಬ ಅರ್ಥವೂ ಇದೆ) ಇತನು ಪಕ್ಷಿಸ್ವರೂಪನು. ಗ್ರಾಮ ಸಂಚಾರಿಯೂ, ವಿದ್ವಾಂಸರ ಮನೆಯಲ್ಲಿ ಸ್ಥಿತನೂ ಆಗಿರುವನು. ಈತನು ಕುಮಾರನು. ಜೀವಗ್ರಹನು. ಅಥರ್ವವೇದಕ್ಕೆ ಅಧಿಪತಿಯು. ಶುಕ್ತಿಯು ಇವನ ದ್ರವ್ಯವಾಗಿದೆ (ಕಂಜ ಮಿಶ್ರವಾದ ಧಾತು) ಮರಕತವು ಇವನ ರತ್ನವಾಗಿದೆ. ನೀರಿನಿಂದ ಒದ್ದೆಯಾದ ವಸ್ತ್ರವುಳ್ಳವನು. ಉತ್ತರದಿಕ್ಕಿಗೆ ಅಧಿಪತಿಯು, ರವಿ, ಶುಕ್ರರು ಇವನ ಮಿತ್ರರು. ಚಂದ್ರನು ಶತ್ರುವು. ರವಿ,ಕುಜ, ಶನಿಗಳು ಸಮರು. ಈತನು ತನ್ನ ಸ್ಥಾನದಿಂದ 7ನೇ ಮನೆಯನ್ನು ಪೂರ್ಣದೃಷ್ಟಿಯಿಂದ ನೋಡುವನು. ಗೋಚರದಲ್ಲಿ ಜನ್ಮ, ತೃತೀಯ, ಪಂಚಮ, ಸಪ್ತಮ, ನವಮ, ದ್ವಾದಶಗಳಲ್ಲಿ ಅತಿ ದೋಷಪ್ರದನು. ತತ್ರಾಪಿ ಸಪ್ತಮದಲ್ಲಿ ಅತಿ ದೋಷಪ್ರದನು. ಗೋಚರಕಾಲದಲ್ಲಿ ರಾಶಿಯಲ್ಲಿ ಆದಿ, ಮಧ್ಯ ಅಂತ್ಯದಲ್ಲಿ ಸರ್ವದಾಫಲದಾತೃನಾಗಿರುವನು. ಆಶ್ಲೇಷಾ, ಜ್ಯೇಷ್ಠಾ, ರೇವತಿ ಇವನ ನಕ್ಷತ್ರವಾಗಿದೆ. 17 ವರ್ಷ ಇವನ ದಶಾಪ್ರಮಾಣವಾಗಿದೆ. ಮಾರಕಾಧಿಪತ್ಯ (2 ಮತ್ತು 7) ಅತಿ ದೋಷಪ್ರದವಾಗಿದೆ. ಈತನಿಗೆ ಕೇಂದ್ರಾಧಿಪತ್ಯ ದೋಷ. ಗುರು, ಶುಕ್ರರಷ್ಟು ಪ್ರಬಲವಲ್ಲ. ಈತನು ನಪುಂಸಕಗ್ರಹನು. ಪಂಚಭೂತಗಳಲ್ಲಿ ಭೂಮಿಗೆ ಅಧಿಪತಿಯು. ವಿಂಧ್ಯದಿಂದ ಗಂಗಾನದಿಯವರೆಗಿನ ಪ್ರದೇಶಕ್ಕೆ ಅಧಿಪತಿಯು. ಈತನು ಶೂದ್ರ ಕುಲೀನನು. ರಜೋಗುಣ ಪ್ರಧಾನನು. ಚರ್ಮಕಾರಕನು. ಮಿಶ್ರರಸವು ಇವನ ರಸವಾಗಿದೆ. ಚತುರ್ಥ, ಸಪ್ತಮಕ್ಕೆ ಕಾರಕನಾಗಿರುತ್ತಾನೆ. ಚತುರ್ಥಸ್ಥಾನದಲ್ಲಿ ಕಾರಕನಾದ ಪ್ರಯುಕ್ತ ಫಲನೀಡುವುದಿಲ್ಲ. ಓಜರಾಶಿಗಳಲ್ಲಿ 18ರಿಂದ 25 ಭಾಗಗಳು ಯುಗ್ಮರಾಶಿಗಳಲ್ಲಿ 5ರಿಂದ 12 ಭಾಗಗಳೂ ಇವನ ತ್ರಿಂಶಾಂಶ ಭಾಗಗಳಾಗಿವೆ. ಹಸಿರುವರ್ಣಕ್ಕೆ ಈತನು ಸ್ವಾಮಿಯು. ವಾತ, ಪಿತ್ತ

ಕಫಾತ್ಮಕ ತ್ರಿದೋಷವುಳ್ಳವನು. ಗದ್ಗದ ಭಾಷಿಯು. ಶ್ಲೇಷ (ನಾನಾರ್ಥಕ) ಭೂಯಿಷ್ಠ ಮಾತಾಡುವುದರಲ್ಲಿ ಜಾಣನೂ, ಹಾಸ್ಯದಲ್ಲಿ ಅಭಿರುಚಿಯುಳ್ಳವನೂ, ಹೇಮಂತ ಋತುವಿಗೆ ಅಧಿಪತಿಯೂ. ಕಾಲಬಲದಲ್ಲಿ ಋತಗಳ ನಿರ್ದೇಶಕನೂ, ರಾತ್ರಿ ಹಾಗೂ ಹಗಲಿನಲ್ಲಿ ಸಮಾನ ಬಲವುಳ್ಳವನೂ, ವಿಫಲ ವೃಕ್ಷಗಳ ಕಾರಕನೂ ಆಗಿರುವನು. ಉತ್ತರಣೆ ಈತನ ಸಮಿಧೆ. ವಿಷ್ಣುವಿನ ಹಾಗೂ ಆತನ ಅವತಾರ ಮೂರ್ತಿಗಳ ಚಿಂತನೆ ಈತನಿಂದ ನಡೆಯುತ್ತದೆ. ಗರ್ಭವಾಗಿ ಮಗುವಿನ 4ನೇ ಮಾಸಕ್ಕೆ ಅಧಿಪತಿಯು. ಚರ್ಮೋತ್ಪತ್ತಿ ಆ ಮಾಸದಲ್ಲಿ ನಡೆಯುತ್ತದೆ. ಅನೇಕ ಶಿಲ್ಪಿಗಳಿಂದ ಕಲಾತ್ಮಕವಾಗಿ ನಿರ್ಮಾಣಗೊಂಡ ಮಂದಿರಕ್ಕೆ ಈತ ಅಧಿಪತಿ. ಈತನು ವಿದ್ಯೆ, ಬಂಧು, ವಿದೇಶ, ಸಹೋದರ ಮಾವ, ಸ್ನೇಹಿತರಿಗೆ ಕಾರಕನು. ಜಾತಕದ ರಾಹುದೋಷವನ್ನು ಬಲಿಷ್ಠ ಬುಧನು ಪರಿಹರಿಸುವನು. ಸರಸ್ವತಿ ನದಿಗೆ ಕಾರಕನು. ಶಾಲಗ್ರಾಮಕ್ಕೆ ಕಾರಕನೀತ. ಈತನ ಪ್ರಾಯ 20 ವರ್ಷ. ಈತನ ಧಾನ್ಯ ಹೆಸರು. ಮಗಧ ದೇಶಕ್ಕೆ ಅಧಿಪತಿಯು. ಗಂಧಕ್ಕೆ ಕಾರಕನು. ಜೀವಗಣಕ್ಕೆ ಅಧಿಪನು. ಸಂಪತ್‌ತಾರೆಗೆ ಈತನು ಅಧಿಪತಿಯಾಗಿರುವನು. ಗೋಮಾಂತಕ, ಹಿಮಾಲಯ ತಪ್ಪಲುಪ್ರದೇಶ. ಬದರೀ, ವೈಕುಂಠಲೋಕಗಳು ಈತನಿಗೆ ಸಂಬಂಧಿಸಿವೆ. ಸೇತುವೆ, ಜಲಮಾರ್ಗ, ಪೇಟೆ, ಬಾವಿ, ನೀರೆತ್ತುವ ಯಂತ್ರ ಗಾಂಧರ್ವ ವಿದ್ಯೆ, ಬರವಣಿಗೆ, ರತ್ನಗಳ ಬಣ್ಣ, ಚಿತ್ರಕಲೆ, ಗಣಿತಜ್ಞರು, ದ್ಯೂತವಿದ್ಯೆ, ಅಕ್ಷವಿದ್ಯೆ, ರಾಯಭಾರಿಗಳು, ಇಂದ್ರಜಾಲ, ಶಿಲ್ಪಶಾಸ್ತ್ರಕ್ಕೆ ಈತನು ಕಾರಕನು. ನರ್ತಕರು, 9ನೇ ಸಂಖ್ಯೆ, ಪತ್ರಿಕೆ, ಪುಸ್ತಕ, ಪಟೇಲ, ಶ್ಯಾನುಭೋಗ, ಸಾಹಿತಿಗಳ ಚಿಂತನೆ ಬುಧನಿಂದ ನಡೆಯುತ್ತದೆ. ಈತನು ಅನಿಷ್ಟಪ್ರದನಾದಾಗ ಚರ್ಮರೋಗ, ನರಸಂಬಂಧಿ ತೊಂದರೆ, ಕಂಠರೋಗ, ದುರ್ವಚನ, ಬುದ್ಧಿಮಾಂದ್ಯ, ಉನ್ಮಾದ, ಬಂಧನ, ದೇಹಶ್ರಮ, ಗಂಧರ್ವಪೀಡೆ, ವಿಷ್ಣುಕೋಪ. ಮಾರ್ಜಾಲಹನನ ಪಾಪ, ಪಕ್ಷಿಪೀಡೆಗಳಿಂದ ಕ್ಲೇಶದಾಯಕನಾಗುವನು. ಪರಿಹಾರಕ್ಕಾಗಿ 14,000 ಬುಧ ಮಂತ್ರಜಪ, ಸತ್ಯನಾರಾಯಣ ಪೂಜೆ, ಶ್ರೀರಾಮ, ಕೃಷ್ಣಮಂತ್ರಜಪ, ಶಾಲಗ್ರಾಮದಾನ, ವಿಷ್ಣುಸಹಸ್ರನಾಮ ಪಾರಾಯಣ, (ಬುಧನ ಸಂಖ್ಯೆಯಿಂದ 93) ವಿಷ್ಣು ಸೂಕ್ತ ಪಠನ, ಪವಮಾನ ಹೋಮ, ಪಾರಾಯಣ, ಗೋದಾನ, ವೇಂಕಟೇಶ ಸ್ತೋತ್ರ, ಕೃಷ್ಣಾಷ್ಟೋತ್ತರಶತನಾಮ, ಸುಂದರಕಾಂಡ, ರಾಮಾಯಣ, ಮಹಾಭಾರತ, ಹರಿವಂಶ ಪಾರಾಯಣ, ನೃತ್ಯಸೇವೆ ಹೆಸರುದಾನ, ದೇವರಿಗೆ ಮುದ್ಗಾನ್ನ ನೈವೇದ್ಯ, ಸ್ವರ್ಣ ಯಾ ರಜತದ ಮಾರ್ಜಾಲ ದಾನವು ನರರೋಗಗಳಿಗೆ ಕ್ಷೇಮವನ್ನು ನೀಡುತ್ತದೆ. ದೇವರಿಗೆ ಧೂಪ, ಚಂದನ, ಗಂಧ ಸಮರ್ಪಣೆಯಿಂದ ಅರಿಷ್ಟ ಪರಿಹಾರ. ಪಚ್ಚೆಯ ದಾನ

ಧಾರಣೆಯಿಂದ ನೆಮ್ಮದಿ. ಕೈಯಲ್ಲಿ ಕನಿಷ್ಠಿಕಾ ಬೆರಳಿನ ಬುಡದಲ್ಲಿ ಬುಧ ಪರ್ವವಿದೆ. ಅಲ್ಲಿ ಮಣಿಧಾರಣೆ ಶುಭದಾಯಕ. ಕೇಂದ್ರಕೋಣ, ಉಚ್ಚ, ಸ್ವಕ್ಷೇತ್ರ, ಮೂಲತ್ರಿಕೋಣದಲ್ಲಿದ್ದರೆ ಭದ್ರಯೋಗವಾಗುವುದು. ರವಿಯೊಂದಿಗೆ ಸೇರಿದಾಗ ನಿಪುಣಯೋಗವೂ, ಇದೇ ಯೋಗ ಶುಭಕ್ಷೇತ್ರದಲ್ಲಿ ಹಾಗೂ ರವಿ, ಬುಧಕ್ಷೇತ್ರದಲ್ಲಿ ಉಂಟಾದಾಗ ಬುಧಮಧುರ ಯೋಗವಾಗುವುದು. ಈತನು ಷಷ್ಠ, ಅಷ್ಟಮ, ವ್ಯಯದಲ್ಲಿದ್ದರೆ ಮಾನಸಿಕ ದೌರ್ಬಲ್ಯವಿರುವುದು. ಇವರೊಂದಿಗೆ ಕುಜನು ಸೇರಿದಾಗ ಸಂಶೋಧಕನನ್ನಾಗಿಯೂ, ಈ ಯೋಗ ಅಬಾಧಿತವಾದರೆ ಗಣಿತ ಪಟುವನ್ನಾಗಿಯೂ ನಿರೂಪಿಸುತ್ತಿದೆ. ಬುಧ ಚಂದ್ರಯೋಗ ಮಾತುಗಾರನನ್ನೂ, ಬುಧ ಕುಜಂಯೋಗ ಮಲ್ಲರನ್ನೂ, ನಿಪುಣವ್ಯಾಪಾರಿಗಳನ್ನೂ ಬುಧ ಗುರು ಯೋಗರಂಗಕಲಾವಿರದನ್ನೂ, ಬುಧ ಶುಕ್ರಯೋಗ ನೃತ್ಯಕಲಾವಿದರನ್ನೂ ಗ್ರಾಮ್ಯರಸಿಕರನ್ನೂ ರೂಪಿಸುತ್ತಿದೆ. ಬುಧ ಶನಿಯೋಗ ಇಂದ್ರಜಾಲ ಕಲಾವಿದರನ್ನು ವಂಚಕರನ್ನೂ ಸೂಚಿಸುತ್ತದೆ. ಶುಭ ಬುಧನು ದಶಾಕಾಲದಲ್ಲಿ ಗುರುಜನರ, ವಿದ್ವಾಂಸರ, ಸಜ್ಜನರ ಒಳ್ಳೆಯ ಸ್ನೇಹಿತರ ಧನಾಗಮನವನ್ನು ಯಶಸ್ಸು, ಕೀರ್ತಿಯನ್ನು, ವ್ಯಾಪಾರದಲ್ಲಿ ಔನ್ನತ್ಯವನ್ನು ಉಂಟುಮಾಡುತ್ತಾನೆ. ಉಪಾಸನೆ ಸಿದ್ಧಿಯಾಗುವುದು. ಧಾರ್ಮಿಕ ಕ್ರಿಯೆಗಳು ಸಿದ್ಧಿಯನ್ನು ಹೊಂದುತ್ತವೆ. ಬುಧನು ಅಶುಭನಾದರೆ ಶ್ರಮ. ಬಂಧನ, ನರರೋಗ, ದುಃಖಕ್ಕೆ ಕಾರಣನಾಗುವನು. ತ್ರಿಮಧುರಯುಕ್ತ ದೂರ್ವೆಯಿಂದ ಬುಧಮಂತ್ರದಿಂದ ಹೋಮಿಸಿದರೆ ಶುಭಫಲವಾಗುವುದು. ಈತನಿಗೆ ಲಗ್ನದಲ್ಲಿ ದಿಗ್ಬಲವಿದೆ. ಈತನ ರಾಶಿ ಸಂಖ್ಯೆ ಐದು.

★

---

## ಶ್ರೀಮಠದ ಅಂತರ್ಜಾಲತಾಣ

ಶ್ರೀಮಠದ ಅಧಿಕೃತ ಅಂತರ್ಜಾಲತಾಣ **www.palimarumatha.org** ಪ್ರಾರಂಭವಾಗಿದ್ದು ಶ್ರೀಮಠದ ಎಲ್ಲಾ ಕಾರ್ಯಕ್ರಮ ವಿವರಗಳು, ಶಾಖಾಮಠದ ವಿವರಗಳು ಗುರುಕುಲದ ವಿವರಗಳು ಇತ್ಯಾದಿ ಹತ್ತು ಹಲವು ವಿಷಯಗಳು ದಿನದ ಎಲ್ಲಾ ಸಮಯದಲ್ಲೂ ಲಭ್ಯವಿರುತ್ತದೆ. ಹಾಗೂ ಸರ್ವಮೂಲದ ಪತ್ರಿಕೆಗಳು ಇದರಲ್ಲಿ ಲಭ್ಯ. ಶ್ರೀಕೃಷ್ಣನಿಗೆ ವಜ್ರಕವಚ ಸಮರ್ಪಣೆಯ ವಿಡಿಯೋ, ಧಾರ್ಮಿಕ-ಅಧ್ಯಾತ್ಮಿಕ ಕಾರ್ಯಕ್ರಮಗಳ ವಿಡಿಯೋಗಳು ಉಚಿತವಾಗಿ ಲಭ್ಯವಿದೆ.

ಪುರಾಣ ಪರಿಚಯ

ಭಾಗ–32

# ಶ್ರೀವಿಷ್ಣುಪುರಾಣ

## ಹರಿಭಕ್ತ ಪ್ರಹ್ಲಾದನಿಗೆ ಸೋಲಿಲ್ಲ

–ಸ್ಫೂರ್ತಿ

ಹಿರಣ್ಯಕಶಿಪುವಿನಿಂದ ಮತ್ತೆ ಗುರುಕುಲಕ್ಕೆ ಕಳುಹಿಸಲ್ಪಟ್ಟ ಪ್ರಹ್ಲಾದನು ಗುರುಶುಶ್ರೂಷೆಯಲ್ಲಿ ನಿರತನಾಗಿ ಗುರುಗಳು ಕಲಿಸಿದ ವಿದ್ಯೆಯನ್ನು ಕಲಿತ. ಹಲವು ಸಮಯ ಕಳೆಯಿತು. ಒಮ್ಮೆ ಹಿರಣ್ಯಕಶಿಪು ಮಗನನ್ನು ಕರೆದ. 'ಮಗು, ಇಂದು ಯಾವುದಾದರೊಂದು ವಿಷಯವನ್ನರುಹು' ಎಂದು ನುಡಿದ. ಪ್ರಹ್ಲಾದನು ಕೂಡಲೆ 'ಯಾರಿಂದಾಗಿ ಪ್ರಕೃತಿ, ಮಹತ್ತತ್ವ, ಸಮಸ್ತ ಜಗತ್ತು ಸೃಷ್ಟಿಯಾಗುತ್ತಿದೆಯೋ ಯಾರು ಸಕಲಕ್ಕೂ ಕಾರಣನಾಗಿದ್ದಾನೋ ಅಂತಹ ವಿಷ್ಣುವು ಪ್ರಸನ್ನನಾಗಲಿ' ಎಂದು ಭಕ್ತಿಯಿಂದ ಕೈಜೋಡಿಸಿ ನುಡಿದನು. ಕೂಡಲೆ ಸೇವಕರಿಗೆ 'ಇವನು ಪಾಪಿ, ಇಂಥವನು ಬದುಕಿ ಏನೂ ಲಾಭವಿಲ್ಲ. ನಮ್ಮ ಪಕ್ಷಕ್ಕೆ ವಿರುದ್ಧವಾಗಿ ನಡೆದು ಕುಲಕ್ಕೆ ಮಸಿ ಬಳೆಯಲು ಹೊರಟಿರುವ ಇವನನ್ನು ಕೊಂದು ಬಿಡಿ' ಎಂದು ಆಜ್ಞಾಪಿಸಿದ. ಕೂಡಲೆ ದೈತ್ಯಸೈನ್ಯ ವಿವಿಧ ಆಯುಧಗಳೊಂದಿಗೆ ಮುನ್ನುಗ್ಗಿತು. ಪ್ರಹ್ಲಾದನು 'ಎಲೈ ದೈತ್ಯರೇ; ಶ್ರೀ ವಿಷ್ಣುವೇ ಶಸ್ತ್ರ, ನಿಮ್ಮಲ್ಲಿ, ನನ್ನಲ್ಲಿ ನೆಲೆಸಿದ್ದಾನೆ. ಈ ಸತ್ಯದಿಂದಾಗಿ ನಿಮ್ಮ ಆಯುಧವು ನನಗೇನೂ ಮಾಡಲಾರದು' ಎಂದು ನುಡಿದನು.

ದೈತ್ಯರಿಗೆ ಈ ಮಾತು ಹೇಗೆ ಕೇಳಲು ಸಾಧ್ಯ? ಅವರೆಲ್ಲರೂ ವಿಧ ವಿಧವಾದ ಅಸ್ತ್ರಗಳೊಂದಿಗೆ ಪ್ರಹ್ಲಾದನ ಮೇಲೆ ಮುನ್ನುಗ್ಗಿ ಬಂದರು. ತಮ್ಮ ಶಸ್ತ್ರಗಳಿಂದ ಪ್ರಹ್ಲಾದನನ್ನು ಬಗೆ ಬಗೆಯಿಂದ ಹೊಡೆಯಲು, ಸೀಳಲು, ಚುಚ್ಚಲು ಪ್ರಯತ್ನಿಸಿದರು. ಆದರೆ ಹರಿಭಕ್ತನಾದ ಪ್ರಹ್ಲಾದನಿಗೆ ಯಾವ ಬಗೆಯ ವೇದನೆಯೂ ಉಂಟಾಗಲಿಲ್ಲ. ಇನ್ನಷ್ಟು ಬಲವೆ ತುಂಬಿತು.

ಹಿರಣ್ಯಕಶಿಪುವಿಗೆ ವಿಷಯ ತಿಳಿಯಿತು. ಮಗನನ್ನು ಕುರಿತು 'ಹೇ ದುರ್ಬುದ್ಧಿ; ನನ್ನ ವೈರಿಯ ಪಕ್ಷದಿಂದ ಹಿಂದೆ ಸರಿ. ನನ್ನಾಜ್ಞೆಯನ್ನು ಪಾಲಿಸು. ನಿನಗೆ ಅಭಯವನ್ನು ನೀಡಿದ್ದೇನೆ. ಮತ್ತೆ ಮೂರ್ಖನಾಗಬೇಡ' ಎಂದು ಗುಡುಗಿದನು.

ಪ್ರಹ್ಲಾದ– ತಂದೆ; ಯಾವ ಶ್ರೀಹರಿಯ ಸ್ಮರಣೆ ಮಾತ್ರದಿಂದ ಹುಟ್ಟು ಸಾವುಗಳ ಭಯವೇ ನಿವಾರಣೆಯಾಗುತ್ತದೆ ಅಂತಹ ಭಯವನ್ನೆಲ್ಲ ಪರಿಹರಿಸುವ ಶ್ರೀಹರಿಯು ನನ್ನೊಳಗಿರಲು ಭಯಕ್ಕೆ ಅವಕಾಶವೆಲ್ಲಿದೆ? ಎಂದು ನುಡಿದನು.

ಮತ್ತೆ ಹಿರಣ್ಯಕಶಿಪು ಸಿಟ್ಟಿನಿಂದ ಕೆಂಡವಾದ. ಸರ್ಪಕುಲವನ್ನೇ ಕರೆದ. 'ಅತ್ಯಂತ

ದುರಾಚಾರಿಯಾದ, ದುಷ್ಟ ಬುದ್ಧಿಯ ಈತನನ್ನು ವಿಷದ ಜ್ವಾಲೆಯುಳ್ಳ ನಿಮ್ಮ ಮುಖಗಳಿಂದ ಕೂಡಲೆ ಭಸ್ಮ ಮಾಡಿರಿ' ಎಂದು ಆದೇಶಿಸಿದ.

ಈ ಮಾತನ್ನು ಕೇಳಿದೊಡನೆಯೇ ಅತ್ಯಂತ ಕ್ರೂರನಾದ, ಮಹಾವಿಷಧರನಾದ ತಕ್ಷಕನೇ ಮೊದಲಾದ ಸರ್ಪಗಳು ಪ್ರಹ್ಲಾದನ ಅಂಗಾಂಗಗಳನ್ನು ಎಲ್ಲ ಕಡೆಗಳಲ್ಲೂ ಕಚ್ಚಿದವು, ವಿಷಜ್ವಾಲೆಯನ್ನುಗುಳಿದವು. ಭಗವಂತನಲ್ಲಿಯೇ ಆಸಕ್ತನಾಗಿ ಆನಂದಭರಿತನಾದ ಪ್ರಹ್ಲಾದನಿಗೆ ಹಾವುಗಳು ಕಚ್ಚಿದರೂ ನೋವಾಗಲಿಲ್ಲ, ವಿಷ ಕೊಲ್ಲಲಿಲ್ಲ.

ಸರ್ಪಗಳು ಹಿರಣ್ಯಕಶಿಪುವಿನ ಬಳಿಗೆ ಬಂದವು. 'ದೈತ್ಯೇಶ್ವರ, ನಮ್ಮ ಹಲ್ಲುಗಳು ಮುರಿದವು. ಮಣಿಗಳು ಅಲುಗಾಡಲಾರಂಭಿಸಿವೆ. ಹೆಡೆಯಲ್ಲಿ ನೋವು, ಹೃದಯದಲ್ಲಿ ಭಯ ಉಂಟಾಗಿದೆ. ಆದರೆ ಪ್ರಹ್ಲಾದನ ಮೈಯ ಚರ್ಮ ಸ್ವಲ್ಪವೂ ಹರಿಯಲಿಲ್ಲ. ಇನ್ನೇನು ಮಾಡಬೇಕೆಂದು ಆದೇಶಿಸು' ಎಂದು ನುಡಿದವು. ಹಿರಣ್ಯಕಶಿಪು ಅವುಗಳನ್ನು ಕಳುಹಿಸಿದ. ದಿಗ್ಗಜಗಳನ್ನು ಬರುವಂತೆ ಆದೇಶಿಸಿದ. ಆ ಒಂದೊಂದು ಗಜವೂ ಪರ್ವತ ಶಿಖರದಂತಿದ್ದವು. ದಂತಗಳು ಭೂಮಿಯನ್ನು ಸ್ಪರ್ಶಿಸುತ್ತಿದ್ದವು. ಅವೆಲ್ಲವೂ ಒಟ್ಟಾಗಿ ಪ್ರಹ್ಲಾದನ ಮೇಲೆರಗಿ ಎದೆಗೆ ಬಡಿದು ದಂತ ಮುರಿದುಕೊಂಡವು. ಪ್ರಹ್ಲಾದನಾದರೋ ಕೂಡಲೆ ತಂದೆಗೆ ಹೇಳಿದ. 'ಅಪ್ಪ, ಆನೆಗಳ ದಂತ ಮುರಿದದ್ದು ನನ್ನಿಂದಲ್ಲ. ನನ್ನೊಳಗೆ ಎಲ್ಲ ವಿಪತ್ತುಗಳನ್ನು ಪರಿಹರಿಸುವ ಜನಾರ್ದನನ ಸ್ಮರಣೆಯ ಪ್ರಭಾವವಿದು' ಎಂದು.

ದಿಗ್ಗಜಗಳನ್ನು ಅಲ್ಲಿಂದ ಅಟ್ಟಿದ ತಂದೆ ಅಗ್ನಿಗೆ ಸುಡುವಂತೆ ಆದೇಶಿಸಿದ, ವಾಯುವು ಆ ಅಗ್ನಿಯನ್ನು ಬೀಸಿ ಬೆಳೆಸುವಂತೆ ಅಜ್ಞಾಪಿಸಿದ. ಕಟ್ಟಿಗೆಯ ರಾಶಿ ಹಾಕಿ ಪ್ರಹ್ಲಾದನನ್ನು ಮೇಲಿರಿಸಿ ಬೆಂಕಿ ಇಟ್ಟರು. ಪ್ರಹ್ಲಾದ ಜ್ವಲಿಸುವ ಅಗ್ನಿಯ ಮಧ್ಯದಿಂದಲೆ ತಂದೆಯನ್ನು ಕುರಿತು ನುಡಿದ. 'ಅಪ್ಪ, ಈ ಅಗ್ನಿಯು ನನ್ನನ್ನು ಸುಡುತ್ತಿಲ್ಲ. ನನಗೀಗ ಬಹಳ ತಂಪಾದ ಅನುಭವವಾಗುತ್ತಿದೆ. ನನ್ನ ಸುತ್ತಲೂ ಕಮಲಗಳರಳಿದಂತೆ ಕಾಣುತ್ತಿದೆ' ಎಂದು ನುಡಿದ.

(ಸಶೇಷ)


## ಮಧ್ವಮತ ಪ್ರಚಾರಕ್ಕಾಗಿ ಶ್ರೀಮಠದಿಂದ ವಿಶಿಷ್ಟವಾದ ಒಂದು ಯೋಜನೆ

ಶ್ರೀಮಠದ ಇನ್ನೊಂದು ಅತ್ಯುತ್ತಮ ಸೇವೆಗಳಲ್ಲಿ ಒಂದಾದ **ಪ್ರವಚನ ನೇರಪ್ರಸಾರ** ಶ್ರೀಗಳ ಪ್ರವಚನ ಎಲ್ಲೇ ನಡೆಯುತ್ತಿರಲಿ ಅದನ್ನು ನೀವು ನಿಮ್ಮ ಮನೆಯಲ್ಲಿಯೇ ಕೇಳಬಹುದು. **www.livepravachana.com** ಅಂತರ್ಜಾಲತಾಣದಲ್ಲಿ ಉಚಿತವಾಗಿ ಶ್ರೀಗಳ ಎಲ್ಲಾ ಪ್ರವಚನಗಳು ಲಭ್ಯವಿದೆ. ಎಲ್ಲಾ ಮಾಧ್ವಬಂಧುಗಳು ಇದರ ಉಪಯೋಗವನ್ನು ಪಡೆಯಬೇಕೆಂದು ಅಪೇಕ್ಷಿಸುತ್ತೇವೆ.

**Palimarumatha Web Team**

ಭಾಗ-2

# ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ

**-ಡಿ. ಗುರುಪ್ರಸಾದ್ ಭಟ್**

ವಿಶ್ವದ ಸ್ವರೂಪವನ್ನು ಮೊದಲು ತಿಳಿಯುವ ಸಂದರ್ಭದಲ್ಲಿ ವಿಶ್ವನಿಯಾಮಕನಾದ, ವಿಶ್ವಾಂತರ್ಯಾಮಿಯಾದ ವಿಶ್ವನ ಸ್ವರೂಪವನ್ನು ಮೊದಲು ತಿಳಿದುಕೊಳ್ಳಬೇಕಾಗುತ್ತದೆ. ವಿಶ್ವನ ಸ್ವರೂಪವು ತಿಳಿಯಬೇಕಾದರೆ ವಿಶ್ವದ ಸ್ವರೂಪವನ್ನು ಮೊದಲು ತಿಳಿಯಬೇಕಾಗುತ್ತದೆ. 'ಮದುವೆ ಆಗದೇ ಹುಚ್ಚು ಬಿಡದು, ಹುಚ್ಚು ಬಿಡದೇ ಮದುವೆ ಆಗದು' ಎಂಬಂತೆ ಈ ವಿಚಾರ ಪರಸ್ಪರ ಅನ್ಯೋನ್ಯಾಶ್ರಯ ಉಳ್ಳದ್ದಾಗಿದೆಯಲ್ಲವೆ? ಆದರೂ ಒಂದು ತಿಳಿದರೆ ಅಂದರೆ ವಿಶ್ವನು ತಿಳಿದರೆ ಎಲ್ಲವೂ ತಿಳಿಯುತ್ತೆ. ಅಂದರೆ ವಿಶ್ವವೂ ತಿಳಿಯುತ್ತೆ. ಎಲ್ಲವೂ ತಿಳಿದರೆ, ಅಂದರೆ ವಿಶ್ವವು ತಿಳಿದರೆ ಒಂದು ತಿಳಿಯುತ್ತೆ. ಅಂದರೆ ವಿಶ್ವನೂ ತಿಳಿಯುತ್ತಾನೆ ಎಂಬುದು ಬಲ್ಲವರ ಅನುಭವದ ಅಂಬೋಣವಾಗಿದೆ. ಆದ್ದರಿಂದ ನಾವು ಮೊದಲು ವಿಶ್ವನ ಸ್ವರೂಪದ ಬಗ್ಗೆ ತಿಳಿಯಲು ಯತ್ನಿಸೋಣ.

ತಂತ್ರಸಾರ ಸಂಗ್ರಹ ಗ್ರಂಥದಲ್ಲಿ ಮಧ್ವರು 'ಓಂ'ಕಾರದ (ಪ್ರಣವ ಮಂತ್ರದ) ಅಕ್ಷರ ಪ್ರತಿಪಾದ್ಯ ಭಗವದ್ರೂಪಗಳನ್ನು ತಿಳಿಸುವಾಗ ಮೊದಲು **'ಸವಿಶ್ವ ತೈಜಸ ಪ್ರಾಜ್ಞ ತುರೀಯಾತ್ಮಾಂತರಾತ್ಮವಾನ್, ಪರಾತ್ಮಜ್ಞಾನಾತ್ಮಯುಜಾಂ'**-ಅನ್ನುತ್ತಾರೆ. ಅಂದರೆ ಪ್ರಣವದ ಅಕಾರ, ಉಕಾರ, ಮಕಾರ, ನಾದ, ಬಿಂದು, ಕಲೆ, ಶಾಂತ, ಅತಿಶಾಂತ ಈ 8 ಅಕ್ಷರಗಳಿಂದ ವಿಶ್ವಾದಿ 8 ಭಗವದ್ರೂಪಗಳು ಪ್ರತಿಪಾದ್ಯಗಳು. ಆದ್ದರಿಂದ ಈ ವಿಶ್ವ ಎಂಬ ರೂಪ ಪ್ರಣವದ ಆದಿ ಅಕ್ಷರವಾದ 'ಅ' ಕಾರದಿಂದ ಪ್ರತಿಪಾದ್ಯವಾಗಿದೆ. ಮಾತ್ರವಲ್ಲದೇ **'ಅಕ್ಷರಾಣಾಂ ಅಕಾರೋಸ್ಮಿ'** ಎಂಬಂತೆ ಕೃಷ್ಣನೂ ಕೂಡ ಗೀತೆಯಲ್ಲಿ 51 ಅಕ್ಷರಗಳಲ್ಲಿ ಆದಿ ಅಕ್ಷರವಾದ 'ಅ'ಕಾರವನ್ನು ಉಲ್ಲೇಖಿಸಿರುವುದು ಮತ್ತು ಆ ಅಕ್ಷರದಿಂದ 'ವಿಶ್ವ' ಎಂಬ ರೂಪವು ಪ್ರತಿಪಾದ್ಯವಾಗಿ, ವಿಶಿಷ್ಟತೆಯನ್ನು ಪಡೆದಿರುವುದು ಗಮನಿಸಬೇಕಾದ ಅಂಶವಾಗಿದೆ. ಅರ್ಥಾತ್ ವಿಶ್ವ ಎಂಬ ಭಗವದ್ರೂಪವೂ ಕೂಡ ಪ್ರಣವದ ಆದಿ ಅಕ್ಷರವಾದ 'ಅ'ಕಾರದಂತೆ. **'ಬೀಜಂಮಾಂಸಮಭೂತಾನಾಂ ವಿದ್ಧಿಪಾರ್ಥಸನಾತನಂ'** ಎಂಬ ಗೀತೋಕ್ತಿಯಂತೆ ಚೇತನಾಚೇತನಾತ್ಮಕವಾದ ಎಲ್ಲಾ ವಿಶ್ವಕ್ಕೂ ಮೂಲ ಕಾರಣವಾಗಿ ಆಶ್ರಯವಾಗಿದೆವೆಂಬುದನ್ನು ಗಮನಿಸಬೇಕಾಗುತ್ತದೆಯಲ್ಲವೆ?

ದೇವಪೂಜಾಸಂದರ್ಭದಲ್ಲಿ ಕಲಶದಲ್ಲಿ ಆವಾಹಿಸತಕ್ಕ 100 ಭಗವದ್ರೂಪಗಳಲ್ಲಿ (ಶತಕಲೆಗಳಲ್ಲ) ಈ ವಿಶ್ವಾದಿ 4 ರೂಪಗಳು ಅಂತರ್ಭೂತವಾಗಿವೆ. **'ಆತ್ಮಾದ್ಯಾ ವಾಸುದೇವಾದ್ಯಾ ವಿಶ್ವಾದ್ಯಾ ಮತ್ಸ್ಯ ಕಚ್ಛಪೌ'** ಎಂಬುದಾಗಿ ತಂತ್ರಸಾರದಲ್ಲಿ ಕಲಶದಲ್ಲಿ ಆವಾಹಿಸುವ ರೂಪಗಳಲ್ಲಿ ಈ ವಿಶ್ವರೂಪವು ಉಲ್ಲೇಖಿಸಲ್ಪಟ್ಟಿದೆ. ಆವರಣಪೂಜೆಯಲ್ಲೂ ಎರಡನೇ ಆವರಣದಲ್ಲಿ ಈ ವಿಶ್ವಾದಿ 4 ರೂಪಗಳು ಪೂಜನೀಯವಾದ ಸ್ಥಾನವನ್ನು ಹೊಂದುತ್ತದೆ.

ಈ 'ವಿಶ್ವ'ರೂಪದ ಬಗ್ಗೆ ವಿಶೇಷವಾಗಿ ತಿಳಿಯಬೇಕಾದ ವಿಚಾರವೇನೆಂದರೆ, ಈ ರೂಪ ಜೀವರನ್ನು ಎಚ್ಚರದಲ್ಲಿ ನಿಯಂತ್ರಿಸತಕ್ಕ ರೂಪವಾಗಿದೆ. ಈ ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಎಂಬ 4 ಭಗವದ್ರೂಪಗಳು ಕ್ರಮವಾಗಿ ಜೀವರನ್ನು ಎಚ್ಚರ, ನಿದ್ರೆ, ಸ್ವಪ್ನ, ಸುಷುಪ್ತಿ ಈ 4 ಅವಸ್ಥೆಗಳಲ್ಲಿ ನಿಯಂತ್ರಿಸತಕ್ಕವುಗಳಾಗಿವೆ. ಎಚ್ಚರದಲ್ಲಿರುವಾಗ ಹಗಲಿನಲ್ಲಿ ಸೂರ್ಯನ ಬೆಳಕಿನಿಂದ, ರಾತ್ರಿಯಲ್ಲಿ ಚಂದ್ರನ ಬೆಳದಿಂಗಳಿನಿಂದ ಈ ವಿಶ್ವವನ್ನು ನಾವು ಕಾಣುತ್ತೇವೆ. ಚಂದ್ರನ ಬೆಳಕಿನ ಅಭಾವ ಇದ್ದಾಗ ವಿದ್ಯುತ್‌ನ ಸಹಾಯದಿಂದ ಕಾಣುತ್ತೇವೆ. ಆದ್ದರಿಂದ ವಿಶ್ವ ಅಂದರೆ ಬೆಳಕು. ಈ ವಿಶ್ವದ ಬೆಳಕನ್ನು ವಿಶ್ವನಿಂದ ನಾವು ಎಚ್ಚರದಲ್ಲಿ ಕಾಣುತ್ತೇವೆ. ವಿಶ್ವವನ್ನು ಬೆಳಕಿನಿಂದ ನಾವು ಕಾಣುತ್ತೇವೆ. ವಿಶ್ವಕ್ಕೆ ಬೆಳಕನ್ನು ಕೊಟ್ಟವನೂ, ಆ ವಿಶ್ವನೇ ಅಲ್ಲವೆ? ಈ ಹಿನ್ನಲೆಯಲ್ಲೇ ಗೀತೆಯಲ್ಲಿ ಕೃಷ್ಣ **'ಯಚ್ಚಂದ್ರ ಮಸಿ ಯಚ್ಚಾಗ್ನೌ ತತ್ತೇಜೋ ವಿಧಿ ಮಾಮಕಂ'** ಅನ್ನುತ್ತಾನೆ. ಅರ್ಥಾತ್ ಈ ವಿಶ್ವ ಜಡವಾಗಿದ್ದರೂ ಸೂರ್ಯ, ಚಂದ್ರ, ಅಗ್ನಿಗಳ ಒಳಗಿದ್ದು ಈ ವಿಶ್ವವನ್ನು ಭಗವಂತ ಬೆಳಗಿಸುತ್ತಾನೆ. ಆದ್ದರಿಂದ ಎಚ್ಚರದಲ್ಲಿದ್ದಾಗ ನಮಗೆ ಈ ವಿಶ್ವ ಕಾಣಲು ಸಾಧ್ಯವಾಗುತ್ತದೆ. ಆದರೂ ಈ ಬೆಳಕಿನಲ್ಲಿ ಎಚ್ಚರ ತಪ್ಪಿ, ಕತ್ತಲ ಬಳಿ ನಾವು ಸಾಗುತ್ತಿರುವುದು ದುರದೃಷ್ಟಕರ. ನಾವು ಎಚ್ಚರ ತಪ್ಪಿದಾಗ, ಅಂದರೆ ನಿದ್ರಾವಸ್ಥೆಯಲ್ಲಿದ್ದಾಗ ಈ ವಿಶ್ವ ಇದ್ದರೂ ನಮ್ಮ ಪಾಲಿಗೆ ಈ ವಿಶ್ವ ಇಲ್ಲ. ವಿಶ್ವನೂ ಇಲ್ಲ. ಆದರೆ ವಿಶ್ವವೂ ಇದೆ. ವಿಶ್ವನೂ ಇದ್ದಾನೆ ಅಲ್ಲವೆ? ಇದಕ್ಕೋಸ್ಕರವೇ ಕೃಷ್ಣ, **'ಅಕರ್ಮಣಿ ಚ ಕರ್ಮಯಃ'** ಎಂದಿದ್ದಾನೆ ಗೀತೆಯಲ್ಲಿ. ನೀನು ಕರ್ಮ ಮಾಡದಿದ್ದರೂ ಜಗತ್ತಿನ ಕರ್ಮ, ವಿಶ್ವಕರ್ಮನ ಕರ್ಮ ನಡೆಯುತ್ತಾ ಇರುತ್ತದೆ. ಈ ಎಚ್ಚರ ಎಚ್ಚರದಲ್ಲಿರುವಾಗ ನಮಗೆ ಅತ್ಯವಶ್ಯ. ನಾವು ಎಚ್ಚರದಲ್ಲಿದ್ದರೂ, ಎಚ್ಚರದಲ್ಲಿ ಇರುವುದಿಲ್ಲ. ಈ ಎಚ್ಚರದ ಅರಿವೇ ನಮಗೆ ಇರುವುದಿಲ್ಲ. ಆದ್ದರಿಂದ ನಮ್ಮ ಪಾಲಿಗೆ, ಎಚ್ಚರ ಅಂದರೆ ವಿಶ್ವನ ಎಚ್ಚರ ಅತ್ಯಾವಶ್ಯಕ. ಈ ಕೃತಜ್ಞತಾ ಮನೋಭಾವದಿಂದ ಈ ವಿಶ್ವವನ್ನು ವಿಶ್ವನ ನೆನಪಿನ ಜತೆಗೆ ಎಚ್ಚರದಿಂದ ಕಾಣುವುದನ್ನು ರೂಢಿಸಿಕೊಳ್ಳಬೇಕು.

(44ನೇ ಪುಟಕ್ಕೆ)

# ವಿಜಯೀಂದ್ರರಿಗೆ ಮೂಲಪಾಠದ ಕಾಳಜಿ

-ಉಂಡಾರು ಶ್ರೀ ಶ್ರೀನಿವಾಸಚಾರ್ಯ

ಮಧ್ವ ಸಿದ್ಧಾಂತವೇ ಎಲ್ಲ ಸಿದ್ಧಾಂತಗಳಲ್ಲಿ ಕೊನೆಯದ್ದು. ಅದೇ ಶ್ರೇಷ್ಠ ಎಂದು ಎಲ್ಲ ಸಜ್ಜನರು ತಿಳಿದಿದ್ದಾರೆ. ಆಚಾರ್ಯ ಮಧ್ವರ ಅಭಿಪ್ರಾಯ ಅವರು ಉಲ್ಲೇಖಿಸುವ ಗ್ರಂಥಗಳೆಲ್ಲ ವೇದವ್ಯಾಸರಿಗೆ ಸಮ್ಮತವೆಂದೂ ತಿಳಿದಿದೆ. ವ್ಯಾಸರಿಗೆ ವಿರುದ್ಧವಾದುದನ್ನು ಮಧ್ವರು ಎಂದಿಗೂ ಉಲ್ಲೇಖ ಮಾಡುವುದಿಲ್ಲ. ವಿಜಯೀಂದ್ರ ಶ್ರೀಪಾದರು 104 ಗ್ರಂಥಗಳನ್ನು ರಚಿಸಿದ್ದು ತಿಳಿದೇ ಇದೆ. ಅಲ್ಲಲ್ಲಿ ತಮ್ಮ ಕೃತಿಗಳಲ್ಲಿ ಅವರು ಸರ್ವಮೂಲದ ಶುದ್ಧ ಪಾಠದೆಡೆ ಗಮನ ಹರಿಸಿರುವುದು ಎಲ್ಲರು ತಿಳಿಯಬೇಕಾದ ಅಂಶ. ಹೃಷೀಕೇಶತೀರ್ಥರು ಬರೆದಿರುವ ಸರ್ವಮೂಲ. ನಂತರದ ಆಚಾರ್ಯರು ಮುನಿಗಳು ಬರೆದಿರುವ ಇನ್ನೊಂದು ಸರ್ವಮೂಲ. ಹೀಗೆ ನಮಗೀಗ 2 ವಿಧದ ಸರ್ವಮೂಲ ಉಪಲಬ್ಧವಿದೆ. ಸರಿಯಾದ ಪಾಠದ ವಿಷಯದಲ್ಲೂ ಹಲವು ಜಿಜ್ಞಾಸೆ ಖಂಡನೆ ಮಂಡನೆಗಳಿವೆ. ಏನೇ ಇರಲಿ ವಿಜಯೀಂದ್ರರು ಹೃಷೀಕೇಶರ ಸರ್ವಮೂಲದ ಉಲ್ಲೇಖ ಮಾಡಿರುವುದು ಅಪೂರ್ವ ಸಂಗತಿ.

**ತತ್ವಮಾಣಿಕ್ಯ ಪೇಟಿಕಾ** ಎಂಬ ಗ್ರಂಥದಲ್ಲಿ ಶೂದ್ರನಿಗೆ ಜಪಾದಿಗಳ ಅಥವಾ ಸಂನ್ಯಾಸದ ಅಧಿಕಾರವಿದೆಯೋ ಅಥವಾ ಇಲ್ಲವೋ ಎಂದು ಇಲ್ಲಿ ಬಹು ಸೊಗಸಾಗಿ ವಿಚಾರಮಾಡಿದ್ದಾರೆ ಅಪಶೂದ್ರಾಧಿಕರಣ ಸೂತ್ರಭಾಷ್ಯದಲ್ಲಿ ಆಚಾರ್ಯ ಮಧ್ವರು **ಓಂ ಕ್ಷತ್ರಿಯತ್ವವಗತೇ ಶ್ಚೋತ್ತರತ್ರ ಚೈತ್ರರಥೇನ ಲಿಂಗಾತ್ ಓಂ** (ಬ್ರಹ್ಮಸೂತ್ರ 1–3–35) ಎಂಬಲ್ಲಿ **'ರಥಸ್ತ್ವಶ್ವತರೀಯುಕ್ತಃ ಚಿತ್ರ ಮಿತ್ಯಭಿಧೀಯತೇ ಇತಿ ಬ್ರಾಹ್ಮೇ'** ಎಂಬ ಮಾತನ್ನು ಉಲ್ಲೇಖಿಸಿದ್ದಾರೆ.

ಇಲ್ಲಿ ವಿಷಯ ಹೀಗಿದೆ. ಈಗಿನ ಕೆಲವು ಮುದ್ರಿತ ಪಾಠಗಳಲ್ಲಿ ಇತಿ ಬ್ರಹ್ಮಾಂಡೇ. ಎಂದಿದೆ. ಇದು ಎಷ್ಟು ಸರಿ ಎಂಬುದು ವಿಚಾರಿಸಬೇಕು. ಬ್ರಾಹ್ಮ ಮತ್ತು ಬ್ರಹ್ಮಾಂಡ ಬೇರೆಯ ಪುರಾಣಗಳು ಆಗಬಹುದು. ಒಂದೂ ಆಗಬಹುದು. ಏಕೆಂದರೆ ಪುರಾಣಗಳು ನಮಗೆಲ್ಲ ಉಪಲಬ್ಧವಾದರೂ ಉಪಪುರಾಣಗಳೆಲ್ಲ ಉಪಲಬ್ಧವಿಲ್ಲ.

ಅಥವಾ ಬ್ರಾಹ್ಮ ಎಂಬುದು ಸಾಕ್ಷಾತ್ ವ್ಯಾಸರು ರಚಿಸಿರುವ ಸ್ಮೃತಿಯೂ ಆಗಬಹುದು. ಆದ್ದರಿಂದ ಬ್ರಾಹ್ಮವೋ ಅಥವಾ ಬ್ರಹ್ಮಾಂಡವೋ ಎಂಬ ಜಿಜ್ಞಾಸೆ ಬರುತ್ತದೆ. ವಿಚಾರವಂತರೋ ಎರಡಕ್ಕೂ ಸಮಾಧಾನ ಹೇಳಿ ಕೊಡಿಸಿರುತ್ತಾರೆ. ಆದರೆ ವಿಜಯೀಂದ್ರ ಶ್ರೀಪಾದರು

ತತ್ವಮಾಣಿಕ್ಯ ಪೇಟಿಕಾ ಗ್ರಂಥದಲ್ಲಿ **"ಇತಿ ಬ್ರಾಹ್ಮವಚನಾನುಸಾರಾಚ್ಚ"** ಎಂದಿದ್ದಾರೆ. ಆದ್ದರಿಂದ ಈ ಸ್ಮೃತಿಯ ಹೆಸರು ಬ್ರಾಹ್ಮ ಎಂದೇ ಆಯಿತು. ಅದು ಹೃಷೀಕೇಶತೀರ್ಥರ ಪಾಠವೇ ಆಗಿದೆ. ಬ್ರಹ್ಮಾಂಡ ಎಂದಾಗಿದ್ದರೆ ಅದನ್ನೇ ಉಲ್ಲೇಖಿಸಬೇಕಿತ್ತು. ಹಾಗೆ ಮಾಡಿಲ್ಲ. ಬ್ರಾಹ್ಮ ಎಂದೇ ಇದೆ.

ವಿಜಯೀಂದ್ರರಿಗೆ ಸರ್ವಮೂಲದಲ್ಲಿ ಮೂಲಪಾಠ ಹೃಷೀಕೇಶತೀರ್ಥರದ್ದು ಸ್ಪಷ್ಟವಾಗಿದ್ದರಿಂದ ಆ ಕಾಲದಲ್ಲಿ ಬೇರೆ ಪಾಠಾಂತರಗಳಿದ್ದರೂ ಆಚಾರ್ಯಮಧ್ವರಿಗೆ ಸಮ್ಮತವಾದ ಪಾಠ "ಬ್ರಾಹ್ಮ" ಎಂಬಪಾಠ, ಹೃಷೀಕೇಶತೀರ್ಥರು ಬರೆದ ಪಾಠವೇ ನಿಜವಾದ ಪಾಠವಾಗಿದೆ ಎಂಬುದು ಸಮ್ಮತವಾಗಿದೆ ಎನ್ನಬಹುದು. ಎಷ್ಟೇ ಚಿಕ್ಕ ಅಂಶವು ಆಚಾರ್ಯ ಮಧ್ವರಿಗೆ ವಿರೋಧವಿಲ್ಲದಿದ್ದರೆ ಅದನ್ನು ವಿಜಯೀಂದ್ರರು ಗ್ರಹಿಸುತ್ತಿದ್ದರು ಎನ್ನಲು ಇದೊಂದು ದೃಷ್ಟಾಂತವಾಗಬಹುದು. ಶ್ರುತಿಗಳಲ್ಲಿ ಶ್ರುತ್ಯರ್ಥಗಳಲ್ಲಿ ಶ್ರುತ್ಯರ್ಥೋದಾಹರಣ ಸ್ಮೃತಿಪಾಠಗಳಲ್ಲಿ ಶುದ್ಧ ಪಾಠದೆಡೆ ಅತ್ಯಂತ ಒಲವಿದ್ದ ವಿಜಯೀಂದ್ರತೀರ್ಥರಿಗೆ ನಮೋನಮಃ ★

---

(4ನೇ ಪುಟದಿಂದ)

ಧಾರಣೆ ಮಾಡಿಕೊಂಡು ಉಪದೇಶ ಮಾಡಲು ಬಂದವರನ್ನು ಅಟ್ಟುವವನೇ ಧೃತರಾಷ್ಟ್ರ. ವೇದವ್ಯಾಸ ದೇವರು ನಾಲ್ಕು ಜನರನ್ನು ವಿವರಿಸುತ್ತಾ, ಒಬ್ಬ 'ವೃದ್ಧಃ ಜ್ಞಾತಿಃ' ತಿಳುವಳಿಕೆಯಿಂದ ತಲೆ ಹಣ್ಣಾಗಿರತಕ್ಕಂತಹ ವ್ಯಕ್ತಿ ಅಂದರೆ ವೃದ್ಧನು ನಮ್ಮ ಮನೆಯಲ್ಲಿ ಇರಬೇಕು. ಅವರು ಆಗಿಂದಾಗೆ ನಮ್ಮ ಆಚಾರ-ವಿಚಾರ, ಪರಂಪರೆಯ ಬಗ್ಗೆ ಉಪದೇಶ ಮಾಡುತ್ತಿರಬೇಕು. ಇನ್ನೊಬ್ಬ "ಅವಸನ್ನಃ ಕುಲೀನಃ" -ಒಳ್ಳೆಯ ಹಿನ್ನೆಲೆಯ ವಂಶದಲ್ಲಿ ಚೆನ್ನಾಗಿ ಪಳಗಿರತಕ್ಕಂತಹ ವ್ಯಕ್ತಿ ನಮ್ಮ ಜೊತೆಗೆ ಇರಬೇಕಂತೆ. ಅವನು ಆಚಾರ-ವಿಚಾರವನ್ನು ತಿದ್ದತಕ್ಕಂತಹ ವ್ಯಕ್ತಿಯಾಗಿರಬೇಕು. ಇಂತಹ ವ್ಯಕ್ತಿಯಂದರೆ ನಾವು ಭೀಮಸೇನನ ಕ್ರಮ ನೋಡಬೇಕು. ಇನ್ನು ಮೂರನೆಯವನು.ದರಿದ್ರನಾಗಿರತಕ್ಕಂತಹ ಒಬ್ಬ ಮಿತ್ರ ನಮಗಿರಬೇಕು. ಶ್ರೀಮಂತ ಮಿತ್ರರು ಅಡ್ಡದಾರಿಗೆ ಎಳೆದುಕೊಂಡು ಹೋಗುವ ಪ್ರಸಂಗವಿರುತ್ತದೆ. ಸದ್ಯಕ್ಕೆ ಧೃತರಾಷ್ಟ್ರನಿಗೆ ಇರುವ ಮಿತ್ರನೆಂದರೆ ದುರ್ಯೋಧನ. ಹದಿನಾರು ತುಂಬಿದರೆ ಮಗನು ಮಿತ್ರನಾಗುತ್ತಾನೆ. **'ಪ್ರಾಪ್ತೇತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್'** ಕೊನೆಗೆ **'ಭಗೀನೀಚ ಅನಪತ್ಯಾ'** ತಂಗಿಯೊಬ್ಬಳು ನಮ್ಮ ಮನೆಯಲ್ಲಿ ಬೇಕಂತೆ. ತಂಗಿ ಅಂದರೆ ದುರ್ದೈವವಶಾತ್ ಅವಳ ಗಂಡ ತೀರಿಕೊಂಡಿದ್ದು, ಯಾವುದೇ ಸಂತಾನವಿಲ್ಲದೆ ನಿರ್ಗತಿಕಳಾಗಿದ್ದಲ್ಲಿ ಅವಳನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕಂತೆ. ತಾನು ಬದುಕಬೇಕು. ನೀನು ಬದುಕಬೇಕೆಂಬ ಉದ್ದೇಶದಿಂದ ನಿನ್ನ ಮನೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಯಾವುದೇ ಸಮಸ್ಯೆ ಇರುವುದಿಲ್ಲ. ★

ವಸಂತೋತ್ಸವ ಸೌರಭ

# ಯೋಗದೀಪಿಕಾ ವಿದ್ಯಾಪೀಠದ ಘಟಿಕೋತ್ಸವ

–ಶ್ರೀ ರಾಘವೇಂದ್ರ ಮುಟ್ಲುಪಾಡಿ

ದಿನಾಂಕ 07–04–2009 ರ ತ್ರಯೋದಶಿಯಂದು ಪಲಿಮಾರಿನ ಯೋಗದೀಪಿಕಾ ವಿದ್ಯಾಪೀಠದಲ್ಲಿ ಘಟಿಕೋತ್ಸವ ಕಾರ್ಯಕ್ರಮವು ಜರುಗಿತು. ವೇದವ್ಯಾಸ ದೇವರ ಸನ್ನಿಧಿಯಲ್ಲಿ ಪೇಜಾವರಮಠಾಧೀಶರಾದ ವಿಶ್ವೇಶತೀರ್ಥಶ್ರೀಪಾದರ, ಪಲಿಮಾರುಮಠಾಧೀಶರಾದ ಶ್ರೀವಿದ್ಯಾಧೀಶತೀರ್ಥಶ್ರೀಪಾದರ, ಸೋದೆ ಮಠಾಧೀಶರಾದ ವಿಶ್ವವಲ್ಲಭತೀರ್ಥಶ್ರೀಪಾದರ, ಸಮ್ಮುಖದಲ್ಲಿ ಪೇಜಾವರಮಠದ ಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು ವಿದ್ಯಾರ್ಥಿಗಳಿಗೆ ಉತ್ತರಶಾಂತಿಪಾಠವನ್ನು ಮಾಡಿ ಅನುಗ್ರಹಿಸಿದರು. ನಂತರ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯವು ನಡೆಯಿತು.

ವಿದ್ಯಾರ್ಥಿಗಳ ವೇದಘೋಷದೊಂದಿಗೆ ಸಭಾಕಾರ್ಯಕ್ರಮವು ಆರಂಭವಾಯಿತು. ಗುರುಕುಲದ ಪ್ರಾಂಶುಪಾಲರಾದ ವಿ॥ ಪದ್ಮನಾಭ ತಂತ್ರಿಗಳು ಉಪಸ್ಥಿತರಿದ್ದ ಶ್ರೀಪಾದರನ್ನು, ನಮಿಸಿ ಸ್ವಾಗತಿಸುತ್ತಾ ಪಲಿಮಾರಿನ ಪ್ರಾಣದೇವರು ತುಂಬಾ ವೈರಾಗ್ಯಮೂರ್ತಿ ಮತ್ತು ವೈರಾಗ್ಯದಾಯಕರು ಎಂದು ನುಡಿದು ಪ್ರಾಣದೇವರನ್ನು ಸ್ತುತಿಸಿದರು. ಅಂತಹ ಪ್ರಾಣದೇವರ ಸನ್ನಿಧಾನದಲ್ಲಿರುವ ಈ ಯೋಗದೀಪಿಕಾ ವಿದ್ಯಾಪೀಠಕ್ಕೆ 20 ವರ್ಷಗಳು ಸಂದವು ಎಂದು ತಿಳಿಸುತ್ತಾ ಇಲ್ಲಿ ನಡೆಯುವ ಪಾಠಗಳ ಪರಿಚಯವನ್ನು ಸಭಾಸದರಿಗೆ ನೀಡಿದರು. ಹಾಗೆಯೇ ಘಟಿಕೋಪನ್ಯಾಸ ಮಾಡಲಿರುವ ವಿ॥ **ನಾಗರಹಳ್ಳಿ ಪ್ರಹ್ಲಾದಾಚಾರ್ಯರನ್ನು, ಶ್ರೀ ರಾಜರಾಜೇಶ್ವರತೀರ್ಥಪ್ರಶಸ್ತಿ** ಭಾಜನರಾಗಲಿರುವ ವಿ॥ **ಶಿಬರೂರು ಹಯಗ್ರೀವ ತಂತ್ರಿಗಳು ಮತ್ತು ವಿ॥ ವಟ್ಟಂಗಾಡು ಹರಿ ಆಚಾರ್ಯ ಶ್ರೀರಂಗಂ** ಇವರನ್ನು ಸಭೆಗೆ ಸ್ವಾಗತಿಸಿದರು.

ನಂತರ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಶುಭಾಶಂಸನೆಗೈದ ವಿ॥ ಅಡ್ವೆ ಲಕ್ಷ್ಮೀಶಾಚಾರ್ಯರು ವಿದ್ಯಾರ್ಥಿಗಳು ಗುರುಕುಲದಲ್ಲಿ ವಿದ್ಯಾಭ್ಯಾಸ ಮುಗಿಸಿ ತೆರಳುವಾಗ ನಿಜವಾಗಿ ಧನ್ಯತೆ ಎನ್ನುವುದು ಬರುವುದು ಅಭ್ಯಾಸಮಾಡಿಸಿದ ಗುರುಗಳಿಗೆ ಎಂದು ಮಹಾಭಾರತದಲ್ಲಿ ಒಂದು ಸಂದರ್ಭದಲ್ಲಿ ಬರುವ ಶ್ವೇತಾಂಬರಧಾರಿಯಾಗಿ ಆಸೀನರಾದ ದ್ರೋಣರ ಪಾತ್ರವನ್ನು ಬೊಟ್ಟು ಮಾಡಿ ತೋರಿಸಿದರು. ಹಾಗೆಯೇ ಗುರುಕುಲದಲ್ಲಿ ಕಲಿತುಹೋದ ಕೆಲವು ವಿದ್ಯಾರ್ಥಿಗಳು ಸಿದ್ಧಾಂತಗಳನ್ನು ಗಾಳಿಗೆ ತೂರಿ ದಾರಿತಪ್ಪಿದ್ದು ಪ್ರತ್ಯಕ್ಷವಾಗಿ ಕಂಡು ಬರುತ್ತಿದೆ. ಇದು ಸಲ್ಲದು, ಇಲ್ಲಿ ಅಭ್ಯಾಸ ಮಾಡಿದ ವಿದ್ಯೆಯನ್ನು

ತನ್ನ ಜೀವನದ ನಿತ್ಯ ನೈಮಿತ್ತಿಕ ಕರ್ಮಗಳಲ್ಲಿ ಅಳವಡಿಸಿಕೊಳ್ಳಬೇಕು. ಹೀಗೆ ಮಾಡುವಾಗ ಹಲವೆಡೆ ಸಮಾಜದ ವಿರೋಧ ಬಂದರೂ ಅದನ್ನು ಸಮರ್ಥರಾಗಿ ಎದುರಿಸಬೇಕು. ಈ ಮೂಲಕ ಮಾಧ್ವ ಸಿದ್ಧಾಂತವನ್ನು ಪೂರ್ಣವಾಗಿ ಆಚರಣೆಗೆ ತರುವ ಜವಾಬ್ದಾರಿ ವಿದ್ಯಾರ್ಥಿಗಳಾದ ನಿಮ್ಮ ಪಾಲಿದ್ದಾಗಿದೆ ಎಂದು ನುಡಿದು ವಿದ್ಯಾರ್ಥಿಗಳನ್ನು ಆಶೀರ್ವಚಿಸಿದರು.

ವಿದ್ಯಾರ್ಥಿಗಳ ಶಾಸ್ತ್ರಾನುವಾದದೊಂದಿಗೆ ಮುಂದುವರಿದ ಕಾರ್ಯಕ್ರಮದಲ್ಲಿ ಪ್ರಶಸ್ತಿಯಿಂದ ಪುರಸ್ಕೃತರಾಗಲಿರುವ ಇಬ್ಬರು ವಿದ್ವಾಂಸರ ಪರಿಚಯವನ್ನೀಯುತ್ತಾ ವಿ॥ ಸಗ್ರಿ ರಾಘವೇಂದ್ರ ಆಚಾರ್ಯರು ಮೊದಲು ವಿದ್ಯಾಮಾನ್ಯರಿಗೆ ವಿದ್ಯೆಯ ಬಗ್ಗೆ ಎಷ್ಟು ಮಹತ್ವಪೂರ್ಣ ಕಾಳಜಿ ಇತ್ತು ಎಂಬುದನ್ನು ವಿವರಿಸಿದರು. ನಂತರ ಹಯಗ್ರೀವ ತಂತ್ರಿಗಳ ಬಗ್ಗೆ ತಿಳಿಸುತ್ತಾ ತಂತ್ರಿಗಳು ಎಲ್ಲಾ ಧಾರ್ಮಿಕ ಕರ್ಮಗಳಲ್ಲಿ ಮಧ್ವಸಿದ್ಧಾಂತದ ಮೂಲಮಂತ್ರವಾದ ಅಂತರ್ಯಾಮಿ ಚಿಂತನೆಯನ್ನು ಅತ್ಯಂತ ಪ್ರಚುರಪಡಿಸಿದವರಾಗಿದ್ದಾರೆ. ಅತ್ಯಂತ ಸರಳವ್ಯಕ್ತಿತ್ವವುಳ್ಳ ಇವರು ಸಾಮಾನ್ಯವಾಗಿ ಎಲ್ಲರಿಂದ ದೂರದಲ್ಲಿ ಕುಳಿತು ವಿಷ್ಣುಸಹಸ್ರನಾಮ ಪಾರಾಯಣ ಮಾಡುತ್ತಲೇ ಇರುತ್ತಾರೆ. ಇಂತಹ ಗುಣಸಂಪನ್ನರಾದ ಇವರಿಗೆ ಈ ಪ್ರಶಸ್ತಿ ನಮ್ಮ ಸಮಾಜಕ್ಕೆ ಸಂದ ಗೌರವ ಎಂದು ಬಣ್ಣಿಸಿದರು.

ವಟ್ಟಂಗಾಡು ಹರಿಆಚಾರ್ಯರ ಬಗ್ಗೆ ಸಗ್ರಿ ರಾಘವೇಂದ್ರ ಆಚಾರ್ಯರು ತಿಳಿಸುತ್ತಾ ಇವರು ವೇದವೇದಾಂತಗಳನ್ನು ಚೆನ್ನಾಗಿ ಅಧ್ಯಯನ ನಡೆಸಿದವರಾಗಿದ್ದು ವಿದ್ಯಾಮಾನ್ಯರಲ್ಲಿ ಜಿಜ್ಞಾಸಾಧಿಕರಣ ಪರೀಕ್ಷೆಯನ್ನು ಇತ್ತವರಾಗಿದ್ದಾರೆ. ಅತ್ಯಂತ ಸರಳ ಮತ್ತು ವಿನಯಭರಿತರಾದ ಇವರು ಅನೇಕ ದೇವಸ್ಥಾನಗಳಲ್ಲಿ ಮಾಧ್ವಸಿದ್ಧಾಂತದ ನೆಲೆಯಲ್ಲಿ ಬ್ರಹ್ಮಕಲಶಾಭಿಷೇಕಗಳನ್ನು ಮಾಡಿದ್ದು ಅನೇಕ ಶ್ರೀಪಾದರುಗಳ ಪ್ರಶಸ್ತಿಗೆ ಭಾಜನಾಗಿರುತ್ತಾರೆ. ಅಲ್ಲದೆ 'ಕುಂಭಾಭಿಷೇಕ ಚಕ್ರವರ್ತಿ' ಯೇ ಮೊದಲಾದ ಬಿರುದಾಂಕಿತರೂ ಹೌದು ಎಂದು ಹೇಳುತ್ತಾ ಇಂತವರನ್ನು ಗೌರವಿಸಿ ಈ ಪ್ರಶಸ್ತಿಯನ್ನು ನೀಡಿ ಅವರನ್ನು ಗುರುತಿಸುವುದೇ ಪ್ರಾಣನಿಗೆ ಅತ್ಯಂತ ಪ್ರಿಯವಾದದ್ದು ಎಂದು ನುಡಿದರು.

ನಂತರ ಪೇಜಾವರ ಹಿರಿಯ ಶ್ರೀಪಾದರು ಆಶೀರ್ವಚಿಸುತ್ತಾ ತತ್ವಜ್ಞಾನದ ಪ್ರಚಾರ ಮತ್ತು ಧರ್ಮಾಚರಣೆಯನ್ನು ಎಲ್ಲರೂ ಅಗತ್ಯವಾಗಿ ಮಾಡಬೇಕು. ವೈದಿಕತೆ ಎಂಬುದು ಸಂಸ್ಕೃತ ಜಗತ್ತಿನಲ್ಲಿ ಅಗ್ರಗಣ್ಯವಾದರೆ ಆಚಾರ್ಯರ ಸಿದ್ಧಾಂತವೆಂಬುದು ಜಗತ್ತಿಗೆ ಆದರ್ಶಪ್ರಾಯವಾದದ್ದು ಎಂದು ಹೇಳಿದರು. ವಿದ್ಯಾರ್ಥಿಗಳನ್ನು ಕುರಿತು ಶ್ರೀಪಾದರು ಪೌರೋಹಿತ್ಯ ಎಂಬುವುದು ವೃತ್ತಿ ಅಲ್ಲ. ಅದು ದೇವರ ಸೇವೆ. ಆಚಾರ್ಯರ ಸಿದ್ಧಾಂತದ ಪ್ರಚಾರ ಮತ್ತು ನಮ್ಮ ಸಂಸ್ಕೃತಿಯ ರಕ್ಷಣೆಯನ್ನು ವಿದ್ಯಾರ್ಥಿಗಳು, ವಿದ್ವಾಂಸರು, ಸಮಾಜದ

ಬಾಂಧವರೂ ಕೂಡ ಮಾಡಬೇಕು ಎಂದು ಕರೆಯಿತ್ತರು. ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾಧ್ವಸಿದ್ಧಾಂತ ಮತ್ತು ತತ್ವಜ್ಞಾನದ ಪ್ರಚಾರವನ್ನು ಅಷ್ಟಮಠದ ಯತಿಗಳು ವಿಶೇಷವಾಗಿ ಮಾಡಬೇಕು. ಬ್ರಾಹ್ಮಣೇತರರಲ್ಲೂ ಧರ್ಮದ ಜ್ಞಾನ, ಆಚಾರ್ಯರ ವಿಚಾರಧಾರೆಗಳು ಹರಿದು ಬರುವಂತೆ ಎಲ್ಲಾ ಪುರೋಹಿತರೂ ವಿದ್ವಾಂಸರುಗಳೂ ಮಾಡಬೇಕೆಂದು ಪೀಠದಿಂದ ಆಜ್ಞಾಪಿಸಿದರು. ಹಾಗೆಯೇ ಹಯಗ್ರೀವ ತಂತ್ರಿಗಳು ನಮ್ಮ ಮೊದಲ ಸುಧಾವಿದ್ಯಾರ್ಥಿ ಹಾಗೂ ಹರಿ ಆಚಾರ್ಯರು ಎಲ್ಲಾ ಮಠಾಧೀಶರ ವಿಶೇಷ ಆದರಕ್ಕೆ ಪಾತ್ರರಾದವರು ಎಂದು ಅವರೀರ್ವರನ್ನೂ ಅಭಿನಂದಿಸಿದರು.

ನಂತರ ವಿದ್ಯಾಧೀಶತೀರ್ಥರು ಹದಿನೈದುಸಹಸ್ರ ರೂಪಾಯಿಗಳನ್ನೊಳಗೊಂಡ ರಜತಫಲಕದ **'ಶ್ರೀರಾಜರಾಜೇಶ್ವರತೀರ್ಥ ಪ್ರಶಸ್ತಿ'**ಯನ್ನು **ವಿ॥ ಹಯಗ್ರೀವತಂತ್ರಿಗಳಿಗೆ** ಹಾಗೂ **ವಿ॥ ವಟ್ಟಂಗಾಡು ಹರಿ ಆಚಾರ್ಯರಿಗೆ** ಪ್ರದಾನ ಮಾಡಿದರು.

ಘಟಿಕೋಪನ್ಯಾಸವನ್ನು ಮಾಡಿದ ನಾಗರಹಳ್ಳಿ ಪ್ರಹ್ಲಾದಾಚಾರ್ಯರು ನಮ್ಮಲ್ಲಿನ ವೇದವೇದಾಂತಗಳ ಮತ್ತು ಸಂಸ್ಕೃತ ಜಗತ್ತಿನ ಹೆಚ್ಚಿನ ಎಲ್ಲಾ ಗ್ರಂಥಗಳು ವಿದೇಶೀಯರಿಂದಾಗಿ ನಾಶವಾಗಿವೆ. ಇದಕ್ಕೆ ಉದಾಹರಣೆ ನಲಂದಾ ವಿಶ್ವವಿದ್ಯಾಲಯಕ್ಕೆ ದುಷ್ಕರ್ಮಿಗಳು ಇತ್ತ ಕಿಚ್ಚು ಎರಡು ವರ್ಷಗಳ ಕಾಲ ಉರಿಯುತ್ತಲೇ ಇತ್ತು, ಇಲ್ಲಿದ್ದ ನಮ್ಮೆಲ್ಲಾ ಗ್ರಂಥಭಂಡಾರಗಳು ಸುಟ್ಟು ಕರಕಲಾದವು. ಇದು ನಮಗಾದ ದೊಡ್ಡ ಅನ್ಯಾಯ. ಆದ್ದರಿಂದ ವೇದಾಧ್ಯಯನದ ಮೂಲಕ ವೇದದ ಉಳಿವಿಗಾಗಿ ಪ್ರಯತ್ನ ಮಾಡಬೇಕಾದದ್ದು ಎಲ್ಲರ ಆದ್ಯ ಕರ್ತವ್ಯವಾಗಿದೆ. ಹಾಗೆಯೇ ಇಂದಿನ ದಿನಗಳಲ್ಲಿ ಪೌರೋಹಿತ್ಯ ಮಾಡುವವರಿಗೆ ಇತರ ನೌಕರರಿಗಿಂತ ಹೆಚ್ಚಿನ ಆದಾಯ ಮತ್ತು ಸಮಾಜದಲ್ಲಿ ಗೌರವವೂ ಇದೆ. ಆದ್ದರಿಂದ ಅದನ್ನುಳಿಸಿಕೊಳ್ಳಬೇಕಾದದ್ದೂ ಕೂಡ ನಮ್ಮ ಪಾಲಿನದ್ದಾಗಿದೆ ಎಂದರು.

ಹಾಗೆಯೇ ವ್ಯಕ್ತಿಯೋರ್ವನು ಯಾವುದೇ ಆಶ್ರಮದಲ್ಲಿಲ್ಲದೆ ಒಂದು ದಿನವೂ ಇರಬಾರದು, ಬ್ರಹ್ಮಚರ್ಯಾಶ್ರಮದಲ್ಲಿದ್ದು ವೇದಾಧ್ಯಯನ ಮುಗಿಸಿದ ಬಳಿಕ ಕೂಡಲೆ ಸಮಾವರ್ತನಾದಿಗಳನ್ನು ಮಾಡಿಕೊಂಡು ಗೃಹಸ್ಥಾಶ್ರಮಿಯಾಗಬೇಕು. ಗೃಹಸ್ಥಾಶ್ರಮ ಪ್ರವೇಶ ತಡವಾಗುವುದಾದಲ್ಲಿ ಗುರುಕುಲದಲ್ಲೇ ಇದ್ದು ವೇದದ ವಿಶೇಷಾಧ್ಯಯನ ಮಾಡಬೇಕು. ಏಕೆಂದರೆ ಧರ್ಮಾರ್ಥ ಕಾಮ ಮೋಕ್ಷಗಳನ್ನು ಪಡೆಯಲು ನಿಯತವಾದ ಆಶ್ರಮದಲ್ಲಿದ್ದು ಧರ್ಮಾಚರಣೆ ಮಾಡುವುದೊಂದೇ ಮಾರ್ಗ, ಈ ಧರ್ಮದ ಮರ್ಮವನ್ನು ತಿಳಿಸುವುದು ವೇದ ಹೀಗೆ ಪಾಂಡಿತ್ಯ ಮತ್ತು ಆಚರಣೆಗಳೆಂಬುವವು ಒಂದು ನಾಣ್ಯದ ಎರಡು ಮುಖಗಳು. ಇವು ಒಂದನ್ನೊಂದು ಬಿಟ್ಟಿರಬಾರದು ಎಂದು ಕಿವಿಮಾತು ಹೇಳಿದರು.

ಪೇಜಾವರ ಕಿರಿಯ ಶ್ರೀಪಾದರು ಮಕ್ಕಳನ್ನುದ್ದೇಶಿ **'ಸ್ವಾಧ್ಯಾಯಾನ್ಮಾ ಪ್ರಮದಃ'** ಎಂದೂ ಅಧ್ಯಯನವನ್ನು ಮರೆಯಬೇಡಿ, ವಿದ್ಯೆಯಿಂದ ನಮಗೆ ಅಹಂ ಸರ್ವಜ್ಞೋಽಸ್ಮಿ ಎಂಬ ಜ್ಞಾನ ಬಂದಾಗ ನಾವು ಕಲಿಯ ಹೊರಟರೆ **'ಅಹಂ ಮೂರ್ಖೋಽಸ್ಮಿ'** ಎನ್ನುವಲ್ಲಿಯವರೆಗೆ ಕಲಿಯಬೇಕು. ವಿದ್ಯಾರ್ಥಿಗಳು ಸಮಾಜದ ಸೇವೆಯನ್ನು ಶಾಸ್ತ್ರದ ಹಿನ್ನೆಲೆಯಲ್ಲಿ ಮಾಡಬೇಕು ಎಂದು ಹೇಳಿದರು.

ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ತಮ್ಮ ಆಶೀರ್ವಚನದಲ್ಲಿ 'ಯೋಗ' ಎನ್ನುವುದೇನಿದೆ ಅದು ಅನುಷ್ಠಾನ. ಯೋಗ್ಯವಾದದ್ದು ಅದು ಪ್ರತ್ಯಕ್ಷವಾಗಿ ಫಲವೀಯುವಂತಹದ್ದು. ಫಲವನ್ನೀಯುವ ಇನ್ನೊಂದು ವಿಷಯವೆಂದರೆ ಅದು ಕರ್ಮಾನುಷ್ಠಾನ. ಕರ್ಮಾನುಷ್ಠಾನವು ನಮ್ಮ ಇಚ್ಛೆಯನ್ನು ಪೂರ್ತಿಗೊಳಿಸುತ್ತದೆ. ಆದರೆ ಅದಕ್ಕೆ ಕರ್ಮದಲ್ಲಿ ಭಗವದನುಸಂಧಾನ ಎನ್ನುವುದು ಅತೀ ಮುಖ್ಯವಾದದ್ದು. ಈ ಎಲ್ಲಾ ಅನುಷ್ಠಾನಗಳಿಗೂ ವೈಜ್ಞಾನಿಕ ಹಿನ್ನೆಲೆಯಿದೆ ಎಂದರು. ವಿದ್ಯಾರ್ಥಿಗಳನ್ನು ಕುರಿತು ವಿದ್ಯಾರ್ಥಿಗಳಿಗೂ, ಗುರುಗಳಿಗೂ ಗುರುಕುಲಕ್ಕೂ ನಿರಂತರ ಸಂಬಂಧವಿರಬೇಕು. ಇಲ್ಲವಾದಲ್ಲಿ ಗೌರವ ಮತ್ತು ಭಾವನೆಗಳಿಗೆ ಬೆಲೆಯೇ ಇಲ್ಲವಾದೀತು ಎಂದು ನುಡಿದರು. ಗುರುಗಳು ವಿದ್ಯಾರ್ಥಿಗಳಿಗೆ ಪೂಜಾ ಸಾಧನಗಳನ್ನು, ಅಧ್ಯಾಪಕರಿಗೆ ಗೌರವ ಮಂತ್ರಾಕ್ಷತೆಯನ್ನು ಕೊಡುವುದರೊಂದಿಗೆ ಶ್ರೀರಮಣ ಕಲ್ಲೂರರಿಂದ ನಿರ್ವಹಿಸಲ್ಪಟ್ಟ ಕಾರ್ಯಕ್ರಮವು ಸಂಪನ್ನವಾಯಿತು. ★

---

(38ನೇ....ಪುಟದಿಂದ)

ಎರಡನೇ ಅವಸ್ಥೆಯಾದ, ಸ್ವಪ್ನದಲ್ಲಿ ಭಗವಂತನ ತೈಜಸರೂಪವು ನಮ್ಮನ್ನು ನಿಯಂತ್ರಿಸುತ್ತಿರುತ್ತದೆ. ಹಾಗೆಯೇ ನಿದ್ರಾವಸ್ಥೆಯಲ್ಲಿ ಪ್ರಾಜ್ಞರೂಪವು ನಮ್ಮನ್ನು ನಿಯಂತ್ರಿಸುತ್ತಿರುತ್ತದೆ. ಹಾಗೆಯೇ ಸುಷುಪ್ತ್ಯವಸ್ಥೆಯಲ್ಲಿ ತುರೀಯ ಎಂಬ ಭಗವದ್ರೂಪವು ನಮ್ಮನ್ನು ನಿಯಂತ್ರಿಸುತ್ತಿರುತ್ತದೆ. ಆದರೆ ಈ ನಿಯಾಮಕ ಭಗವದ್ರೂಪಗಳನ್ನು ಮರೆತು , ನಾವು ಎಚ್ಚರ ತಪ್ಪಿದ್ದೇವೆ ಎಂಬುದನ್ನೂ ಮರೆತಿದ್ದೇವೆ. ಈ ಎಚ್ಚರ ಮೊದಲು ಆದರೆ ನಾವು ವಿಚಾರಕ್ಕೆ ತೊಡಗಬಹುದಲ್ಲವೇ? ಎಚ್ಚರದಿಂದ ವಿಚಾರ, ವಿಚಾರದಿಂದ ಎಚ್ಚರ. ಎಚ್ಚರದಿಂದ ವಿಶ್ವನ ಅರಿವು, ವಿಶ್ವದ ಅರಿವು ನಮಗೆ ಆಗಲು ಸಾಧ್ಯವಾಗುತ್ತದೆ. ಈ ಅರಿವಿನಿಂದ ನಾವು ವಿಶ್ವಕ್ಕೆ ವಿಶ್ವನಿಗೆ ಕೃತಜ್ಞರಾಗೋಣ. ನಮ್ಮನ್ನು ವಿಶ್ವ ಮರೆಯದಿರಲಿ. ನಾವೂ ವಿಶ್ವನನ್ನೂ ವಿಶ್ವವನ್ನೂ ಎಂದಿಗೂ ಮರೆಯದೇ ಇರೋಣವೆಂದು ಆಶಿಸುತ್ತಾ ವಿರಮಿಸೋಣ.

(ಮುಂದುವರೆಯುತ್ತದೆ........)

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ವೇದವ್ಯಾಸರ ತಂದೆ ಯಾರು?

2) ಅರ್ಜುನ ಧರಿಸಿದ ಶಿಖಂಡಿ ರೂಪದ ಹೆಸರೇನು?

3) ಹಿಡಿಂಬೆಯ ಮಗ ಯಾರು?

4) ಮಹಾಭಾರತದಲ್ಲಿ ಬರುವ ಶಿವಾಂಶ'ರೂಪಗಳಾವುವು?

5) ಬಲರಾಮನ ತಾಯಿ ಯಾರು?

6) ಧೃತರಾಷ್ಟ್ರನ ಮಗಳಾರು?

7) ಭೀಷ್ಮನ ಮೊದಲ ಹೆಸರೇನು?

8) ಪಾಂಡುವಿನ ಇಬ್ಬರು ಹೆಂಡತಿಯಾರು?

9) ದ್ರೋಣರ ಹೆಂಡತಿ ಯಾರು?

10) ಶಮೀಕ ಮಹರ್ಷಿಯ ಮಗ ಯಾರು?

## ಪದ ಬಂಧದ ಉತ್ತರ

1) ಡಿ 2) ಕಿವಿರು 3) ಅಶೋಕ 4) ಆಸ್ಟ್ರೇಲಿಯಾ 5) ರಂಗನತಿಟ್ಟು 6) ಕೊಡಗು 7) ಕೀಟ 8) ಲಿಕುಚ ವಂಶ 9) ಪಿ.ಎಚ್. 7 ಕ್ಕಿಂತ ಕಡಿಮೆಯಿದ್ದಾಗ 10) ಮಾವು

| | | | | | |
|---|---|---|---|---|---|
| 1 ನೀ | 2 ಲ | 3 ಮೇ | 4 ಘ | 5 ಶ್ಯಾ | 6 ಮ |
| ರೆ | 7 ಗು | ರು | ನ | 8 ಮ | ರ |
| ತಂ | ಡಾ | ಏ | ವಾ | ಲ | 9 ಕ |
| 10 ದ | ಹ | ನ | 11 ದ | ಶ | 12 ತ್ತ |
| ನೀ | ತಾಂ | ಮ | 13 ಕಾ | ರೀ | ವ |
| ರು | ಗ | ಗ | ಯ | ರಿ | ರ್ಣ |

## ಎಡದಿಂದ ಬಲಕ್ಕೆ:

1) ನೇಗಿಲನ್ನು ಹೊಂದಿದ ಹಣ್ಣು (3)

3) ಯಮನೂ ಆಗಬಲ್ಲ ಸಮಯ (2)

4) ಒಳ್ಳೆಯ ಕೆಲಸದಲ್ಲಿ ಆಸಕ್ತಿಯುಳ್ಳವ (4)

7) ಊರಿಗೂ ಶತ್ರು (2)

8) ಎಲ್ಲರೂ ಬಯಸುವ ಒಳ್ಳೆ ಪ್ರಾಪ್ತಿ (3)

9) 'ದನದ ಮಗು' ತಿರುಗಿದೆ (2)

10) ಅಲಂಕಾರದಲ್ಲಿ ಭೂಮಿ ಸೇರಿದೆ (3)




ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ಇದಿಲ್ಲದೆ ಪದಾರ್ಥ ಖಾರವಾಗೋಲ್ಲ (5)

2) ದೇವಸಭೆಯ ಪರ್ಯಾಯ ಹೆಸರು (3)

3) ಹೇತುವಾಗುವ ಗಂಡಸು (6)

5) ಪೃಥಿವೀಯ ಅಡಿಭಾಗ (3)

6) 'ರಾಘವಾಂಕ' ಕವಿ ಇದಕ್ಕೆ ಪ್ರಸಿದ್ಧ (3)

9) ಇದೇನು! ಕನ್ನಡದ ರವಕೆಯ ತುಂಡೋ (2)